ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 11 ಗುರುವಾರ 2024

ಸಂಪುಟ: 44 | ಸಂಚಿಕೆ: 352 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದ್ವಿತೀಯ ಪಿಯು ಫಲಿತಾಂಶ

ಬಾಲಕಿಯರೇ ಮೇಲುಗೈ; ಶೇ.81.15 ತೇರ್ಗಡೆ

- ಪರೀಕ್ಷೆಗೆ ಹಾಜರಾಗಿದ್ದವರು 6,81,079; ತೇರ್ಗಡೆಯಾದವರು 5,52,690 ಮಂದಿ
- ದಕ್ಷಿಣ ಕನ್ನಡ ಪ್ರಥಮ; ಉಡುಪಿ ದ್ವಿತೀಯ; ವಿಜಯಪುರ ತೃತೀಯ; ಗದಗಕ್ಕೆ ಕೊನೆ ಸ್ಥಾನ; ಕೊಡಗು–5, ಹಾಸನ–13, ಚಾ.ನಗರ–14, ಮೈಸೂರು–17, ಮಂಡ್ಯ–24ನೇ ಸ್ಥಾನ
- ಬಾಲಕಿಯರು ಶೇ.84.87ರಷ್ಟು; ಬಾಲಕರು ಶೇ.76.98ರಷ್ಟು ತೇರ್ಗಡೆ

● ವಿಜ್ಞಾನ ವಿಭಾಗದಲ್ಲಿ ಹುಬ್ಬಳ್ಳಿಯ ವಿದ್ಯಾಲಕ್ಷ್ಮಿ(598) ಪ್ರಥಮ; ಉಡುಪಿಯ ವೈಷ್ಣವಿ, ಮೈಸೂರಿನ ಕೆ.ಹೆಚ್.ಊರ್ವಿಶ್(597) ದ್ವಿತೀಯ ● ವಾಣಿಜ್ಯ ವಿಭಾಗದಲ್ಲಿ ತುಮಕೂರು ಜ್ಞಾನವಿ(597) ಪ್ರಥಮ; ಶಿವಮೊಗ್ಗದ ಕುಮದ್ವತಿ, ಉಡುಪಿಯ ಹರ್ಷಿತ್ 594 ಎರಡನೇ ಸ್ಥಾನ ● ಕಲಾ ವಿಭಾಗದಲ್ಲಿ ಬೆಂಗಳೂರು ಡಿ.ಮೇಧಾ, ವಿಜಯಪುರದ ವೇದಾಂತ್, ಬಳ್ಳಾರಿಯ ಕವಿತಾ(596) ಪ್ರಥಮ; ಧಾರವಾಡದ ರವೀನಾ ಸೋಮಪ್ಪ ಲಮಾಣಿ(595) ದ್ವಿತೀಯ


ವಿದ್ಯಾಲಕ್ಷ್ಮಿ (ವಿಜ್ಞಾನ)


ಜ್ಞಾನವಿ (ವಾಣಿಜ್ಯ)


ಡಿ.ಮೇಧಾ (ಕಲಾ ವಿಭಾಗ)

ಬೆಂಗಳೂರು, ಏ.10(ಕೆಎಂಶಿ)– ಕಳೆದ ಮಾರ್ಚ್‌ನಲ್ಲಿ ನಡೆದ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡಿದ್ದು ಹೆಣ್ಣು ಮಕ್ಕಳೇ ಮುಂದಿದ್ದಾರೆ.

ರಾಜ್ಯದಲ್ಲಿ ಒಟ್ಟು ಶೇಕಡ 81.15 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು ಈ ಬಾರಿ 6,81,079 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅದರಲ್ಲಿ 5,52,690 ಮಂದಿ ತೇರ್ಗಡೆಯಾಗಿದ್ದಾರೆ.

ಬಾಲಕಿಯರು ಶೇಕಡ 84.87 ರಷ್ಟು ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದರೆ, ಬಾಲಕರು 76.98 ವಿದ್ಯಾರ್ಥಿಗಳು ತೇರ್ಗಡೆಗೊಳ್ಳುವ ಮೂಲಕ ಈ ಬಾರಿಯೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ.

1,53,370 ವಿದ್ಯಾರ್ಥಿಗಳು ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿದ್ದರೆ, ಶೇಕಡ 85ಕ್ಕಿಂತ ಕಡಿಮೆ ಹಾಗೂ ಶೇಕಡ 60ಕ್ಕಿಂತ ಹೆಚ್ಚು ಅಂಕ ಪಡೆದವರು 2,89,733, ಶೇಕಡ 60ಕ್ಕಿಂತ ಕಡಿಮೆ ಹಾಗೂ ಶೇಕಡ 50ಕ್ಕಿಂತ ಹೆಚ್ಚು 72,098, ಶೇಕಡ 50ಕ್ಕಿಂತ ಕಡಿಮೆ ಪಡೆದವರು 37,489 ವಿದ್ಯಾರ್ಥಿಗಳು.

ವಿಜ್ಞಾನ ವಿಭಾಗದಲ್ಲಿ 89.96 ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರೆ, ವಾಣಿಜ್ಯ ವಿಭಾಗದಲ್ಲಿ 80.94 ರಷ್ಟು, ಕಲಾ ವಿಭಾಗದಲ್ಲಿ 68.36 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಎಂದಿನಂತೆ ದಕ್ಷಿಣ ಕನ್ನಡ ಜಿಲ್ಲೆ ಶೇಕಡ 97.37 ರಷ್ಟು ವಿದ್ಯಾರ್ಥಿಗಳು ಸಾಧನೆ ಮಾಡಿ ಮೊದಲ ಸ್ಥಾನದಲ್ಲಿದ್ದು, ಗದಗ ಕೊನೆಯ ಸ್ಥಾನಕ್ಕೆ ನಿಂತಿದೆ. ಉಡುಪಿ ಶೇಕಡ 96.80, ವಿಜಯಪುರ ಶೇಕಡ 94.89 ತೇರ್ಗಡೆಗೊಂಡು ನಂತರದ ಸ್ಥಾನ ● 10ನೇ ಪುಟಕ್ಕೆ

ಸಿಇಟಿಗೆ ಅರ್ಜಿ ಸಲ್ಲಿಸಲು ಮತ್ತೊಂದು ಅವಕಾಶ

● ನಾಳೆ ಸಂಜೆ 5 ಗಂಟೆಯೊಳಗೆ 600 ರೂ. ಡಿಡಿಯೊಂದಿಗೆ ಖುದ್ದು ಅರ್ಜಿ ಸಲ್ಲಿಸಬಹುದು ● ನೀಟ್ ಆಯ್ಕೆ ಮಾಡಿಕೊಂಡವರು ಸಿಇಟಿ ಬರೆಯುವ ಅವಕಾಶ

ಬೆಂಗಳೂರು,ಏ.10(ಕೆಎಂಶಿ)– ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸಿಇಟಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸದವರಿಗೆ ಮತ್ತೊಂದು ಅವಕಾಶ ಮಾಡಿಕೊಡಲಾಗಿದೆ.

ಇಂತಹ ಅಭ್ಯರ್ಥಿಗಳು ಸಿಇಟಿ ಪರೀಕ್ಷಾ ಕೇಂದ್ರ ನಿಯೋಜಿಸಿದ ಕೇಂದ್ರಗಳಲ್ಲೇ ಪರೀಕ್ಷೆ ಬರೆಯುವುದು ಕಡ್ಡಾಯ. ಕೇವಲ ನೀಟ್ ಆಯ್ಕೆ ಮಾಡಿಕೊಂಡಂತಹವರು ಈಗ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈ ತಿಂಗಳ 18 ಮತ್ತು 19ರಂದು ಸಿಇಟಿ ಪರೀಕ್ಷೆಗೆ ನಡೆಯಲಿದೆ. ಇದುವರೆಗೂ ಶುಲ್ಕ ಪಾವತಿಸದ ಅಭ್ಯರ್ಥಿಗಳು ಈ ಈ ತಿಂಗಳ 12ರ ಸಂಜೆ 5 ಗಂಟೆವರೆಗೆ ಅವಕಾಶ ನೀಡಲಾಗಿದೆ. 'ಕಾರ್ಯ ನಿರ್ವಾಹಕ ನಿರ್ದೇಶಕರು, ● 10ನೇ ಪುಟಕ್ಕೆ


ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದ ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಪಿಯು ಕಾಲೇಜಿನ ವಿದ್ಯಾರ್ಥಿ ಕೆ.ಹೆಚ್.ಊರ್ವಿಶ್ ಅವರನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಆಶೀರ್ವದಿಸಿದರು. ಚಿತ್ರದಲ್ಲಿ ಕಾಲೇಜಿನ ಆಡಳಿತಾಧಿಕಾರಿ ಡಾ.ಆರ್.ಎಸ್.ನರಸೇಗೌಡ, ಪೋಷಕರಾದ ಡಾ. ಹರೀಶ್ ಪ್ರಶಾಂತ್, ಡಾ.ಸವಿತಾ ಪ್ರಶಾಂತ್ ಅವರನ್ನು ಕಾಣಬಹುದು.



ವಿಜ್ಞಾನ ವಿಭಾಗದಲ್ಲಿ 594 ಅಂಕ ಪಡೆದು ರಾಜ್ಯದಲ್ಲಿ 5ನೇ ಸ್ಥಾನ ಪಡೆದ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ರೇಯಾ ಗಣೇಶ್ ಅಯ್ಯರ್ ಅವರನ್ನು ಕಾಲೇಜಿನ ಪ್ರಾಂಶುಪಾಲ ಪಿ.ಸೋಮಣ್ಣ ಹಾಗೂ ಬೋಧಕ ವರ್ಗ ಅಭಿನಂದಿಸಿತು.

“ ಉಪನ್ಯಾಸಕರು ಹಾಗೂ ಪೋಷಕರ ಪ್ರೋತ್ಸಾಹದಿಂದ ಉತ್ತಮ ಅಂಕಗಳಿಸಲು ಸಾಧ್ಯವಾಗಿದೆ. ಇದರೊಂದಿಗೆ ಮನೆಯಲ್ಲಿ ಪೋಷಕರು ನೀಡಿದ ಬೆಂಬಲವೂ ಕಾರಣವಾಗಿದೆ. ಅಂದಿನ ಪಾಠವನ್ನು ಅಂದೇ ಅಭ್ಯಾಸ ಮಾಡಿದ್ದರಿಂದ ಹೆಚ್ಚು ಕಷ್ಟವಾಗಲಿಲ್ಲ. ಭಾರತೀಯ ತಾಂತ್ರಿಕ ಸಂಸ್ಥೆಯಲ್ಲಿ (ಐಐಟಿ) ಎಂಜಿನಿಯರಿಂಗ್ ಮಾಡಿ, ಇಸ್ರೋ ಸೇರುವ ಕನಸಿದೆ.

– ಕೆ.ಹೆಚ್.ಊರ್ವಿಶ್ ಪ್ರಶಾಂತ್, ಜಿಲ್ಲೆಯ ಟಾಪರ್

“ ನಾನು ಮಹಾರಾಣಿ ಪಿಯು ಕಾಲೇಜು ವಿದ್ಯಾರ್ಥಿ. ಉಪನ್ಯಾಸಕರು ಹೇಳಿಕೊಟ್ಟ ಪಾಠವನ್ನು ಮನನ ಮಾಡಿಕೊಳ್ಳುತ್ತಿದ್ದೆ. ಕಾಲೇಜು ಹೊರತುಪಡಿಸಿದರೆ ಎಲ್ಲಿಯೂ ಟ್ಯೂಷನ್‌ಗೆ ಸೇರಿಲ್ಲ. ಪ್ರತಿದಿನ ರಾತ್ರಿ 12 ಗಂಟೆಯಿಂದ ಓದಲು ಆರಂಭಿಸಿ, ಮುಂಜಾನೆ 2 ಅಥವಾ 3 ಗಂಟೆವರೆಗೂ ಓದುತ್ತಿದ್ದೆ. ಇಂದು ವಿಜ್ಞಾನ ವಿಷಯದಲ್ಲಿ 594 ಅಂಕ ಗಳಿಸಿದ್ದು ಸಂತೋಷವಾಗಿದೆ. ನನ್ನ ಈ ಸಾಧನೆಗೆ ಕಾಲೇಜಿನ ಉಪನ್ಯಾಸಕರು ಕಾರಣ.

– ಶ್ರೇಯಾ ಗಣೇಶ್ ಅಯ್ಯರ್, ಮಹಾರಾಣಿ ಪಿಯು ವಿದ್ಯಾರ್ಥಿನಿ

ಮೈಸೂರಿನ ಊರ್ವಿಶ್ ರಾಜ್ಯಕ್ಕೆ ದ್ವಿತೀಯ, ಶ್ರೇಯಾ ಗಣೇಶ್ ಐದನೇ ಸ್ಥಾನ

ಮೈಸೂರು, ಏ.10(ಎಂಟಿವೈ)– ದ್ವಿತೀಯ ಪಿಯುಸಿಯಲ್ಲಿ ಪ್ರತಿ ವರ್ಷ ಒಂದಲ್ಲ ಒಂದು ವಿಭಾಗದಲ್ಲಿ ಪಾರುಪತ್ಯ ಮೆರೆಯುತ್ತಿದ್ದ ಮೈಸೂರಿನ ವಿದ್ಯಾರ್ಥಿಗಳು ಈ ಬಾರಿ ಬರೀ ದ್ವಿತೀಯ ಸ್ಥಾನ ಹಂಚಿಕೊಳ್ಳುವ ಮೂಲಕ ತೃಪ್ತಿಪಟ್ಟುಕೊಂಡಿದ್ದಾರೆ.

ಮೈಸೂರಿನ ವಿದ್ಯಾರ್ಥಿಗಳು ಈ ಬಾರಿ ಟಾಪರ್ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಆದರೂ, ಅಂಕ ಗಳಿಕೆಯಲ್ಲಿ ಮೈಸೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ.

ರಾಜ್ಯಕ್ಕೆ ದ್ವಿತೀಯ: ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ಪಿಯು ಕಾಲೇಜಿನ ವಿದ್ಯಾರ್ಥಿ ಕೆ.ಹೆಚ್. ಊರ್ವಿಶ್ ಹಾಗೂ ಮೇಟಗಳ್ಳಿಯ ಆರ್‌ವಿಪಿಬಿ ● 10ನೇ ಪುಟಕ್ಕೆ

ದ್ವಿತೀಯ ಪಿಯು ಪರೀಕ್ಷೆ–2ರ ವೇಳಾಪಟ್ಟಿ ಪ್ರಕಟ

ಬೆಂಗಳೂರು, ಏ.10– ದ್ವಿತೀಯ ಪಿಯುಸಿ ಪರೀಕ್ಷೆ–2ರ ವೇಳಾಪಟ್ಟಿಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಇಂದು ಪ್ರಕಟಿಸಿದೆ. ಏ.29ರಿಂದ ಮೇ 16ರ ವರೆಗೆ ಪರೀಕ್ಷೆ ಆಯೋಜಿಸಲಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.



ವೇಳಾಪಟ್ಟಿ: ಏಪ್ರಿಲ್ 29ರಂದು ಕನ್ನಡ, ಅರೇಬಿಕ್, ಏಪ್ರಿಲ್ 30ರಂದು ಇತಿಹಾಸ, ಭೌತಶಾಸ್ತ್ರ, ಮೇ 2ರಂದು ಇಂಗ್ಲಿಷ್, ಮೇ 3ರಂದು ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ, ಮೇ 4ರಂದು ಭೂಗೋಳಶಾಸ್ತ್ರ, ಮನಃಶಾಸ್ತ್ರ, ರಸಾಯನಶಾಸ್ತ್ರ, ಗೃಹ ವಿಜ್ಞಾನ, ಮೂಲ ಗಣಿತ, ಮೇ 9ರಂದು ಗಣಿತ, ಶಿಕ್ಷಣಶಾಸ್ತ್ರ, ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, ಮೇ 11ರಂದು ಭೂಗೋಳಶಾಸ್ತ್ರ, ಜೀವಶಾಸ್ತ್ರ, ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, ಮೇ 13ರಂದು ಅರ್ಥಶಾಸ್ತ್ರ, ● 10ನೇ ಪುಟಕ್ಕೆ

ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಇಂದು ಬುಧವಾರ ಪ್ರಕಟಗೊಂಡಿದ್ದು, ವಿದ್ಯಾರ್ಥಿಗಳಿಗೆ ತಮಗೆ ಬಂದ ಅಂಕಗಳ ಬಗ್ಗೆ ಸಂದೇಹಗಳು, ಅಸಮಾಧಾನಗಳಿದ್ದಲ್ಲಿ ಉತ್ತರ ಪತ್ರಿಕೆಗಳ ಸ್ಕ್ಯಾನ್ಡ್ ಪ್ರತಿಗಾಗಿ, ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ ಎಂದು ಮೌಲ್ಯಮಾಪನ ಮಂಡಳಿ ಹೇಳಿದೆ.


ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿಯನ್ನು ಪಡೆಯಲು ಏಪ್ರಿಲ್ 16ರ ತನಕ ಅರ್ಜಿ ಸಲ್ಲಿಸಬಹುದು. ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಲು ಏಪ್ರಿಲ್ 19ರ ತನಕ, ಮತ್ತು ಮರು ಮೌಲ್ಯಮಾಪನ ಹಾಗೂ ಮರು ಎಣಿಕೆಗೆ ಏಪ್ರಿಲ್ 14ರಿಂದ 20ರ ವರೆಗೆ ಅವಕಾಶವಿದೆ. ದ್ವಿತೀಯ ಪಿಯುಸಿ ಪರೀಕ್ಷೆ 1ರ ● 10ನೇ ಪುಟಕ್ಕೆ

ಎಂಆರ್‌ಸಿ ಸ್ಟೀವರ್ಡ್ ಕೆ.ಜಿ.ಅನಂತರಾಜ್ ಅರಸ್ ವಿಧಿವಶ

ಮೈಸೂರು, ಏ.10(ಬಿಎಲ್‌ಯು)– ಮೈಸೂರು ರೇಸ್ ಕ್ಲಬ್ ಲಿಮಿಟೆಡ್‌ನ ಸ್ಟೀವರ್ಡ್ ಹಾಗೂ ಮಾಜಿ ಕಾರ್ಯದರ್ಶಿ ಕೆ.ಜಿ.ಅನಂತರಾಜ್ ಅರಸ್ ಇಂದು ವಿಧಿವಶರಾದರು.

ಮೃತರು ಪತ್ನಿ ಸಾಧ್ವಿದೇವಿ ಹಾಗೂ ಪುತ್ರಿ ಡಾ.ಕುಶಾಲಿನಿ ಹಾಗೂ ಅಪಾರ ಬಂಧು ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ನಾಳೆ (ಏಪ್ರಿಲ್ 11) ಬೆಳಿಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಅರಸು ಸ್ಮಶಾನದಲ್ಲಿ ಅನಂತರಾಜ್ ಅರಸ್ ಅವರ ಅಂತ್ಯಕ್ರಿಯೆ ನೆರವೇರಲಿದೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿ ವಾಸವಾಗಿದ್ದ ಅನಂತರಾಜ್ ಅರಸ್ ಅವರು ಬುಧವಾರ ಬೆಳಗ್ಗೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ರಾಯಲ್ ಇಂಗ್ಲಿಷ್ ಸ್ಕೂಲ್‌ನಲ್ಲಿ ಮೈಸೂರು ರಾಜವಂಶಸ್ಥ ಶ್ರೀಕಂಠದತ್ತ


ಕೆ.ಜಿ.ಅನಂತರಾಜ್ ಅರಸ್

ನರಸಿಂಹರಾಜ ಒಡೆಯರ್ ಅವರ ಸಹಪಾಠಿಯಾಗಿದ್ದ ಅನಂತರಾಜ್ ಅರಸ್, ಮೈಸೂರು ಅರಮನೆಯ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು. ಹೆಚ್‌ಹೆಚ್‌ಎಸ್‌ಎನ್‌ಡಬ್ಲ್ಯೂ ಫೌಂಡೇಷನ್‌ನ ಹಾಲಿ ಖಜಾಂಚಿಯಾಗಿ ಕೂಡ ಸೇವೆ ಸಲ್ಲಿಸಿದ್ದ ಅನಂತರಾಜ್ ಅರಸ್, ರೋಟರಿ ಮೈಸೂರು ● 10ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿ ಚೆಕ್‌ಪೋಸ್ಟ್‌ನಲ್ಲಿ ಲಕ್ಷ ರೂ. ಜಪ್ತಿ

ಮೈಸೂರು,ಏ. 10– ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ವೃತ್ತದ ಬಳಿ ಇರುವ ಚುನಾವಣಾ ಚೆಕ್ ಪೋಸ್ಟ್‌ನಲ್ಲಿ ಬುಧವಾರ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ಲಕ್ಷ ರೂಗಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆ ನಡೆಯುತ್ತಿದ್ದ ತಪಾಸಣೆ ವೇಳೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸುರೇಶ್‌ಬಾಬು ಎಂಬುವವರು ಕಾರಿನಲ್ಲಿ ಸಾಗಿಸುತ್ತಿದ್ದ ಲಕ್ಷ ರೂ. ನಗದು ಪತ್ತೆಯಾಗಿದೆ. ವ್ಯವಸಾಯದ ವಿಚಾರಕ್ಕೆ ಹಣ ಸಾಗಿಸುತ್ತಿದ್ದುದಾಗಿ ಸುರೇಶ್ ಬಾಬು ಹೇಳಿಕೆ ನೀಡಿದ್ದಾರೆ. ಆದರೆ ಈ ಸಂಬಂಧ ಯಾವುದೇ ದಾಖಲೆ ಇಲ್ಲದ ಕಾರಣ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ತಹಸೀಲ್ದಾರ್ ನಿರ್ದೇಶನದಂತೆ ನೋಡಲ್ ಅಧಿಕಾರಿಗಳಾದ ಎಸ್.ವಿಶ್ವನಾಥ್ ಲಕ್ಷ ರೂ. ವಶಪಡಿಸಿಕೊಂಡಿರುವುದಾಗಿ ತಿಳಿಸಿದರು.

ಏ.14ಕ್ಕೆ ಮೈಸೂರಿಗೆ ಮೋದಿ

ಮಹಾರಾಜ ಕಾಲೇಜು ಮೈದಾನದಲ್ಲಿ ಸಮಾವೇಶ

ಮೈಸೂರು, ಏ. 10– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಏಪ್ರಿಲ್ 14ರಂದು ಮೈಸೂರು ಮತ್ತು ಮಂಗಳೂರು ಪ್ರವಾಸ ಕೈಗೊಂಡಿದ್ದಾರೆ.

ಅಂದು ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಬೃಹತ್ ಚುನಾವಣಾ ಪ್ರಚಾರ ಸಮಾವೇಶ ಏರ್ಪಡಿಸಲಾಗಿದ್ದು, ಈ ಸಮಾವೇಶದ ನಂತರ ಮಂಗಳೂರಿಗೆ ತೆರಳುವ ಅವರು, ಅಲ್ಲಿ ರೋಡ್ ಶೋ ನಡೆಸಲಿದ್ದಾರೆ. ಈ ಹಿಂದೆ ಏಪ್ರಿಲ್ 14ರಂದು ಚಿಕ್ಕಬಳ್ಳಾಪುರದಲ್ಲಿ ಸಮಾವೇಶ ಮತ್ತು ಬೆಂಗಳೂರಿನಲ್ಲಿ ರೋಡ್ ಶೋ ನಿಗದಿ ಆಗಿತ್ತು. ಆದರೆ, ಆ ಕಾರ್ಯಕ್ರಮಗಳನ್ನು ರದ್ದುಪಡಿಸಿರುವ


ಮೋದಿಯವರು ಮೈಸೂರು ಮತ್ತು ಮಂಗಳೂರು ಪ್ರವಾಸ ಕೈಗೊಂಡಿದ್ದಾರೆ.

ಪ್ರಧಾನಿ ಮೋದಿ ಅವರ ಆಡಳಿತಾವಧಿಯಲ್ಲಿ ವೈದ್ಯಕೀಯ ಕ್ಷೇತ್ರ ಬಹಳಷ್ಟು ಸುಧಾರಿಸಿದೆ

ಬೆಂಗಳೂರು ಗ್ರಾಮಾಂತರ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್.ಮಂಜುನಾಥ್ ಶ್ಲಾಘನೆ


● 1.70 ಲಕ್ಷ ರೂ. ಇದ್ದ ಸ್ಟೆಂಟ್ ಈಗ ಕೇವಲ 30 ಸಾವಿರಕ್ಕೆ ಲಭ್ಯವಿದೆ ● ಕೋವಿಡ್ ನಿರ್ವಹಣೆಯಂತೂ ವಿಶ್ವದ ಪ್ರಶಂಸೆಗೆ ಪಾತ್ರವಾಗಿದೆ ● ಕರ್ನಾಟಕದಲ್ಲಿ 1120 ಜನೌಷಧಿ ಕೇಂದ್ರಗಳಿದ್ದು ಸಾವಿರ ರೂ. ಔಷಧಿ 100ರಿಂದ 150 ರೂ.ಗೆ ಸಿಗುತ್ತಿದೆ

ಬೆಂಗಳೂರು,ಏ.10(ಕೆಎಂಶಿ)– ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಬಿಜೆಪಿ ಆಡಳಿತದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಹಲವಾರು ಐತಿಹಾಸಿಕ ಬದಲಾವಣೆಗಳು ಆಗಿವೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಬಿಜೆಪಿ ಚುನಾವಣಾ ಮಾಧ್ಯಮ ಕೇಂದ್ರದಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಸ್ವಾತಂತ್ರ್ಯ ಬಂದಾಗ ಜೀವಿತಾವಧಿ 37 ವರ್ಷ ಇದ್ದುದು ಈಗ ಸುಮಾರು 70 ವರ್ಷಕ್ಕೆ ಬಂದಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳಾಗಿವೆ. ಚಿಕಿತ್ಸಾ ವ್ಯವಸ್ಥೆ ಕೂಡ ಚೆನ್ನಾಗಿ ಮುಂದುವರೆಯುತ್ತಿದೆ ಎಂದು ವಿಶ್ಲೇಷಿಸಿದರು.

ಮೋದಿಯವರು ಆಡಳಿತ ಆರಂಭಿಸುವ ಮೊದಲು ದೇಶದಲ್ಲಿ 5 ಏಮ್ಸ್ (ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆ) ಇತ್ತು. ಇವತ್ತು 23 ಏಮ್ಸ್ ಇದೆ. ಭಾರತದಲ್ಲಿ ಹಾರ್ಟ್ ಅಟ್ಯಾಕ್, ಡಯಾಬಿಟಿಸ್, ಹೈ ಬ್ಲಡ್ ಪ್ರೆಶರ್, ಸ್ಟ್ರೋಕ್, ಕ್ಯಾನ್ಸರ್, ಸ್ಕ್ರೀನ್ ಅಡಿಕ್ಷನ್‌ನಂಥ ಲೈಫ್ ಸ್ಟೈಲ್ ಡಿಸೀಸ್ ಹೆಚ್ಚಾಗಿದೆ. 40 ವರ್ಷಕ್ಕಿಂತ ಕಡಿಮೆ ವಯಸ್ಸಿನವರೂ ಈಗ ಹೃದಯಾಘಾತಕ್ಕೆ ಒಳಗಾಗುತ್ತಿ ದ್ದಾರೆ. ಹಾರ್ಟ್ ಅಟ್ಯಾಕ್ ತಡೆಯಲು ಆಂಜಿಯೋಪ್ಲಾಸ್ಟಿ ಅಥವಾ ಸ್ಟೆಂಟ್ ಬಳಸುತ್ತಾರೆ. ಮೋದಿಯವರು ಆಡಳಿತಕ್ಕೆ ಬರುವ ಮೊದಲು ಸ್ಟೆಂಟ್ ಬೆಲೆ 1 ಲಕ್ಷ 70 ಸಾವಿರ ಇತ್ತು. ಅದನ್ನು 30 ಸಾವಿರಕ್ಕೆ ಇಳಿಸಿ ದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದಲ್ಲಿ ಪ್ರತಿ ವರ್ಷ 30 ಲಕ್ಷ ಜನರಿಗೆ ಹೃದಯಾಘಾತ ಆಗುತ್ತಿದೆ. ಹಾರ್ಟ್ ಅಟ್ಯಾಕ್ ಕೇವಲ ಶ್ರೀಮಂತರ ಕಾಯಿಲೆಯಲ್ಲ. ಅದು ಬಡವರ ಕಾಯಿಲೆಯೂ ಆಗಿದ್ದು, ಸ್ಟೆಂಟ್ ದರ ಇಳಿಸಿದ್ದರಿಂದ ಬಹಳಷ್ಟು ಜನರಿಗೆ ಪ್ರಯೋಜನ ಆಗಿದೆ. ನಮ್ಮ ದೇಶದಲ್ಲಿ 14 ಕೋಟಿ ಜನರು ಸಕ್ಕರೆ ಕಾಯಿಲೆಯಿಂದ (ಡಯಾಬಿಟಿಸ್) ಬಳಲುತ್ತಿದ್ದಾರೆ. ಇನ್ನೂ 14 ಕೋಟಿ ಜನರು ಡಯಾಬಿಟಿಸ್ (ಪ್ರಿಡಯಾಬಿಟಿಕ್) ಸನಿಹದಲ್ಲಿದ್ದಾರೆ ಎಂದು ವಿವರಿಸಿದರು. ಹೈ ಬಿಪಿ, ಡಯಾಬಿಟಿಸ್, ಹಾರ್ಟ್ ಅಟ್ಯಾಕ್ ಉಳ್ಳವರು ಜೀವಿತಾವಧಿಯಿಡೀ ಔಷಧಿ ತೆಗೆದುಕೊಳ್ಳಬೇಕು. ಈ ಕಾಯಿಲೆಗಳು ಬಡವರಲ್ಲೂ ಇವೆ. ಕೈಗೆಟಕುವ ದರದಲ್ಲಿ ಔಷಧಿ ಸಿಗಬೇಕೆಂಬ ದೃಷ್ಟಿಯಿಂದ ಪ್ರಧಾನಮಂತ್ರಿ ಜನೌಷಧಿ ಕೇಂದ್ರಗಳನ್ನು ತೆರೆದಿದ್ದಾರೆ.



ಕರ್ನಾಟಕದಲ್ಲಿ 1120 ಜನೌಷಧಿ ಕೇಂದ್ರಗಳಿವೆ. 1 ಸಾವಿರ ದರದ ಔಷಧಿ 100ರಿಂದ 150 ರೂಪಾಯಿಗೆ ಸಿಗುತ್ತಿದೆ ಎಂದು ಮಂಜುನಾಥ್ ತಿಳಿಸಿದರು. ಕೋವಿಡ್ ಬಿಕ್ಕಟ್ಟನ್ನು ಪ್ರಧಾನಿ ನರೇಂದ್ರ ಮೋದಿಯವರು ನಿಭಾಯಿಸಿದ ರೀತಿಯನ್ನು ವಿಶ್ವ ಆರೋಗ್ಯ ಸಂಸ್ಥೆಯೂ ಶ್ಲಾಘಿಸಿದೆ. ಅಮೆರಿಕ, ಜಪಾನ್, ಚೀನಾ, ಯುರೋಪ್ ರಾಷ್ಟ್ರಗಳಿಗಿಂತ ಚೆನ್ನಾಗಿ ನಾವು ಕೋವಿಡ್ ನಿಭಾಯಿಸಿದ್ದೇವೆ. ರಾಷ್ಟ್ರೀಯ–ರಾಜ್ಯ ಟಾಸ್ಕ್‌ಫೋರ್ಸ್ ತಂಡ ರಚಿಸಿ, ನಿರಂತರ ವರ್ಚುಯಲ್ ಸಭೆಗಳನ್ನು ನಡೆಸಿ ಅವರು ಇದನ್ನು ನಿಭಾಯಿಸಿದರು. 270 ಕೋಟಿ ವ್ಯಾಕ್ಸಿನ್ ಡೋಸ್ ಕೊಡಲಾಯಿತು ಎಂದು ಹೇಳಿದರು. ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರದ ಕ್ರಮಗಳಿಂದ ವೆಂಟಿಲೇಟರ್ ಉತ್ಪಾದನೆ, ರೋಗಿಗಳ ಚಿಕಿತ್ಸೆಗೆ ಬೇಕಾದ ಆಮ್ಲಜನಕ ಉತ್ಪಾದನೆ ಸೇರಿ ಆರೋಗ್ಯ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಸಾಧ್ಯವಾಗಿದೆ. ಇವತ್ತು ನಮ್ಮ ದೇಶದಲ್ಲಿ 1 ಲಕ್ಷಕ್ಕೂ ಹೆಚ್ಚು ಐಸಿಯು ಬೆಡ್ ಲಭ್ಯವಿದೆ ಎಂದು ತಿಳಿಸಿದರು.

ಬಿಪಿಎಲ್ ರೋಗಿಗಳಿಗೆ ನೆರವಾಗುವ ಉಚಿತ ಚಿಕಿತ್ಸೆ ಕೊಡುವ ಆಯುಷ್ಮಾನ್ ಭಾರತ್ ಸ್ಕೀಮಿನಿಂದ ಕರ್ನಾಟಕ ರಾಜ್ಯದಲ್ಲಿ ಕಳೆದ ಆರೇಳು ವರ್ಷಗಳಲ್ಲಿ 1.32 ಕೋಟಿ ಜನರು ಚಿಕಿತ್ಸೆ ಪಡೆದಿದ್ದಾರೆ. ಇದೊಂದು ಉತ್ತಮ ಯೋಜನೆ ಎಂದು ತಿಳಿಸಿದರು. 2014ಕ್ಕಿಂತ ಮೊದಲು ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ಇತ್ತು. ಈಗ 780 ವೈದ್ಯಕೀಯ ಕಾಲೇಜುಗಳಿವೆ. ಎಂಬಿಬಿಎಸ್ ಸೀಟುಗಳ ಸಂಖ್ಯೆ 51 ಸಾವಿರದಿಂದ 1 ಲಕ್ಷ 20 ಸಾವಿರಕ್ಕೆ ಏರಿಕೆಯಾಗಿದೆ ಎಂದು ಡಾ.ಸಿ.ಎನ್. ಮಂಜುನಾಥ್ ಮಾಹಿತಿ ನೀಡಿದರು.

ವೈದ್ಯಕೀಯ ಸ್ನಾತಕೋತ್ತರ ಸೀಟುಗಳ ಸಂಖ್ಯೆಯೂ 30 ಸಾವಿರದಿಂದ 95 ಸಾವಿರಕ್ಕೆ ಏರಿದೆ. ಎಲ್ಲ ಜಿಲ್ಲೆಯಲ್ಲೂ ವೈದ್ಯಕೀಯ ಕಾಲೇಜು ಇರುವುದರಿಂದ ರೋಗಿಗಳಿಗೆ ಸಮರ್ಪಕ, ಸಕಾಲಿಕ ಚಿಕಿತ್ಸೆ ಸಿಗುತ್ತಿದೆ. ಇದು ಅತ್ಯಂತ ಪ್ರಮುಖವಾದುದು ಎಂದರು. ಕೇಂದ್ರ ಸರ್ಕಾರದ ನ್ಯಾಷನಲ್ ಹೆಲ್ತ್ ಮಿಷನ್‌ನಡಿ ಹಾರ್ಟ್ ಅಟ್ಯಾಕ್ ಆದವರಿಗೆ ಗೋಲ್ಡನ್ ಅವರ್‌ನಲ್ಲಿ ತಾಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಲಾಗುತ್ತಿದೆ ಎಂದು ಹೇಳಿದರು.

ನ್ಯಾಚುರೋಪತಿ ಮತ್ತು ಯೋಗಕ್ಕೆ ಸಂಬಂಧಿಸಿದ ಆರೋಗ್ಯ ಟೂರಿಸಂ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆ ಸಿಗುತ್ತಿದೆ. ಇದಕ್ಕಾಗಿ ಭಾರತಕ್ಕೆ ಭೇಟಿ ಕೊಡುವ ವಿದೇಶೀಯರ ಸಂಖ್ಯೆಯೂ ಹೆಚ್ಚಾಗಿದೆ ಎಂದರು.

ಬಿಜೆಪಿ ಅಭ್ಯರ್ಥಿ ಯದುವೀರ್ ಗೆಲುವು ನಿಶ್ಚಿತ

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ವಿಶ್ವಾಸ



ಮೈಸೂರು: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಈ ಚುನಾವಣೆಯಲ್ಲಿ ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸುವುದು ಶತಸಿದ್ಧ ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಹಾಗೂ ಮುಖಂಡರಾದ ಎನ್. ಅರುಣ್ ಕುಮಾರ್ ಗೌಡ ಹೇಳಿದರು.

ಚಾಮುಂಡೇಶ್ವರಿ ಕ್ಷೇತ್ರದ ಬೀರಿಹುಂಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ರೂಪ ನಗರ,ದಾಸನ ಕೊಪ್ಪಲು, ಮರಟಿ ಕ್ಯಾತನಹಳ್ಳಿ, ಮಾದಹಳ್ಳಿ, ಬೀರಿಹುಂಡಿ, ಮರಯನ ಗುಂಡಿ, ಡಿ.ಎಂ.ಜಿ.ಹಳ್ಳಿ ಮತ್ತಿತರ ಗ್ರಾಮಗಳ ಬೂತ್ ಮಟ್ಟದ ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿ, ರೂಪನಗರದಲ್ಲಿ ಮನೆ ಮನೆ ಪ್ರಚಾರ ಮಾಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಬಾರಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ರಾಜಮನೆತನದ ಯದುವೀರ್ ಅವರ ಗೆಲುವು ನಿಶ್ಚಿತವಾಗಿದೆ. ಮೈಸೂರು ಸಂಸ್ಥಾನದ ರಾಜಮನೆತನ ನೀಡಿರುವ ಕೊಡುಗೆ ಅಪಾರವಾಗಿದ್ದು, ಈ ಭಾಗದ ಪ್ರಜೆಗಳ ಉತ್ತಮ ಜೀವನ ನಿರ್ವಹಣೆಗೆ ಅವರು ಕಾರಣೀಭೂತರಾಗಿದ್ದಾರೆ ಎಂದು ಹೇಳಿದರು.

ಬೂತ್ ಮಟ್ಟದಲ್ಲಿ ಕಾರ್ಯಕರ್ತರು ಪ್ರತಿ ಮನೆಮನೆಗೆ ಭೇಟಿ ನೀಡಿ ಅಭ್ಯರ್ಥಿ ಪರ ಮತಯಾಚನೆ ಮಾಡಬೇಕು ಎಂದು ಮನವಿ ಮಾಡಿದರು. ಇಡೀ ದೇಶವೇ ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಮಂತ್ರಿಯನ್ನಾಗಿ ನೋಡಲು ಕಾತುರದಲ್ಲಿದೆ. ಮತ್ತೊಮ್ಮೆ ಮೈಸೂರು– ಕೊಡಗು ಕ್ಷೇತ್ರವು ಬಿಜೆಪಿಯ ಪಾಲಾಗಲಿದೆ ಎಂದು ಭವಿಷ್ಯ ನುಡಿದರು.

ಮನೆ ಮನೆ ಪ್ರಚಾರಕ್ಕೆ ಚಾಲನೆ ನೀಡಿದ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಪೈಲ್ವಾನ್ ಟಿ.ರವಿ ಮಾತನಾಡಿ, ನಮ್ಮ ಅಭ್ಯರ್ಥಿ ಪರ ಒಳ್ಳೆಯ ವಾತಾವರಣವಿದ್ದು ಕಾರ್ಯಕರ್ತರು ಕೈಕಟ್ಟಿ ಕೂರದೇ ಶ್ರಮವಹಿಸಿ ಮನೆಮನೆ ಪ್ರಚಾರ ಮಾಡುವ ಮೂಲಕ ಮತದಾರರನ್ನು ತಲುಪಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಂದೀಶ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಹೇಮಂತ್ ಕುಮಾರ್,ಬೀರಿಹುಂಡಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಮಾದಳ್ಳಿ ನಂಜುಂಡಸ್ವಾಮಿ, ಪ್ರಧಾನ ಕಾರ್ಯಧರ್ಶಿ ರಾಘವೇಂದ್ರ,ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾಗೌಡ, ಪ್ರಧಾನ ಕಾರ್ಯದರ್ಶಿ ಯಮುನಾ, ಸ್ಥಳೀಯ ಮುಖಂಡರಾದ ಚಂದ್ರಶೇಖರ್ ಪಟೇಲ್, ಮಾಯಾ ಶಾನುಬಾಗ್, ಕೆಂಚಪ್ಪ ಕೃಷ್ಣಮಹಾದೇವ, ಸಿದ್ದೇಗೌಡ,ಕೃಷ್ಣವೇಣಿ,ಮಲ್ಲೇಶ್, ನಾಗರಾಜ್ ಮತ್ತಿತರರಿದ್ದರು.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ




ಮೈಸೂರು, ಏ.10– ಮೈಸೂರಿನ ವಿಜಯನಗರ ಒಂದನೇ ಹಂತದ ನಿವಾಸಿ, ಲರ್ನರ್ಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿ ಅಭಿಷೇಕ್ ಕೆ.ಕುಮಾರ್ ದ್ವಿತೀಯ ಪಿಯುಸಿಯಲ್ಲಿ 600ಕ್ಕೆ 549 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರು ಎಂ.ಕೃಷ್ಣೇಗೌಡ ಮತ್ತು ಸರಸ್ವತಿ ದಂಪತಿ ಪುತ್ರ.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಎಂ. ಲಕ್ಷ್ಮಣ್, ಜನತಾ ನಗರದ ವಾರ್ಡ್ ನಂಬರ್ 44. 45.ರಲ್ಲಿ ಮತಯಾಚನೆ ಮಾಡಿದರು. ಮತಯಾಚನೆಯಲ್ಲಿ ಮುಡಾ ಅಧ್ಯಕ್ಷ ಕೆ. ಮರಿಗೌಡ. ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯ್‌ಕುಮಾರ್, ಪುಷ್ಪಲತಾ ಚಿಕ್ಕಣ್ಣ, ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್. ನಾಗೇಶ್, ಎಲ್. ಬಾಸ್ಕರ್‌ಗೌಡ, ಡಾ. ಶುಶ್ರುತ್‌ಗೌಡ, ಅರುಣ್‌ಕುಮಾರ್, ಹೇಮಾವತಿ ರಘು ಇನ್ನಿತರರು ಭಾಗವಹಿಸಿದ್ದರು.

ಗೋದಾಮಿಗೆ ಬೆಂಕಿ; ಸಾಮಗ್ರಿಗಳು ಭಸ್ಮ



ಮೈಸೂರಿನ ಬನ್ನಿಮಂಟಪದ ಗೋದಾಮು ಒಂದರಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾಕಿದ್ದ ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ.

ಮೈಸೂರು,ಏ.10(ಪಿಎಂ)– ಗೋದಾಮಿನಲ್ಲಿ ಬೆಂಕಿ ಅವಘಡ ಸಂಭವಿಸಿ ಶೇಖರಿಸಿದ್ದ ಹಳೇ ಪ್ಲಾಸ್ಟಿಕ್ ಚೀಲಗಳು ಸೇರಿದಂತೆ ಇನ್ನಿತರ ಸಾಮಗ್ರಿಗಳು ಭಸ್ಮವಾದ ಘಟನೆ ಬನ್ನಿಮಂಟಪದಲ್ಲಿ ಬುಧವಾರ ಸಂಜೆ ನಡೆದಿದೆ. ಬನ್ನಿಮಂಟಪದ ಇಂಡಸ್ಟ್ರೀಯಲ್ ಎ ಲೇಔಟ್‌ನ ಹಳೇ ಪ್ಲಾಸ್ಟಿಕ್ ಚೀಲ ಶೇಖರಣೆಯ ಗೋದಾಮು ಒಂದರಲ್ಲಿ ಈ ದುರ್ಘಟನೆ ನಡೆದಿದೆ. ಅಸೀಫ್ ಎಂಬುವರಿಗೆ ಸೇರಿದ ಈ ಗೋದಾಮನ್ನು ಮೊಹಮ್ಮದ್ ಯಾಸಿನ್ ಎಂಬುವವರು ಬಾಡಿಗೆ ಪಡೆದು ಹಳೇ ಚೀಲಗಳು ಸೇರಿದಂತೆ ಇನ್ನಿತರ ಹಳೇ ಸಾಮಗ್ರಿ ಸಂಗ್ರಹಿಸಲು ಬಳಸುತ್ತಿದ್ದರು. 30X40 ಅಡಿ ವಿಸ್ತೀರ್ಣದ ಈ ಗೋದಾಮಿನಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹತ್ತಿಕೊಂಡಿದ್ದು, ಪರಿಣಾಮ ಗೋದಾಮಿನಲ್ಲಿ ಸಂಗ್ರಹಿಸಿದ್ದ ಸಾಮಗ್ರಿಗಳು ಭಾಗಶಃ ಸುಟ್ಟು ಕರಕಲಾಗಿವೆ. ಬೆಂಕಿಯ ಕೆನ್ನಾಲಿಗೆಯೊಂದಿಗೆ ದಟ್ಟ ಹೊಗೆ ಆವರಿಸಿತ್ತು. ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಸಿ.ರಮೇಶ್ ನೇತೃತ್ವದಲ್ಲಿ ಬನ್ನಿಮಂಟಪ ಅಗ್ನಿಶಾಮಕ ಸಿಬ್ಬಂದಿ ಸತತ 3 ಗಂಟೆ ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ನಿಧನ

ಕೆ. ಶ್ರೀಕಂಠರಾವ್



ಮೈಸೂರು, ಏ. 10– ಮೈಸೂರಿನ ಮಹಾಜನ ಪ್ರೌಢಶಾಲೆಯ ನಿವೃತ್ತ ಜೀವಶಾಸ್ತ್ರ ಅಧ್ಯಾಪಕರು ಹಾಗೂ ವಿಜಯನಗರ ಮೊದಲ ಹಂತದ ನಿವಾಸಿ ಕೆ.ಶ್ರೀಕಂಠರಾವ್ (98) ಬುಧವಾರ ನಿಧನರಾದರು. ವಿದ್ಯಾರ್ಥಿ ಸಮೂಹದಲ್ಲಿ ಕೆಎಸ್‌ಆರ್ ಎಂದು ಪ್ರಖ್ಯಾತರಾಗಿದ್ದರು. ಶ್ರೀಯುತರು ಇಬ್ಬರು ಪುತ್ರರು, ಸೊಸೆಯಂದಿರು, ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಂ. ಜನಾರ್ಧನ್ ಐತಾಳ್



ಮೈಸೂರಿನ ಬಂಬೂ ಬಜಾರ್‌ನಲ್ಲಿರುವ ಬಾಲಕೃಷ್ಣ ಭವನದ ಮಾಜಿ ಮಾಲೀಕರು ಹಾಗೂ ಯಾದವಗಿರಿ ನಿವಾಸಿ ಕೆ.ಎಂ. ಜನಾರ್ಧನ್ ಐತಾಳ್ (86) ಏ.8ರಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಿನ್ನೆ (ಏ.9) ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ವರ್ಗ ತಿಳಿಸಿದೆ.

ಫಾಜಲ್ ಕರೀಮ್



ಮೈಸೂರಿನ ಬಿಸ್‌ಮಿಲ್ಲಾ ಟ್ರಾನ್ಸ್‌ಪೋರ್ಟ್ ಮಾಲೀಕ ದಿವಂಗತ ಅಬ್ದುಲ್ ರಶೀದ್ ಅವರ ಪುತ್ರ ಮತ್ತು ಬನ್ನಿಮಂಟಪ 'ಬಿ' ಬಡಾವಣೆಯ ಜೆಎಸ್‌ಎಸ್ ನಗರ 6ನೇ ಕ್ರಾಸ್ ನಿವಾಸಿ ಫಾಜಲ್ ಕರೀಮ್ (48) ನಿನ್ನೆ (ಏ.9) ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ವೃತ್ತದಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ನಿನ್ನೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುತ್ತೂರು ಶ್ರೀ ಕ್ಷೇತ್ರಕ್ಕೆ ರೋಬೋ ಆನೆ ಶಿವ ಸಮರ್ಪಣೆ

ಮೈಸೂರು, ಏ. 10 (ಎಂಟಿವೈ)– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ರೋಬೋ ಆನೆ 'ಶಿವ' ಸಮರ್ಪಣೆ ಮಾಡಲಾಯಿತು. ಆನೆಯನ್ನು ಕೊಡುಗೆಯಾಗಿ ನೀಡಿದ ಕನ್ನಡ ಚಲನಚಿತ್ರರಂಗದ ಖ್ಯಾತ ಕಲಾವಿದರಾದ ಶ್ರೀಮತಿ ಐಂದ್ರಿತಾ ರೇ ಹಾಗೂ ದಿಗಂತ್ ದಂಪತಿ ಭಾಗವಹಿಸಿದ್ದರು.

ಶ್ರೀಮತಿ ಐಂದ್ರಿತಾ ರೇ ಮಾತನಾಡಿ, ಆನೆಗಳು ಆಹಾರ ಮತ್ತು ನೀರನ್ನು ಅರಸಿ ಕಾಡಿನಿಂದ ನಾಡಿಗೆ ಬರುತ್ತಿವೆ. ದಿನೇ ದಿನೆ ಮಾನವ ಮತ್ತು ಕಾಡು ಪ್ರಾಣಿಗಳ ಸಂಘರ್ಷಗಳು ಹೆಚ್ಚಾಗುತ್ತಿದ್ದು, ಆನೆಗಳಿಂದ ಜನರು ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆನೆಗಳಿಗೂ ಕೂಡ ಜನರಿಂದ ಸ್ವತಂತ್ರವಿಲ್ಲದೆ ನೋವನ್ನು ಅನುಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸಲು ಪ್ರಾರಂಭಿಸುತ್ತಿರುವುದು ಶ್ಲಾಘನೀಯ ಎಂದರು.

ದಿಗಂತ್ ಮಾತನಾಡಿ, ಪ್ರಾಣಿಗಳು ಕಾಡಿನಲ್ಲಿರಬೇಕು, ನಾಡಿನಲ್ಲಿರಬಾರದು. ಇವುಗಳನ್ನು ಸರಪಳಿಯಲ್ಲಿ ಕಟ್ಟಿಹಾಕಬಾರದು. ಕಾಡಿನಲ್ಲಿ ಸ್ವತಂತ್ರವಾಗಿ ಓಡಾಡುತ್ತಿರಬೇಕು. ಸ್ವಾಭಾವಿಕವಾಗಿ ಬದುಕಲು ಬಿಡಬೇಕು. ಕೇರಳದಲ್ಲಿ ಇತ್ತೀಚೆಗೆ ನಡೆದ ಆನೆಗಳ ದಾಳಿಯಲ್ಲಿ ಅನೇಕ ಜನರು ಮೃತಪಟ್ಟಿದ್ದಾರೆ. ಸುತ್ತೂರು ಶ್ರೀಮಠವು ರೋಬೋ ಆನೆಯನ್ನು ಬಳಸುತ್ತಿರುವಂತೆ ಇತರೆ ಧಾರ್ಮಿಕ ಸಂಸ್ಥೆಗಳಲ್ಲಿ ಸಾಕಿರುವ ಆನೆಗಳನ್ನು ಸಹಜವಾಗಿ ಬದುಕಲು ಬಿಟ್ಟು, ರೋಬೋ ಆನೆಗಳನ್ನು ಬಳಸಲು ಪ್ರಯತ್ನಿಸಬೇಕು ಎಂದು ಹೇಳಿದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಭಗವಂತ ಸೃಷ್ಟಿ ಮಾಡಿರುವ ಪ್ರಾಣಿ ಪಕ್ಷಿಗಳಿಗೂ ಮನುಷ್ಯನ ಹಾಗೆಯೇ ಸ್ವತಂತ್ರವಾಗಿ ಬದುಕುವ ಹಕ್ಕಿರುತ್ತದೆ. ಸಾಕು ಪ್ರಾಣಿಗಳಿಗೆ ಇಂದಿನ ದಿನಗಳಲ್ಲಿ ತುಂಬಾ ಮಾನ್ಯತೆಯನ್ನು ನೀಡಲಾಗುತ್ತಿದೆ. ಮನುಷ್ಯರು ಪ್ರಾಣಿಗಳೊಂದಿಗೆ ಪ್ರೀತಿಯಿಂದ ಇರಬೇಕು. ಮನುಷ್ಯನಿಗೆ ಸ್ವತಂತ್ರವಿಲ್ಲದಿದ್ದರೆ ಹೇಗೆ ಇರುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ಮನುಷ್ಯನಂತೆಯೆ ಅವುಗಳೂ ಸ್ವತಂತ್ರವನ್ನು ಬಯಸುತ್ತವೆ. ಆದ್ದರಿಂದ ಅವುಗಳನ್ನು ಹಿಂಸಿಸಬಾರದು. ಇಂತಹ ಸಂದರ್ಭದಲ್ಲಿ ದೆಹಲಿಯ PETA ಸಂಸ್ಥೆಯ ಮೂಲಕ ಶ್ರೀಮತಿ ಐಂದ್ರಿತಾ ರೇ ಹಾಗೂ ನಟ ದಿಗಂತ್ ದಂಪತಿ ಶ್ರೀಮಠಕ್ಕೆ ಆನೆಯನ್ನು ಕೊಡುಗೆಯಾಗಿ ನೀಡುತ್ತಿರುವುದು, ಇವರಿಗೆ ಪ್ರಾಣಿಗಳ ಬಗ್ಗೆ ಇರುವ ಕಾಳಜಿಯನ್ನು ತೋರಿಸುತ್ತದೆ ಎಂದರು.

PETA ಸಂಸ್ಥೆಯ ಮೂಲಕ ಪ್ರಾಣಿಗಳ ಹಿತ ಕಾಪಾಡಲು ಶ್ರಮಿಸುತ್ತಿರುವ PETA ಸಂಸ್ಥೆಯ ಸಾರ್ವಜನಿಕ ಸಂಪರ್ಕ ವಿಭಾಗದ ಉಪಾಧ್ಯಕ್ಷ ಸಚಿನ್ ಬಂಗೇರ, ಕೆಎಎಸ್ ಹಿರಿಯ ಅಧಿಕಾರಿ ಮಂಜುನಾಥ್ ಸ್ವಾಮಿ, ಗೋಪಾಲಗೌಡ ಆಸ್ಪತ್ರೆಯ ಡಾ.ಸುಶ್ರುತ್ ಮಾತನಾಡಿದರು. ಮಠಾಧಿಪತಿಗಳು, ಹರಗುರು ಚರಮೂರ್ತಿಗಳು, ಅನೇಕ ಕಡೆಗಳಿಂದ ಶ್ರೀಮಠದ ಭಕ್ತಾದಿಗಳು, ಸುತ್ತಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು. ಕು.ಸಿಂಚನ ಸ್ವಾಗತಿಸಿದರು. ಜಿ.ಎಲ್. ತ್ರಿಪುರಾಂತಕ ಪ್ರಾಸ್ತಾವಿಕ ನುಡಿಗಳನ್ನಾಡಿದರು.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ರೋಬೋ ಆನೆ 'ಶಿವ' ಸಮರ್ಪಣೆ ಮಾಡಲಾಯಿತು. ಕಲಾವಿದರಾದ ಶ್ರೀಮತಿ ಐಂದ್ರಿತಾ ರೇ ಹಾಗೂ ದಿಗಂತ್ ದಂಪತಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಬೆಳವಣಿಗೆಯಲ್ಲಿ ಉದ್ಯಮಿಗಳ ಪಾತ್ರವಿದೆ; ಎಲ್ಲರೊಂದಿಗೆ ಸೇರಿ ಮೈಸೂರು ಮಾದರಿ ಮಾಡೋಣ

- ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಆಶಯ
- ಉದ್ಯಮಿಗಳು, ವಿವಿಧ ಕ್ಷೇತ್ರದ ಪ್ರಮುಖರೊಂದಿಗೆ ಸಂವಾದ



ಹೋಟೆಲ್ ಗ್ರ್ಯಾಂಡ್ ಸರೀನ್‌ನಲ್ಲಿ ಬುಧವಾರ ರಾತ್ರಿ ನಡೆದ ಉದ್ಯಮಿಗಳು ಮತ್ತು ವಿವಿಧ ಕ್ಷೇತ್ರದ ಪ್ರಮುಖರ ಮಿಲನ ಕಾರ್ಯಕ್ರಮವನ್ನು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಉದ್ಘಾಟಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಮೈಸೂರು, ಏ.10(ಎಂಕೆ)– ಉದ್ಯಮಿಗಳ ಸಮಸ್ಯೆಗಳು, ಸಲಹೆಗಳನ್ನು ಸ್ವೀಕರಿಸಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಮಾಡಲು ಸಿದ್ದನಾಗಿದ್ದು, ಅದಕ್ಕಾಗಿ ತಮ್ಮೆಲ್ಲರ ಬೆಂಬಲ ಬಯಸಿದ್ದೇನೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ನಗರದ ಇಟ್ಟಿಗೆಗೂಡಿನಲ್ಲಿರುವ ಹೋಟೆಲ್ ಗ್ರ್ಯಾಂಡ್ ಸರೀನ್‌ನಲ್ಲಿ ಬುಧವಾರ ಆಯೋಜಿಸಿದ್ದ ಉದ್ಯಮಿಗಳು ಮತ್ತು ವಿವಿಧ ಕ್ಷೇತ್ರದ ಪ್ರಮುಖರ ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿಗೆ ಉದ್ಯಮಿಗಳ ಸಲಹೆ ಮುಖ್ಯವಾಗಿದೆ. ಹಾಗೆಯೇ ಉದ್ಯಮಿಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿದ್ದೇನೆ ಎಂದು ತಿಳಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಎಲ್ಲರು ಬೆಂಬಲ ನೀಡಬೇಕು. ಕಳೆದ ಒಂಬತ್ತು ವರ್ಷಗಳ ಹಿಂದೆ ಮೈಸೂರು ಅರಮನೆಯಲ್ಲಿ ದತ್ತು ಸ್ವೀಕಾರವಾದ ನಂತರ ಸೈಬರ್ ಭದ್ರತೆ ಸೇರಿದಂತೆ ವಿವಿಧ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ನನಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದರ ಋಣ ತೀರಿಸುವ ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದರು.

ಮೈಸೂರು ಒಡೆಯರು ಅಂದು ಅರಮನೆಯೊಳಗೆ ಇದ್ದುಕೊಂಡು, ಆಗಾಗ ಜನರೊಂದಿಗೆ ಬೆರೆತು ಎಲ್ಲರನ್ನೂ ಒಂದೇ ಕುಟುಂಬದವರಂತೆ ಭಾವಿಸಿ ಪರಂಪರೆಯನ್ನು ಉಳಿಸುತ್ತಾ ಮೈಸೂರನ್ನು ಮಾದರಿ ಮೈಸೂರು ಎನ್ನುವ ಮಟ್ಟಕ್ಕೆ ಅಭಿವೃದ್ಧಿ ಮಾಡಿದ್ದರು. ಅದೇ ರೀತಿಯ ಕಳೆದ ಹತ್ತು ವರ್ಷಗಳಲ್ಲಿ ಪ್ರಧಾನಿ ಮೋದಿಯವರು ದೇಶದ ಪರಂಪರೆಯ ಜೊತೆಗೆ ಅಭಿವೃದ್ಧಿ ಕಾರ್ಯವನ್ನು ಮಾಡುತ್ತಿದ್ದಾರೆ. ಮೋದಿಯವರ ಆಡಳಿತ ಮೈಸೂರು ಸಂಸ್ಥಾನದ ಸುವರ್ಣಯುಗದ ಪ್ರತಿಬಿಂಬವಾಗಿದೆ ಎಂದು ಹೇಳಿದರು.

ಮೈಸೂರು ಯೋಗ ಪರಂಪರೆಯನ್ನು ವಿಶ್ವಕ್ಕೆ ಸಾರಿದ ಕೀರ್ತಿ ಪ್ರಧಾನಿಗಳಿಗೆ ಸಲ್ಲುತ್ತದೆ. ಅವರ ನಾಯಕತ್ವ ದೇಶಕ್ಕೆ ಮಾತ್ರವಲ್ಲ ವಿಶ್ವಕ್ಕೆ ಮಾದರಿಯಾಗಿದೆ. ಪರಂಪರೆ ಜೊತೆಗೆ ಅಭಿವೃದ್ಧಿ ಕೆಲಸ ಮಾಡುವ ಪ್ರಧಾನಿಗಳೊಂದಿಗೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಕೆಲಸ ಮಾಡಲು ಬಯಸಿದ್ದೇನೆ. ಈ ನಿಟ್ಟಿನಲ್ಲಿ ಏ.26

> ರಾಜಕೀಯ ಕ್ಷೇತ್ರದಲ್ಲಿ ಅರ್ಜಿ ಹಾಕಿ, ಪ್ರಭಾವಿಗಳಿಂದ ಶಿಫಾರಸ್ಸು ಮಾಡಿಸಿ ಟಿಕೆಟ್ ಪಡೆಯುವುದು ಸಾಮಾನ್ಯ. ಆದರೆ, ಬಿಜೆಪಿಯೇ ಮೈಸೂರು ಅರಮನೆಗೆ ಅರ್ಜಿ ಹಾಕಿ ಯದುವೀರ್ ಅವರನ್ನು ಕರೆದುಕೊಂಡು ಬರಲಾಗಿದೆ. ಈ ಮೊದಲು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರನ್ನು ರಾಜಕೀಯಕ್ಕೆ ಬರುವಂತೆ ಕೋರಲಾಗಿತ್ತು. – **ಬಿ.ಪಿ.ಮಂಜುನಾಥ್, ಮಾಜಿ ಅಧ್ಯಕ್ಷ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ**

ರಂದು ತಮ್ಮ ಅಮೂಲ್ಯವಾದ ಮತವನ್ನು ಕಮಲದ ಗುರುತಿಗೆ ನೀಡಿ, ತಮ್ಮೆಲ್ಲರ ಸೇವೆ ಮಾಡುವ ಅವಕಾಶ ನೀಡುವಂತೆ ಕೋರಿದರಲ್ಲದೆ ಯುಗಾದಿ ಹಬ್ಬದ ಶುಭಾಷಯ ತಿಳಿಸಿದರು.

ಮಹಾರಾಜರಿಗೆ ವೋಟು...!: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಮಾತನಾಡಿ, ಕಾಂಗ್ರೆಸ್ ನಾಯಕರೇ ಮೈಸೂರು ಮಹಾರಾಜರಿಗೆ ವೋಟ್ ನೀಡುವುದಾಗಿ ಹೇಳುತಿದ್ದಾರೆ. ಸಾಹೇಬರ ಮಗ(ಸಿದ್ದರಾಮಯ್ಯರ ಪುತ್ರ ಯತೀಂದ್ರ) ನಿಂತಿದ್ದರೆ ಅವರಿಗೆ ಮತ ನೀಡುತ್ತಿದ್ದೆವು. ಆದರೆ, ಅಭ್ಯರ್ಥಿ ಬೇರೆಯವರಾಗಿರುವುದರಿಂದ ನಮ್ಮ ವೋಟು ಮೈಸೂರು ಮಹಾರಾಜರಿಗೆ ಎನ್ನುತ್ತಿದ್ದಾರೆ. ಯದುವೀರ್ ಅವರನ್ನು ಗೆಲ್ಲಿಸುವ ಮೂಲಕ ಪ್ರಧಾನಿ ಮೋದಿಯವರ ಕಿರೀಟಕ್ಕೆ ಮೈಸೂರಿನ ನವಿಲುಗರಿ ಸೇರಲಿ ಎಂದು ಆಶಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ಅಭ್ಯರ್ಥಿ ಪ್ರಮುಖ್ ಹೇಮಂತ್‌ಕುಮಾರ್ ಗೌಡ, ಉದ್ಯಮಿ ಸಿ.ಎಸ್.ಚಂದ್ರಶೇಖರ್, ಬಿಜೆಪಿ ಮುಖಂಡ, ಬಿ.ವಿ.ಮಂಜುನಾಥ್, ವಸಂತಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಿನ ವಿವಿಧೆಡೆ ಯದುವೀರ್ ಮತ ಶಿಕಾರಿ



ಮೈಸೂರಿನ ಜಯನಗರದಲ್ಲಿ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ರೋಡ್ ಶೋ ನಡೆಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ನಾಗೇಂದ್ರ ಮತ್ತಿತರರಿದ್ದರು.

ಮೈಸೂರು, ಏ.10(ಎಂಕೆ)– ಮೈಸೂರಿನ ವಿವಿಧೆಡೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್, ಮತ ಶಿಕಾರಿ ನಡೆಸಿದರು.

ಬಿಸಿಲಿನ ತಾಪ ಕಡಿಮೆಯಾಗುತ್ತಿದ್ದಂತೆ ವಿವಿಧೆಡೆ ಪ್ರಚಾರ ಸಭೆಗಳನ್ನು ನಡೆಸಿ, ಬೆಂಬಲ ಕೋರಿದರು. ಸಂಜೆ 4 ಗಂಟೆಗೆ ವಾರ್ಡ್ ನಂ.60 ರೈಲ್ವೆವರ್ಕ್ ಶಾಪ್‌ಗೆ ಭೇಟಿ ನೀಡಿದ ಯದುವೀರ್, ರೈಲ್ವೆ ಕಾರ್ಮಿಕರೊಂದಿಗೆ ಸಭೆ ನಡೆಸಿ, ಬೆಂಬಲಿಸುವಂತೆ ಮನವಿ ಮಾಡಿದರು. ಬಳಿಕ ವಾರ್ಡ್ ನಂ.65ರ ವ್ಯಾಪ್ತಿಯ ಬೆಮೆಲ್ ಆರ್ಚ್‌ನಲ್ಲಿ ಕಾರ್ನರ್ ಸಭೆ, ಶಿವಪುರ ದಲಿತರ ಕಾಲೋನಿಗೆ ಭೇಟಿ ನೀಡಿ ದಲಿತ ಮುಖಂಡರ ಸಹಕಾರ ಕೋರಿದರು. ಬಳಿಕ ದೇವಯ್ಯನ ಹುಂಡಿಯಲ್ಲಿ ಬೆಂಬಲಿಗರೊಂದಿಗೆ ಕಾರ್ನರ್ ಸಭೆ ನಡೆಸಿ ಮತ ಶಿಕಾರಿ ನಡೆಸಿದರು.

ವಾರ್ಡ್ ನಂ.59ರ ವ್ಯಾಪ್ತಿಯ ವಿವೇಕಾನಂದ ಸರ್ಕಲ್‌ನಲ್ಲಿ ನಡೆದ ಬಹಿರಂಗ ಪ್ರಚಾರದಲ್ಲಿ ಭಾಗಮಹಿಸಿ, ಕುವೆಂಪುನಗರದ ಕಾಂಪ್ಲೆಕ್ಸ್‌ವರೆಗೆ ಹಾಗೂ ಜಯನಗರ ರಾಮಮಂದಿರದಿಂದ ಜಯನಗರದ ಪ್ರಮುಖ ಬೀದಿಗಳಲ್ಲಿ ಭರ್ಜರಿ ರೋಡ್ ನಡೆಸಿದರು. ಈ ವೇಳೆ ಮಾತನಾಡಿದ ಯದುವೀರ್, ನಿಮ್ಮೆಲ್ಲರ ಮನೆ ಮಗನಾಗಿ ಕೆಲಸ ಮಾಡಲು ಬಂದಿದ್ದೇನೆ ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು. ಕಳೆದ ಹತ್ತು ವರ್ಷದಲ್ಲಿ ದೇಶದಲ್ಲಾಗಿರುವ ಅಭಿವೃದ್ಧಿ ನೋಡಿದ್ದೀರಿ. ದೇಶದ 22 ನಗರಗಳಲ್ಲಿ ಮೆಟ್ರೋ ಸೇವೆ, ಶೇ.100 ರಷ್ಟು ರೈಲ್ವೆ ಸಂಪರ್ಕ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸುಧಾರಣೆಗಳಾಗಿವೆ. ಮುದ್ರಾ ಯೋಜನೆ ಮೂಲಕ ಸ್ವಯಂ ಉದ್ಯಮಿಗಳ ಸಂಖ್ಯೆ ಹೆಚ್ಚಾಗಿದೆ. ರಾಮಮಂದಿರ ನಿರ್ಮಾಣ, ಆರ್ಟಿಕಲ್ 370 ರದ್ದು ಸೇರಿದಂತೆ ಮಹತ್ವದ ಕಾರ್ಯಗಳಾಗಿವೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಯೋಗ ದಿನವನ್ನು ಆಚರಿಸುವಂತಾಗಿದೆ. ಮುಂದಿನ ದಿನಗಳಲ್ಲಿಯೂ ದೇಶದ ಅಭಿವೃದ್ಧಿಗಾಗಿ ಮತ್ತೊಮ್ಮೆ ಮೋದಿಯವರೇ ಪ್ರಧಾನಿಯಾಗಬೇಕು. ಈ ನಿಟ್ಟಿನಲ್ಲಿ ಅವರ ಕೈ ಬಲ ಪಡಿಸಲು ನನಗೆ ಆಶೀರ್ವಾದ ಮಾಡುವಂತೆ ಕೋರಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ವಿದೇಶದಲ್ಲಿ ವ್ಯಾಸಂಗ ಮಾಡಿದ್ದರೂ ಸರಳ ಸಜ್ಜನಿಕೆಯ ವ್ಯಕ್ತಿತ್ವವುಳ್ಳ, ಮೈಸೂರು ಜನ ಬಯಸುವಂತಹ ಅಭ್ಯರ್ಥಿಯನ್ನೇ ಪ್ರಧಾನಿ ಮೋದಿಯವರು ಆಯ್ಕೆ ಮಾಡಿದ್ದಾರೆ. ಕೆ.ಆರ್.ಕ್ಷೇತ್ರದದಿಂದ ಒಂದು ಲಕ್ಷ ಮತಗಳ ಲೀಡ್ ಮೂಲಕ ಯದುವೀರ್ ಅವರನ್ನು ಗೆಲ್ಲಿಸುವ ಶಪಥ ಮಾಡಿದ್ದು, ಕ್ಷೇತ್ರದ ಮತದಾರರು ಸಂಪೂರ್ಣ ಸಹಕಾರ, ಬೆಂಬಲ ನೀಡಬೇಕು ಎಂದು ಕೋರಿದರು. ದೇಶಕ್ಕಾಗಿ ಮೋದಿ, ಮೈಸೂರಿಗಾಗಿ ಯದುವೀರ್ ಆಯ್ಕೆ ಅವಶ್ಯವಾಗಿದೆ ಎಂದು ಹೇಳಿದರಲ್ಲದೆ ಘೋಷಣೆ ಕೂಡಿ ಬೆಂಬಲಿಸುವಂತೆ ಮನವಿ ಮಾಡಿದರು.

ಮಾಜಿ ಶಾಸಕರಾದ ಎಲ್.ನಾಗೇಂದ್ರ, ಸಿದ್ದರಾಜು, ಮಾಜಿ ಮೇಯರ್‌ಗಳಾದ ಸುನಂದಾ ಪಾಲನೇತ್ರ, ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಎಂ.ಸಿ. ರಮೇಶ್, ಜಗದೀಶ್, ಚಂಪಕ, ಬಿಜೆಪಿ ಮುಖಂಡರಾದ ಗೋಪಾಲ್‌ರಾಜೇ ಅರಸ್, ಜಯರಾಮು ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.04.2024 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024
ಕ್ರೋಧಿ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ
- **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** 30ನೇ ವರ್ಷದ ಶ್ರೀ ರಾಮನವಮಿ ಸಂಗೀತೋತ್ಸವ, ಸಂಜೆ 5.15ರಿಂದ ಲಕ್ಷ್ಮಿ–ಪ್ರೇರಣ ಪ್ರವೀಣ್–ಭುವನ್ ಅವರಿಂದ ಸಂಗೀತ ಕಾರ್ಯಕ್ರಮ, ಬೆಂಗಳೂರು ಸಹೋದರರಿಂದ ದ್ವಂದ್ವ ಗಾಯನ, ಡಾ.ಕೆ.ಟಿ.ಉದಯಕಿರಣ್–ಪಿಟೀಲು, ವಿದ್ವಾನ್ ಅನೂರ್ ಅನಂತ ಕೃಷ್ಣ ಶರ್ಮ–ಮೃದಂಗ, ವಿದ್ವಾನ್ ಸುನಾದ್ ಅನೂರ್–ಘಟಂ, ಸ್ಥಳ: ಶ್ರೀಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿಮೊಹಲ್ಲಾ.
- **ಮೈಸೂರು ಜಿಲ್ಲಾ ದಲಿತ ಸಂಘಟನೆಗಳ ಒಕ್ಕೂಟ :** ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್. ಲಕ್ಷ್ಮಣ್ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ಬೆಂಬಲಿಸಲು 'ದಲಿತ ಮುಖಂಡರ ಸಮಾವೇಶ' ಸ್ಥಳ: ಸರಸ್ವತಿ ಕನ್ವೆನ್ಷನ್ ಹಾಲ್, ಹೂಟಗಳ್ಳಿ, ಬೆಳಗ್ಗೆ 11ಕ್ಕೆ.
- **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಮಹಾಮೃತ್ಯುಂಜಯ ಮತ್ತು ಶ್ರೀ ದಕ್ಷಿಣಾಮೂರ್ತಿ ಹೋಮ, ಶ್ರೀ ಮಹಾಮೃತ್ಯುಂಜಯ, ಶ್ರೀ ಮೇಧಾ ದಕ್ಷಿಣಾಮೂರ್ತಿ, ಶ್ರೀ ಅಪಸ್ಮಾರ ನಿವರ್ತಕ ದಕ್ಷಿಣಾಮೂರ್ತಿ, ಶ್ರೀ ಅಮಲ ನೀಲಕಂಠ, ಶ್ರೀ ಶರಭೇಶ್ವರ, ಶ್ರೀ ಅರ್ಧನಾರೀಶ್ವರ, ಶ್ರೀ ವಟುಕ ಭೈರವ, ಶ್ರೀ ಅಷ್ಟಮುಖ ಗಂಡಬೇರುಂಡ, ಶ್ರೀ ಖಡ್ಗರಾವಣ, ಶ್ರೀಅಘೋರ ವೀರಭದ್ರ, ಶ್ರೀಶಾಸ್ತ ದತ್ತಾತ್ರೇಯ ಮೂಲಮಂತ್ರ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್, ಜಯಲಕ್ಷ್ಮಿಪುರಂ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವ ಅಂಗವಾಗಿ ಸಂಗೀತ ಕಛೇರಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಅನಂತ ರಾಮಚಂದ್ರ ಮತ್ತು ತಂಡದವರಿಂದ ಹಾಡುಗಾರಿಕೆ, ಸ್ಥಳ: ಭಾರತೀ ಸ್ತ್ರೀ ಸಮಾಜದ ಆವರಣ, ಯಾದವಗಿರಿ, ಸಂಜೆ 6ಕ್ಕೆ.
- **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ರಾಮೋತ್ಸವ ಕಾರ್ಯಕ್ರಮ, ಮಡಿಲು ಸಾಮಾಜಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅವರಿಂದ ಜಾನಪದ ವೈಭವ ಕಾರ್ಯಕ್ರಮ, ಸ್ಥಳ: ಗಣಪತಿ ದೇವಸ್ಥಾನ, ಐ ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ– ಪ್ರೊ. ಲಕ್ಷ್ಮೀನಾರಾಯಣ ಅರೋರಾ, 7.15 ಭಾವಗೀತೆಗಳು–ನವನೀತ್ ಕೃಷ್ಣನ್, 10.00 ಶಾಸ್ತ್ರೀಯ ಸಂಗೀತ– ಸಂಧ್ಯಾವಂದನಮ್ ಶ್ರೀನಿವಾಸ ರಾವ್–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 1.20 ಭಾವಗೀತೆ–ಇಂದ್ರಾಣಿ ಅನಂತರಾಮ್, 4.00 ಜನಪದ ಸಂಗೀತ, 4.30 ರಸಮಂಜರಿ, 6.50 ಕೃಷಿರಂಗ–ಆರ್ಥಿಕ ಸಾಕ್ಷರತೆ ಮೂಲಕ ಕೃಷಿ ಅಭಿವೃದ್ಧಿ ಈ ಕುರಿತು ನಬಾರ್ಡ್ ಸಂಸ್ಥೆಯ ನಿವೃತ್ತ ಉಪ ಮಹಾಪ್ರಬಂಧಕರಾದ ಡಾ. ಡಿ. ವಿ. ರಮಣರಾವ್ ಅವರೊಂದಿಗೆ ಸಂದರ್ಶನ. ಪ್ರಸ್ತುತಿ– ಎನ್.ಕೇಶವಮೂರ್ತಿ, 8.00 ಯುವವಾಣಿ 'ಮತದಾರರ ಜಾಗೃತಿ ಮತ್ತು ಯುವಜನತೆ' ಈ ಕುರಿತು ಮಾತುಕತೆ. ಭಾಗವಹಿಸುತ್ತಾರೆ: ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್‌ಟಿಜಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಾದ ಶ್ರಾವಣಿ .ಜಿ ಮತ್ತು ಅಭಿಲಾಶ್ ಹಾಗೂ ಮೈಸೂರು ಯುನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ವಿದ್ಯಾರ್ಥಿನಿ ಕೌಸಲ್ಯಾ, ರಘುರಾಂ ಎ. ಆರ್., 10.00 ಕಥಾ ನಾಟಕ: ಚಪ್ಪಲಿಗಳು–ಮೂಲ ಸಣ್ಣಕಥೆ– ಸಾ.ರಾ. ಅಬೂಬಕರ್, ಬಾನುಲಿ ನಾಟಕ ರೂಪಾಂತರ–ನಾರಾಯಣ ರಾಯಚೂರಿ, ನಿರ್ದೇಶನ–ಹೆಚ್. ಎಸ್. ಸರಸ್ವತಿ, ನಿರ್ಮಾಣ–ರಘುಪತಿ ಹೆಗ್ಡೆ, 10.30 ಸವಿನೆನಪು

ನಕ್ಕರೆ ಅದೇ ಸ್ವರ್ಗ

ಶಂಕರ : "ನೀವು ಯಾವುದೋ ಲೇಖನ ಬರೆಯುತ್ತಿದ್ದೀರಂತೆ, ಎಂದಿನಿಂದ ಬರೆಯಲು ಪ್ರಾರಂಭಿಸಿದೀರಿ?"

ಗುಂಡ : "ಹೌದು, 'ಸೋಮಾರಿತನ'ದ ಮೇಲೆ ಬರೆಯುತ್ತಿದ್ದೇನೆ, 1980 ಜನವರಿ 10 ರಿಂದ ಬರೆಯಲು ಪ್ರಾರಂಭಿಸಿದೆ!"

ಮೈಸೂರು ಮಿತ್ರ
ಗುರುವಾರ, 11 ಏಪ್ರಿಲ್ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬೇಸರಿಸದ ಎಚ್ಚರದ ದುಡಿಮೆಯಿಂದ ಯಾವುದೇ ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ–ವೆಬ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೀತಾ ಇದ್ರೆ ನಂಟು, ಬೆಳಗ್ತಾ ಇದ್ರೆ ಕಂಚು

ನಿಮ್ಮ ಪತ್ರಗಳು

ಬೇಸಿಗೆ ಶಿಬಿರಗಳು ಕೇವಲ ಮೋಜಿಗೆ ಸೀಮಿತವಾಗದಿರಲಿ

ಮಾನ್ಯರೆ,

ಮಕ್ಕಳಿಗೆ ಪರೀಕ್ಷೆಗಳೆಲ್ಲಾ ಮುಗಿದು ಬೇಸಿಗೆ ರಜೆ ಆರಂಭವಾಗುತ್ತಿದೆ. ಇದೇ ಏಪ್ರಿಲ್ 10 ರಿಂದ ಮುಂದಿನ ಜೂನ್‌ವರೆಗೆ ಅಂದಾಜು 45 ದಿನ ಶಾಲೆಗಳು ವಾಡಿಕೆಯಂತೆ ರಜೆ ನೀಡುತ್ತವೆ. ಇನ್ನು ಮಕ್ಕಳಿಗೆ ಖುಷಿಯೋ ಖುಷಿ. ಆದರೆ ಪೋಷಕರಿಗೆ ಮಕ್ಕಳನ್ನು ಮನೆಯಲ್ಲಿ ನೋಡಿಕೊಳ್ಳುವುದು ಒಂದು ಸವಾಲೇ ಸರಿ. ಅದರಲ್ಲೂ ಬಿರು ಬಿಸಿಲಿನಲ್ಲಿ ಆಟವಾಡಲು ಹೊರಗೆ ಹೋಗುವ ಮಕ್ಕಳ ಬಗ್ಗೆ ಮನೆಯವರೆಲ್ಲರಿಗೂ ಕಳವಳ ಹೆಚ್ಚು. ಹಾಗೆ ರಜೆಯಲ್ಲಿ ಓದುವುದನ್ನೇ ಮರೆತು ಬಿಟ್ಟರೆ ಅನ್ನೋ ಪೀಕಲಾಟ ಬೇರೆ. ಮೊದಲೆಲ್ಲಾ ಹೆಚ್ಚಿನ ಮಕ್ಕಳು ತಮ್ಮ ತಾತ–ಅಜ್ಜಿ ಮನೆಗೆ ಹೋಗುತ್ತಿದ್ದರು. ಹಳ್ಳಿಗಳಿಗೆ ಹೋಗಿ ಗ್ರಾಮೀಣ ಸೊಗಡಿನ ರಸದೌತಣ ಸವಿದು ಬರುತಿದ್ದರು. ಕಾಲ ಕ್ರಮೇಣ ಅದು ಕಡಿಮೆ ಆಗುತ್ತಿದೆ. ಇದಕ್ಕೆಲ್ಲಾ ಒಂದು ಪರಿಹಾರವೆಂದರೆ ಮಕ್ಕಳನ್ನು ಯಾವುದಾದರು ಬೇಸಿಗೆ ಶಿಬಿರಕ್ಕೆ ಸೇರಿಸಿಬಿಡುವುದು.

ಇತ್ತೀಚೆಗೆ ಬೇಸಿಗೆ ಶಿಬಿರ ಒಂದು ವ್ಯಾಪಾರವಾಗಿ ಬಿಟ್ಟಿದ್ದು, ತರಹೇವಾರಿ ಆಟ, ಮೋಜು, ಕುಣಿತ ಇದೆ ಎಂದು ಭಿನ್ನ ವಿಭಿನ್ನ ಜಾಹೀರಾತು ಮೂಲಕ ಊರಿನ ಮೂಲೆ ಮೂಲೆ, ಗಲ್ಲಿ ಗಲ್ಲಿಯಲ್ಲೂ ಶಿಬಿರಗಳು ತಲೆ ಎತ್ತಿ ಮಕ್ಕಳು ಮತ್ತು ಪೋಷಕರನ್ನು ಆಕರ್ಷಣೆ ಮಾಡುತ್ತಿವೆ.

ಕೆಲವು ಪ್ರತಿಷ್ಠಿತ ಬೇಸಿಗೆ ಶಿಬಿರಗಳಿಗೆ ಪೋಷಕರು ಮುಗಿಬಿದ್ದು, ದೊಡ್ಡವರ ಕೈಯಲ್ಲಿ ಶಿಫಾರಸು ಮಾಡಿ ಸೇರಿಸಿದ ಉದಾಹರಣೆಗಳೂ ಇವೆ. ಆದರೆ ಬೇಸಿಗೆ ಶಿಬಿರದ ಆಯೋಜಕರಿಗೆ ನನ್ನದೊಂದು ಸಲಹೆ. ದಯವಿಟ್ಟು ನಿಮ್ಮ ಶಿಬಿರಗಳು ಕೇವಲ ಆಟ, ಮೋಜು, ಮಸ್ತಿ, ಕುಣಿತಕ್ಕೆ ಸೀಮಿತವಾಗದೆ ಶಿಬಿರಗಳಲ್ಲಿ ಮಕ್ಕಳಿಗೆ ನಾಗರಿಕ ಪ್ರಜ್ಞೆಯನ್ನು ತಿಳಿಸಿಕೊಡಿ. ಗುರು ಹಿರಿಯರಿಗೆ ಗೌರವ ನೀಡುವ, ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಣೆ, ಮೊಬೈಲ್ ಗೀಳಿನಿಂದ ಹೊರಬರುವ, ನೆರೆ ಹೊರೆಯವರೊಂದಿಗೆ ಸೌಹಾರ್ದತೆಯಿಂದ ಬದುಕುವ, ಅಸಹಾಯಕರಿಗೆ ನೆರವಾಗುವ, ಪರಿಸರ ಸಂರಕ್ಷಣೆ, ಪ್ರಾಣಿದಯಾ ಬಗ್ಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತಿಳಿಸಿಕೊಡಿ. ಅದರಲ್ಲೂ ದೇಶಪ್ರೇಮ, ಒತ್ತಡ ನಿರ್ವಹಣೆ, ಸಂಬಂಧಗಳ ಮಹತ್ವ ಸಾರುವ ವೇದಿಕೆ ಒದಗಿಸಿ. ನಿಮಗೆ ಅನ್ನಿಸಬಹುದು. ಇದನ್ನೆಲ್ಲಾ ಶಾಲೆ ಮತ್ತು ಮನೆಗಳಲ್ಲೇ ಹೇಳಿಕೊಡುತ್ತಾರೆ ಅಲ್ವ ಅಂತ. ಆದರೆ ಮಕ್ಕಳು ಶಾಲೆಯಲ್ಲಿ ವರ್ಷವಿಡೀ ಪರೀಕ್ಷೆ, ಅಂಕಗಳು, ಹೋಮ್ ವರ್ಕ್, ಪ್ರಾಜೆಕ್ಟ್ ವರ್ಕ್, ಟ್ಯೂಷನ್ ಜಂಜಾಟದಲ್ಲಿ ಕಲಿಯಲು ಆಗಿರುವುದಿಲ್ಲ. ಇನ್ನು ಇಬ್ಬರು ದುಡಿಯುವ ಮನೆಯಲ್ಲಿ ಮಕ್ಕಳಿಗೆ ಇದನ್ನು ಹೇಳಿಕೊಡುವಷ್ಟು ತಾಳ್ಮೆ ಇಂದು ಕಾಣುತ್ತಿಲ್ಲ.

ಒಂದು ಮಗು (ಸ್ನೇಹಿತ) ಕೆಳಗೆ ಬಿದ್ದರೆ ಮತ್ತೊಂದು ಮಗು ನಗುವುದು, ಮನೆಯಲ್ಲಿ ಅಕ್ಕ–ತಮ್ಮ ಅಣ್ಣನೊಡನೆ ಮೊಬೈಲ್, ಟಿವಿ ರಿಮೋಟ್‌ಗಾಗಿ ಕಿತ್ತಾಡುವ, ತಾತ ಅಜ್ಜಿಯರ ಬಗ್ಗೆ ತಾತ್ಸಾರ ತೋರುವ ದೃಶ್ಯಗಳು ಸಾಮಾನ್ಯವಾಗಿ ನಾವು ನೋಡುವ ದೃಶ್ಯ. ಆದರೆ ಬಿದ್ದ ಮಗುವನ್ನು ಸಂತೈಸುವ ಮನಸ್ಥಿತಿಯನ್ನು ನಾವು ಇಂತಹ ಶಿಬಿರಗಳಿಂದ ಕಲಿಸಬಹುದು. ಆಟದ ಮೂಲಕ, ನಾಟಕದ ಮೂಲಕ, ಚಿತ್ರಕಲೆ, ಪದ ಕಟ್ಟುವ ಮುಖೇನ ಕಲಿಸಿದರೆ ಅವರ ಸ್ಮೃತಿ ಪಟಲದಲ್ಲಿ ಉಳಿದು ಬಿಡುತ್ತದೆ. ಅವಕಾಶವಿದ್ದಲ್ಲಿ ಮಕ್ಕಳನ್ನು ಸ್ಲಂಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ವಾಸಿಸುವ ಮಕ್ಕಳು ಹೇಗೆ ಅವಕಾಶ ವಂಚಿತರಾಗಿರುತ್ತಾರೆ. ಅವರ ಜೀವನ ಕಷ್ಟಗಳು ಮನವರಿಕೆ ಆಗುತ್ತದೆ.

ವೃದ್ಧಾಶ್ರಮಗಳಿಗೆ ಕರೆದುಕೊಂಡು ಹೋಗಿ ಅಲ್ಲಿನ ಹಿರಿಯ ಜೀವಿಗಳೊಡನೆ ಬೆರೆಯಲು ಬಿಡಿ. ಅವರಿಗೂ ತಮ್ಮ ಮೊಮ್ಮಕ್ಕಳನ್ನು ಕಂಡಷ್ಟೇ ಖುಷಿ ಹಾಗೂ ಅವರ ಜೀವನ ಪಾಠ ಹೇಳಲು ನೆರವಾದಂತೆ ಹಾಗೂ ಈ ಮಕ್ಕಳಿಗೆ ಮುಂದೆ ತಮ್ಮ ಹಿರಿಯರನ್ನು ಗೌರವಿಸುವ ಮನೋಧೋರಣೆ ಬರುತ್ತದೆ. ಹೀಗೆ ಸೃಜನಶೀಲತೆಯಿಂದ ಕೂಡಿದ ಬೇಸಿಗೆ ಶಿಬಿರಗಳು ಆಯೋಜನೆ ಮಾಡಿದರೆ ಮಕ್ಕಳು ಉತ್ತಮ ಪ್ರಜೆಗಳಾಗುವಲ್ಲಿ ಶಿಬಿರಗಳು ಶಾಲೆಯಷ್ಟೇ ಪ್ರಮುಖ ಪಾತ್ರ ವಹಿಸುತ್ತವೆ. ಕೇವಲ ಆಟ, ಹಾಡು, ಡಾನ್ಸ್, ಡ್ರಾಯಿಂಗ್, ಪೇಂಟಿಂಗ್, ಮೋಜಿಗೆ ಶಿಬಿರಗಳು ಸೀಮಿತವಾಗದಿರಲಿ.

–ನಾಗೇಂದ್ರ ಕಿಲಗೆರೆ, ಸಾಮಾಜಿಕ ಕಾರ್ಯಕರ್ತ, ಮೈಸೂರು

ಇಂತಹ ಪುಂಡರಿಗೆ ಪೊಲೀಸರ ಭಯವೇ ಇಲ್ಲ!

ಮಾನ್ಯರೆ,

ಬುಧವಾರ ಮಧ್ಯಾಹ್ನ 4 ಗಂಟೆ ಸಮಯದಲ್ಲಿ ಮೈಸೂರಿನ ಮಂಚೇಗೌಡನ ಕೊಪ್ಪಲು ಅಭಿಷೇಕ್ ಸ್ಟೋರ್ ಸರ್ಕಲ್‌ನಿಂದ ಸೂರ್ಯ ಬೇಕರಿ ಸರ್ಕಲ್‌ವರೆಗೆ ಪುಂಡನೊಬ್ಬ ಡಿಯೋ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡಿದ ಪರಿ ವಾಹನ ಚಾಲಕರು, ಪಾದಚಾರಿಗಳಲ್ಲಿ ಆಘಾತ ಉಂಟು ಮಾಡಿತು. ಆ ಸ್ಕೂಟರ್‌ಗೆ ನಂಬರ್ ಪ್ಲೇಟ್ ಇಲ್ಲ. ಇಂತಹ ಹೀನ ಕೃತ್ಯಕ್ಕೆ ಅಣಿ ಮಾಡಿದಂತಿತ್ತು. ಅತೀ ವೇಗವಾಗಿ ವ್ಹೀಲಿಂಗ್ ಸರ್ಕಸ್ ಮಾಡುತ್ತಾ ಸದಾ ವಾಹನ ಹಾಗೂ ಜನದಟ್ಟಣೆಯಿಂದ ಕೂಡಿದ ಈ ರಸ್ತೆಯಲ್ಲಿ ಭಾರೀ ಸದ್ದಿನೊಂದಿಗೆ ಸಾಗುತ್ತಾ, ಇಡೀ ರಸ್ತೆಯಲ್ಲಿ ಹುಚ್ಚು ಸಾಹಸ ಮೆರೆಯುತ್ತಾ ಹೋಗುತ್ತಿದ್ದಾಗ ಕೆಲ ಮಹಿಳೆಯರು ಚೀರುತ್ತಾ ಫುಟ್‌ಪಾತ್ ಅಂಗಡಿ ಹೊಕ್ಕಿದರೆ, ವಾಹನ ಚಾಲಕರು ಈ ಪುಂಡ ಹೋಗುವವರೆಗೆ ವಾಹನಗಳ ನಿಲ್ಲಿಸಿದ್ದು ಉಂಟು.

ನಾವು ಎಲ್ಲಿದ್ದೇವೆ? ಕಾನೂನು ಇಷ್ಟು ದುರ್ಬಲವಾಯಿತೆ? ಪೊಲೀಸರು ಕಠಿಣ ಕ್ರಮ ಕೈಗೊಂಡಿದ್ದರೆ ಇಂತಹ ಪುಂಡರ ಹಾವಳಿ ಹತ್ತಿಕ್ಕಬಹುದಿತ್ತು. ಆದರೆ ಅವರು ಇಂತಹವರು ಕಂಡರೂ ಕಾಣದಂತೆ ಸುಮ್ಮನಿರುವುದರಿಂದಲೇ ಇಂತಹ ಕೃತ್ಯಗಳು ಮುಂದುವರೆದಿವೆ. ಇದರಿಂದ ಜನ ಪೊಲೀಸರ ಮೇಲಿನ ವಿಶ್ವಾಸ ಕಳೆದುಕೊಳ್ಳುತ್ತಾರೆ. ಈಗಲೂ ಕಾಲ ಮಿಂಚಿಲ್ಲ. ಈ ಮಾರ್ಗದ ಸಿಸಿ ಕ್ಯಾಮರಾ ಫುಟೇಜ್ ಪರಿಶೀಲಿಸಿದರೆ ಚಿತ್ರಣ ಸಿಗಲಿದೆ. ಆತನ ವಿರುದ್ಧ ಶಿಸ್ತು ಕ್ರಮ ಕೈಗೊಂಡರೆ; ಪುಂಡರಿಗೆ ಒಂದು ಎಚ್ಚರಿಕೆ ಸಂದೇಶವಾಗಲಿದೆ.

– ಕೃಷ್ಣ, ಹೆಬ್ಬಾಳ್, ಮೈಸೂರು.

ಶೌಚಾಲಯದಲ್ಲಿ ಸ್ವಚ್ಛತೆ ಕಾಪಾಡಿ

ಮಾನ್ಯರೆ,

ಸಾರ್ವಜನಿಕ ಶೌಚಾಲಯಗಳು ಎಂದರೆ ಜನರಿಗೆ ಯಾಕಿಷ್ಟು ತಾತ್ಸಾರ ಎಂಬುದೇ ತಿಳಿಯುತ್ತಿಲ್ಲ. ಅದರಲ್ಲಿಯೂ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಲ್ಲಿಯೂ ಶೌಚಾಲಯ ಬಳಸಿದ ನಂತರ ಸರಿಯಾಗಿ ನೀರನ್ನು ಬಳಸಿ ಶುಚಿತ್ವ ಕಾಪಾಡಬೇಕು ಎಂಬ ಅರಿವೇ ಅವರಿಗೆ ಇಲ್ಲದಿರುವುದು ಬೇಸರದ ಸಂಗತಿ. ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ಇದೇ ಸಮಸ್ಯೆ ಕಾಡುತ್ತಿದೆ. ಬಹುತೇಕ ಎಲ್ಲಾ ವಿಭಾಗಗಳ ಶೌಚಾಲಯಗಳೂ ಅವ್ಯವಸ್ಥೆಯಿಂದ ಕೂಡಿವೆ. ಕೆಲವು ಸಂದರ್ಭಗಳಲ್ಲಿ ಇಲ್ಲಿ ನೀರೇ ಬರುವುದಿಲ್ಲ. ಆದ್ದರಿಂದ ಶೌಚಾಲಯಗಳಲ್ಲಿ ಹೆಚ್ಚು ಸಮಸ್ಯೆಗಳು ಕಂಡುಬರುತ್ತದೆ. ಹಾಗೇ ಹಾಸ್ಟೆಲ್‌ಗಳಲ್ಲಿ ಶೌಚಾಲಯಗಳ ಶುಚಿತ್ವ ದೂರದ ಮಾತಾಗಿದೆ. ನೀರು ಬಳಸದೆ ಶೌಚಾಲಯಗಳು ದುರ್ವಾಸನೆ ಬೀರಲಾರಂಭಿಸಿವೆ. ಆದ್ದರಿಂದ ಸಂಬಂಧಪಟ್ಟವರು ಶೌಚಾಲಯಗಳನ್ನು ಸ್ವಚ್ಛಗೊಳಿಸಬೇಕಿದೆ. ವಿದ್ಯಾರ್ಥಿಗಳೂ ಶೌಚಾಲಯದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕಿದೆ.


–ರಕ್ಷಿತಾ, ಮಹಾರಾಣಿ ಮಹಿಳಾ ಕಲಾ ಕಾಲೇಜು ಮೈಸೂರು.

ಮಂಥನ



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು.

ಎಸ್ಸೆಸ್ಸೆಲ್ಸಿ... ಪಿಯುಸಿ... ನಂತರ ಮುಂದೇನು?



ಪರೀಕ್ಷೆಗಳ ಕಾಲ ಮುಗಿದು ಈಗ ಫಲಿತಾಂಶಗಳ ಪರ್ವ ಪ್ರಾರಂಭವಾಗಿದೆ. ವಿದ್ಯಾರ್ಥಿಗಳ ಜೀವನದ ದಿಶೆಯನ್ನು ಬದಲಿಸುವ ಎಸ್ಸೆಸ್ಸೆಲ್ಸಿ ಮತು ಪಿಯುಸಿ ಫಲಿತಾಂಶಗಳತ್ತ ಎಲ್ಲರ ದೃಷ್ಟಿ ನೆಟ್ಟಿದೆ. ಎಸ್ಸೆಸ್ಸೆಲ್ಸಿ ಫಲಿತಾಂಶಕ್ಕೆ ಕ್ಷಣಗಣನೆ ಯಾದರೆ, ಪಿಯುಸಿ ಫಲಿತಾಂಶ ಪ್ರಕಟವಾಗಿದೆ. ಮಗು ಹತ್ತನೆಯ ತರಗತಿಗೆ ಬಂದಾಗಿನಿಂದ ಪೋಷಕರಿಗೆ ನಿಜವಾದ ಪರೀಕ್ಷೆ ಪ್ರಾರಂಭವಾಗುತ್ತದೆ. ಒಳ್ಳೆಯ ಶಾಲಾ–ಕಾಲೇಜುಗಳಿಗೆ ಸೇರಿಸಿದ್ದರೂ, ಅತ್ಯುತ್ತಮ ಅಂಕ ಗಳಿಸಲಿ ಎನ್ನುವ ಸದುದ್ದೇಶದಿಂದ ಎಲ್ಲೆಡೆ ಹುಡುಕಾಡಿ, ನೂರಾರು ಅಭಿಪ್ರಾಯಗಳನ್ನು ಸಂಗ್ರಹಿಸಿ ಟ್ಯೂಷನ್ ಮತ್ತು ಕೋಚಿಂಗ್ ಕ್ಲಾಸುಗಳಿಗೆ ಸೇರಿಸಿರುತ್ತಾರೆ. ಮಕ್ಕಳ ಜೊತೆಗೇ ತಾವೂ ಶ್ರಮಿಸಿರುತ್ತಾರೆ. ಅತಿರೇಕದ ವರ್ತನೆಯ ಪೋಷಕರ ಬಗ್ಗೆ ಮಾತನಾಡದಿರುವುದೇ ಒಳ್ಳೆಯದು.

ಆ ಮೂರು ವರ್ಷಗಳು ಬಹುಶಃ ಪೋಷಕರ ಜೀವನದ ಕಠಿಣ ತಮ್ಮ ದಿನಗಳು. ಬೆಳ್ಳಂಬೆಳಗ್ಗೆಯೇ ಮಗುವನ್ನು ಏಳಿಸಿ ಸಿದ್ಧಮಾಡಿ, ಟ್ಯೂಷನ್, ಶಾಲಾ–ಕಾಲೇಜುಗಳಿಗೆ ಬಿಟ್ಟು ಬರುವ, ಕರೆದುಕೊಂಡು ಬರುವ ಗುರುತರ ಜವಾಬ್ದಾರಿಯ ನಡುವೆಯೇ, ಮಕ್ಕಳ ಆರೋಗ್ಯದ ಕಾಳಜಿ ವಹಿಸಬೇಕು. ಅವರ ಮಾನಸಿಕ ಸ್ಥೈರ್ಯ–ಧೈರ್ಯ ಕುಸಿಯದಂತೆ ಜಾಗ್ರತೆಯಾಗಿ ವ್ಯವಹರಿಸಬೇಕು, ಆತ್ಮವಿಶ್ವಾಸಕ್ಕೆ ನೀರೆರೆಯುತ್ತಲೇ ಇರಬೇಕು, ಅವರ ಏಕಾಗ್ರತೆ ಪಲ್ಲಟಗೊಳ್ಳದಂತೆ ಎಚ್ಚರಿಕೆಯಿಂದಿರಬೇಕು, ಆ ಮೂರು ವರ್ಷಗಳು ಕನಿಷ್ಠ ಮನರಂಜನೆಯನ್ನು ಪ್ರಜ್ಞಾಪೂರ್ವಕವಾಗಿ ಆಗುಮಾಡಿ ಮಕ್ಕಳಲ್ಲಿ ಅಭಾವ ವೈರಾಗ್ಯವನ್ನು ಮೂಡಿಸಬೇಕು! ಅಬ್ಬಾ! ಒಂದೇ ಎರಡೇ ಮಕ್ಕಳಿಗೆ ಓದುವುದು, ಬರೆಯುವುದು ಮತ್ತು ಒಂದು ಅಂತಿಮ ಪರೀಕ್ಷೆ ಎದುರಿಸುವುದು ಅಷ್ಟೇ. ಆದರೆ, ಪೋಷಕರಿಗೆ ಅನುದಿನವೂ ನೂರಾರು ಪರೀಕ್ಷೆಗಳು. ಮಗು ಅನುತ್ತೀರ್ಣವಾದರೆ ಅಥವಾ ನಿರೀಕ್ಷೆಯಷ್ಟು ಅಂಕಗಳಿಸದಿದ್ದರಂತೂ ಪೋಷಕರ ಪಾಡು ಹೇಳ ತೀರದು. ಮಗುವಿನ ಭವಿಷ್ಯದ ಚಿಂತೆ ಒಂದೆಡೆಯಾದರೆ, ಖಿನ್ನತೆಗೆ ಜಾರಿ ಜೀವಕ್ಕೆ ಅಪಾಯ ತಂದುಕೊಳ್ಳದಂತೆ ಸಂಭಾಳಿಸುವ ಗುರುತರ ಜವಾಬ್ದಾರಿ.

ಫಲಿತಾಂಶ ಬರುವ ಮೊದಲೇ ಯಾವ ಕೋರ್ಸಿಗೆ ಸೇರಬೇಕು? ಯಾವ ಕಾಲೇಜು ಚೆನ್ನ? ಎಲ್ಲಿ ಕ್ಯಾಂಪಸ್ ಇಂಟರ್ವ್ಯೂ ಇರುತ್ತದೆ. ಯಾವ ಕೋರ್ಸು ಮಾಡಿದರೆ ಉತ್ತಮ ಉದ್ಯೋಗ ದೊರೆಯುತ್ತದೆ. ಫೀಸ್ ಎಷ್ಟಾಗುತ್ತದೆ. ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರ ತಯಾರಿಟ್ಟುಕೊಂಡಿದ್ದರೂ, ಫಲಿತಾಂಶ ಬಂದ ಮೇಲೆ ಬಹುತೇಕರಿಗೆ ಎಲ್ಲ ತಲೆಕೆಳಗಾಗುವ ಸಂದರ್ಭ ಬರದೇ ಏನಿಲ್ಲ. ಒಂದೇ ಒಂದು ಅಂಕ ಹೆಚ್ಚು ಕಡಿಮೆಯಾದರೆ ರ‍್ಯಾಂಕ್ ಪಟ್ಟಿಯಲ್ಲಿ ಹತ್ತಾರು ಸ್ಥಾನ ಮೇಲೆಕೆಳಗಾಗುವ ಸಂದರ್ಭದಲ್ಲಿ ಇದು ಸಾಮಾನ್ಯ. ಬಯಸಿದ ಕಾಲೇಜು ಕೋರ್ಸ್ ಸಿಗದಾಗ ಆಗುವ ನಿರಾಸೆ ಅಗಾಧ. ಈ ಸಂದರ್ಭ ಬಹುತೇಕ ಪರಿಗಣನೆಗೆ ಬರುವುದು ಇಂಜಿನಿಯರಿಂಗ್, ಡೆಂಟಲ್ ಮತ್ತು ಮೆಡಿಕಲ್ ಮಾತ್ರ, ಪಿಯುಸಿ ಯ ನಂತರ ಇರುವ ಕೋರ್ಸುಗಳು. ಅವುಗಳಿಗೆ ಸೀಟು ಸಿಗಲಿಲ್ಲವೆಂದರೆ ಜೀವನವೇ ಮುಗಿದುಹೋಗುತ್ತದೆ ಎಂದುಕೊಂಡಿರುವ ಮಕ್ಕಳು ಮತ್ತು ಪೋಷಕರು.

ಆದರೆ, ಇಂಜಿಯರಿಂಗ್ ಮತ್ತು ಮೆಡಿಕಲ್ ಸೀಟುಗಳು ಮಾತ್ರ ಜೀವನವನ್ನು ಸಫಲಗೊಳಿಸುವುದಿಲ್ಲ. ಇನ್ನೂ ಹಲವಾರು ಕೋರ್ಸುಗಳು, ಹಲವೆಂದರೆ, ಲೆಕ್ಕವಿಲ್ಲದಷ್ಟು ನಮ್ಮ ಊಹೆಗೂ ಮೀರಿದಷ್ಟು ಕೋರ್ಸುಗಳು ಇಂದು ವಿದ್ಯಾರ್ಥಿಗಳ ಓದಿಗಾಗಿ ತೆರೆದುಕೊಂಡಿವೆ. ಕಣ್ ಕಾಪು ಕಟ್ಟಿಕೊಂಡಿರುವ ಕುದುರೆಯಂತಾಡುವವರಿಗೆ ಮಾತ್ರ ಸೀಮಿತ ದಾರಿಗಳು ಕಾಣುತ್ತವೆ. ಇಂಗ್ಲಿಷ್ ಕವಿ ರಾಬರ್ಟ್ ಫ್ರಾಸ್ಟ್ ತನ್ನ ಲೋಕಮಾನ್ಯ ಕವಿತೆ Road Not Taken ನಲ್ಲಿ ಹೇಳುತ್ತಾನೆ

Two roads diverged in
a wood, and I?
I took the one less traveled
by, And that has made
all the difference.

ಅಂತಾ?

ಅಂದರೆ, ಕಣ್ಣಮುಂದಿದ್ದ ಎರಡು ದಾರಿಗಳ ನಡುವೆ ಆರಿಸಿಕೊಳ್ಳುವ ಪ್ರಮೇಯ ಬಂದಾಗ, ಕಡಿಮೆ ಜನ ತುಳಿದ ಹಾದಿಯನ್ನು ಆರಿಸಿಕೊಂಡೆ, ಅದು ಎಲ್ಲವನ್ನೂ ಬದಲಿಸಿತು ಎಂದು.

ಎಸ್‌ಎಸ್‌ಎಲ್‌ಸಿ ಪಾಸಾದವರಿಗೆ: ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಮಕ್ಕಳಿಗೆ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಕ್ರಮವಾಗಿ 42, 8 ಮತ್ತು 6 ಕಾಂಬಿ ನೇಷನ್‌ಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ. ಅದಲ್ಲದೆ ಡಿಪ್ಲೊಮಾ, ಐಟಿಐ ಮತ್ತು ಪ್ಯಾರಾ ಮೆಡಿಕಲ್ ಡಿಪ್ಲೊಮಾ ಕೋರ್ಸ್ ಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶಗಳೂ ಇರುತ್ತವೆ.

ಅಲ್ಲಿ ಅವರಿಗೆ ಅಷ್ಟು ಕಷ್ಟವಾಗೋಲ್ಲ. ಪಿಯುಸಿಯ ನಂತರ ಅದೂ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ದೊರೆಯದಾದಾಗ ಬದುಕೇ ಗೊಂದಲದ ಗೂಡೆನಿಸಿಬಿಡುತ್ತದೆ. ಅದು ಕಾಲ್ಪನಿಕ ಎಂದು ಬೇರೆ ಹೇಳಬೇಕಿಲ್ಲವಷ್ಟೇ. ಅವನ್ನು ಹೊರತುಪಡಿಸಿಯೂ ಸಾವಿರಾರು ಕೋರ್ಸುಗಳು ವಿದ್ಯಾರ್ಥಿಗಳ ಜೀವನ ಹಸನಾಗಿಸಲು ಕಾದುಕುಳಿತಿವೆ.

ಪಿಯುಸಿ ಪಾಸಾದವರು: ಪಿಯುಸಿಯ ನಂತರ ಯಾವುದೇ ಕ್ಷೇತ್ರವನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯ ಸಾಕಷ್ಟಿರುತ್ತದೆ. ಕಲಾ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ವಿಜ್ಞಾನ ವಿಷಯದಲ್ಲಿ ಪದವಿ ಮಾಡಲಾಗದಿದ್ದರೂ, ವಾಣಿಜ್ಯ ಶಾಖೆಯ ವಿದ್ಯಾರ್ಥಿ ಕಲಾ ವಿಭಾಗಕ್ಕೆ ಸೇರಬಹುದು, ವಿಜ್ಞಾನ ವಿದ್ಯಾರ್ಥಿ ಯಾವುದರಲ್ಲಾದರೂ ಪದವಿಗೆ ಸೇರಬಹುದು. ಇದಲ್ಲದೆ ಬೇರೆ ಬೇರೆ ಕೋರ್ಸುಗಳ ಅವಕಾಶವಿದ್ದು ಅಲ್ಲಿ ಈ ರೀತಿಯ ಯಾವುದೇ ನಿರ್ಬಂಧ ಸಾಮಾನ್ಯವಾಗಿ ಇರುವುದಿಲ್ಲ.

ಪದವಿಗಳ ವಿಷಯಗಳ ಆಯ್ಕೆ ಮೂರೂ ಶಾಖೆಯಲ್ಲಿಯೂ ವಿಫುಲವಾಗಿವೆ. ಸಾಮಾನ್ಯ ವಿಜ್ಞಾನದಲ್ಲಿ 90 ವಿವಿಧ ವಿಷಯಗಳನ್ನು 3 ವರ್ಷದ 6 ಸೆಮಿಸ್ಟರ್‌ಗಳ ಪದವಿ ಅಥವಾ ಇಂಟಿಗ್ರೇಟೆಡ್ ಕೋರ್ಸ್ ಮಾಡಬಹುದಾಗಿದೆ. ವಾಣಿಜ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಬಿಕಾಂ, ಬಿಬಿಎಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಕಲಾ ವಿಭಾಗದಲ್ಲಿ 2020ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯಾದಾಗಿನಿಂದ, ಲಿಬರಲ್ ಆರ್ಟ್ಸ್ ಎಜುಕೇಷನ್‌ಗೆ ಪ್ರಾಮುಖ್ಯತೆ ದೊರೆತು, ಐಚ್ಛಿಕ ವಿಷಯಗಳ ಆಯ್ಕೆಗೆ ಹೆಚ್ಚಿನ ಸ್ವಾತಂತ್ರ್ಯ ದೊರೆತಿದೆ. ಯಾವುದೇ ಪದವಿ ಪೂರೈಸಿದರೂ ಉನ್ನತ ಶಿಕ್ಷಣಕ್ಕೆ ದೇಶ ವಿದೇಶಗಳಲ್ಲಿ ಅವಕಾಶಗಳು ತೆರೆದುಕೊಳ್ಳುತ್ತವೆ. ಇದಲ್ಲದೆ, ಕೃಷಿ, ತೋಟಗಾರಿಕೆ, ಹೈನುಗಾರಿಕೆ ಮತ್ತು ಅರಣ್ಯ ಶಾಸ್ತ್ರ ವಿಷಯಗಳಲ್ಲಿ ಪದವಿ ಪಡೆದುಕೊಳ್ಳುವುದು ಈಗ ಉಪಯುಕ್ತವಾಗಿದೆ. ಕೃಷಿ ಸಂಬಂಧಿತ ಪದವಿಗೆ ನಮ್ಮ ರಾಜ್ಯದಲ್ಲಿಯೇ ಬೆಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ರಾಯ ಚೂರುಗಳಲ್ಲಿ ಕೃಷಿ ವಿವಿಗಳಿವೆ.

ಪಿಯುಸಿಯ ನಂತರ ಕಾನೂನು ಪದವಿಯನ್ನು ಪಡೆಯಬಹುದು. ಹಲವಾರು ಕಾಲೇಜುಗಳು, 5 ವರ್ಷಗಳ ಕಾನೂನು ಪದವಿ ಶಿಕ್ಷಣವನ್ನು ನೀಡುತ್ತವೆ.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಕೂಡ ಪಿಯುಸಿಯ ನಂತರ ಮಾಡಬಹುದಾದ ಹಲವಾರು ಪದವಿಗಳನ್ನು ಪರಿಚಯಿಸಿದೆ. ಸೇವಾ ಮನೋಭಾವ ಉಳ್ಳವರು, ವೈದ್ಯಕೀಯ ಕ್ಷೇತ್ರದಲ್ಲಿ ಮುಂದುವರಿಯಲಿಚ್ಛಿಸುವವರು, ನರ್ಸಿಂಗ್ ಮತ್ತು ಮಿಡ್ ವೈಫರಿ ಕೋರ್ಸುಗಳಿಗೆ ದಾಖಲಾಗಬಹುದು.

ಇಂದು ಭಾರತ ಅಂತರಿಕ್ಷದಲ್ಲಿಯೂ ತನ್ನ ದಿಟ್ಟ ಹೆಜ್ಜೆಗಳನ್ನು ಇಡುತ್ತಿದೆ. ಆ ನಿಟ್ಟಿನಲ್ಲಿ ಭಾರತದ ಈ ಸಾಧನೆಯೊಂದಿಗೆ ಕೈಗೂಡಿಸಲಿಚ್ಛಿಸುವವರಿಗೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೇಸ್ ಸೈನ್ಸ್ ಸಂಸ್ಥೆ ಹಲವಾರು ಪದವಿ ಕೋರ್ಸುಗಳನ್ನು ನಡೆಸುತ್ತಿದೆ.

ಜಾಗತಿಕ ಯುಗದಲ್ಲಿ ಆಹಾರ ಸಂಸ್ಕರಣೆಯ ಮಹತ್ವ ನಮ್ಮೆಲ್ಲರಿಗೂ ತಿಳಿದದ್ದೇ. ಈ ಕ್ಷೇತ್ರದಲ್ಲಿಯೂ ಪದವಿ ಪಡೆಯಬಹುದಾಗಿದೆ. ಭಾಷಾ ಕಲಿಕೆ–ಅನುವಾದ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರಿಗೆ, ಹೈದರಾಬಾದ್‌ನ ಸೀಫೆಲ್, ಬೆಂಗಳೂರಿನ ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್, ಮ್ಯಾಕ್ಸ್ ಮುಲ್ಲರ್ ಪ್ರತಿಷ್ಠಾನ, ಮೈಸೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್ವೇಜಸ್ ಪದವಿಗಳನ್ನು ರೂಪಿಸಿವೆ.

ಗ್ರಾಫಿಕ್ಸ್ ಮತ್ತು ಆನಿಮೇಷನ್ ಇಂದಿನ ದಿನಮಾನಗಳಲ್ಲಿ ಅತ್ಯವಶ್ಯಕ ಎನಿಸಿವೆ. ಇವನ್ನು ಕಲಿಯಲು ಇಂದು ಹಲವು ವಿವಿಗಳಲ್ಲಿ ಅವಕಾಶಗಳಿವೆ. ಇವೆಲ್ಲಾ ಪದವಿಗಳು ಕೆಲಸ ಗಿಟ್ಟಿಸಲು ಸಹಾಯ ಮಾಡುತ್ತವೆ. ಆದರೆ ಹಾಗೆ ಮತ್ತೊಬ್ಬರ ಕೆಳಗೆ ದುಡಿಯಲಾರೆ, ಗಳಿಸುವ ಅಗತ್ಯ ಮತ್ತು ಉತ್ಸಾಹ ಎರಡೂ ಇದೆ ಎನ್ನುವ ಪಿಯುಸಿ ಕಲಿತವರಿಗೆ ಕೌಶಲ್ಯಾಭಿವೃದ್ಧಿಗೆ ಇರುವ ಅವಕಾಶಗಳು ಸಾವಿರಾರು. ಹಲವು ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ಸೂಕ್ಷ್ಮ, ಸಣ್ಣ, ಅತಿ ಸಣ್ಣ ಉದ್ದಿಮೆಗಳಿಗೆ ಅವಶ್ಯವಿರುವ ತರಬೇತಿಯನ್ನು ಕೊಡಮಾಡುತ್ತಿವೆ. ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಉದ್ಯೋಗ ತರಬೇತಿ ಮತ್ತು ತರಬೇತಿ ನಿರ್ದೇಶನಾಲಯ Modular Employable Skill Development ಯೋಜನೆಯಡಿ ಎಸ್ಸೆಸ್ಸೆಲ್ಸಿ, ಪಿಯುಸಿ, ಐಟಿಐ ಮತ್ತು ಡಿಪ್ಲೊಮಾ ಮಾಡಿರುವ ಯುವಕ–ಯುವತಿಯರಿಗೆ ಅವರ ಇಷ್ಟದ ಕ್ಷೇತ್ರದಲ್ಲಿ ಉಚಿತ ತರಬೇತಿ ನೀಡುತ್ತದೆ. ಅಲ್ಲದೆ ರಾಜ್ಯ ಸರ್ಕಾರದ ಉದ್ಯೋಗ ಮತ್ತು ತರಬೇತಿ ಇಲಾಖೆ ಮತ್ತು ಕೌಶಲ್ಯ ಆಯೋಗ ಅನೇಕ ತರಬೇತಿ, ಕೌಶಲ್ಯಾಭಿವೃದ್ಧಿ ಶಿಬಿರಗಳ ಜೊತೆಗೆ ಉದ್ಯೋಗ ಮೇಳವನ್ನೂ ನಡೆಸುತ್ತದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗಡೆ ಅವರ ನೇತೃತ್ವದ ರುಡ್‌ಸೆಟ್ ಸಂಸ್ಥೆ ಬಗ್ಗೆ ಬಹುಶಃ ತಿಳಿಯದವರೇ ಇಲ್ಲ. ಈ ಸರ್ಕಾರೇತರ ಸಂಸ್ಥೆ ಉಜಿರೆಯನ್ನು ಕೇಂದ್ರ ಸ್ಥಾನವಾಗಿಟ್ಟುಕೊಂಡು ಕರ್ನಾಟಕದೆಲ್ಲೆಡೆ ಮಾತ್ರವಲ್ಲ ಭಾರತ ಇತರೆ ರಾಜ್ಯಗಳಲ್ಲೂ ತರಬೇತಿ ಕೇಂದ್ರಗಳನ್ನು ನಡೆಸುತ್ತಿದೆ. ಹಲವು ಕ್ಷೇತ್ರಗಳಲ್ಲಿ ಅವಶ್ಯಕತೆಗನುಗುಣವಾಗಿ 3 ದಿನಗಳಿಂದ 6 ವಾರಗಳವರೆಗಿನ ತರಬೇತಿ ಶಿಬಿರಗಳನ್ನು ಉಚಿತ ಊಟ ವಸತಿಗಳೊಂದಿಗೆ ನಡೆಸುತ್ತದೆ.

ಹಾಗೆಯೇ ಡಾನ್ ಬಾಸ್ಕೊ ಟೆಕ್, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಆಶ್ರಯದಲ್ಲಿ ಗ್ರಾಮೀಣ ಭಾಗದ ಜನರಿಗೆ ಸ್ವಾವಲಂಬನೆಯ ಬದುಕು ಕಟ್ಟಿಕೊಳ್ಳುವಂತೆ ಮಾಡುತ್ತಿದೆ.

ಮಹಿಳಾ ಮತ್ತು ಕಲ್ಯಾಣ ಇಲಾಖೆ, ಖಾದಿ ಗ್ರಾಮೋದ್ಯೋಗ ಮಂಡಳಿಗಳೂ ಸಹ ಉದ್ಯಮ ಸ್ನೇಹಿ ತರಬೇತಿಗಳನ್ನು ಕೊಡುತ್ತವೆ. ಇವುಗಳೆಲ್ಲಾ ಒಂದು ಸೂರಿನಡಿ ಕ್ರಮಬದ್ಧವಾಗಿ ಕಲಿತು ಬದುಕು ಕಟ್ಟಿಕೊಳ್ಳಲು ಉಪಯೋಗಿಸಿಕೊಳ್ಳಬಹುದಾದ ಕೌಶಲಗಳಾದರೆ, ಹುಟ್ಟಿನಿಂದಲೇ ನಮ್ಮಲ್ಲಿ ಕೆಲವು ಕಲೆಗಳ ಬಗೆಗಿನ ಆಸಕ್ತಿಗಳೂ ಯುವಜನತೆಗೆ ಉದ್ಯೋಗ ದೊರಕಿಸಿಕೊಡಬಹುದು. ಅದಕ್ಕೆ ಸ್ವಲ್ಪ ಮಟ್ಟಿಗಿನ Fine Tuningನ ಅವಶ್ಯಕತೆ ಇರುತ್ತದೆ. ಸಂಗೀತ, ನೃತ್ಯ, ನಿರೂಪಣೆ, ನಟನೆ.. ಇತ್ಯಾದಿ. ಇಂದು ಪುಣೆ, ಕೊಲ್ಕತ್ತಾ, ದೆಹಲಿ, ಚೆನ್ನೈ, ಹೈದರಾಬಾದ್ ಮತ್ತು ಮುಂಬೈಗಳಲ್ಲಿ ಸಂಸ್ಥೆಗಳಿವೆ. ಚಿತ್ರಕಲೆ, ಶಿಲ್ಪಕಲೆ, ವಿಡಿಯೋಗ್ರಾಫಿ ಇತ್ಯಾದಿಗಳನ್ನು ಕಲಿಸಲು ದೇಶಾದ್ಯಂತ ಕಾವಾದಂತಹ ಹಲವು ಸಂಸ್ಥೆಗಳಿವೆ. ಇಂದು ಇಂಟೀರಿಯರ್ ಡಿಸೈನಿಂಗ್ ಅತಿ ಬೇಡಿಕೆಯ ಕೋರ್ಸ್ ಆಗಿದೆ. ಭೋಜನಪ್ರಿಯತೆ ವ್ಯಾಪಕವಾಗುತ್ತಿರುವ ಈ ದಿನಗಳಲ್ಲಿ ಅಡುಗೆಯ ಕಲಿಕೆ ಕೂಡ ನಿಮ್ಮ ಜೀವನವನ್ನು ರುಚಿಕರವಾಗಿಸಬಹುದು.

ನಾವು ಕಲಿಯಲು ಸಿದ್ಧವಿದ್ದೇವೆಂದರೆ ಕಲಿಸಲು ಸಂಸ್ಥೆಗಳಿವೆ. ಈ ಕುರಿತು ನಿಮಗೆ ಇನ್ನೂ ಹೆಚ್ಚಿನ ವಿಸ್ತೃತ ಮಾಹಿತಿ ನವಕರ್ನಾಟಕ ಪ್ರಕಾಶನ ಹೊರತಂದಿರುವ ಬೇದ್ರೆ ಮಂಜುನಾಥರ 'ಗೆದ್ದೇ ಗೆಲ್ಲೀವಿ' ಪುಸ್ತಕದಲ್ಲಿ ದೊರೆಯುತ್ತದೆ. ಅಲ್ಲದೇ ಆಯಾ ಸಂಸ್ಥೆಗಳ ಅಧಿಕೃತ ಜಾಲತಾಣಗಳೂ ಇವೆ.

ಇವೆಲ್ಲಾ ಪದವಿ ಇತ್ಯಾದಿಗಳ ಜೊತೆಗೆ, ಬಿಲ್ ಗೇಟ್ಸ್, ಸ್ಟೀವ್ ಜಾಬ್ಸ್‌ರ ಹಾಗೆ ನಿಮ್ಮ ನಿಮ್ಮ ಆಸಕ್ತಿಯ ಕ್ಷೇತ್ರಗಳಲ್ಲಿಯೇ ಒಂದಷ್ಟು ಪರಿಶ್ರಮ ಹಾಕಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಆದರೆ ಗುರಿ, ಅಚಲ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಕಲಿತು ಸಾಧಿಸುವ ಹಂಬಲವಿರಬೇಕು.

ಕಾಲೇಜುಗಳು, ಕೋರ್ಸುಗಳು, ತರಬೇತಿ ಸಂಸ್ಥೆಗಳು ಎಲ್ಲವನ್ನೂ ಕಲಿಸುತ್ತವೆ, ನಮ್ಮ ಜವಾಬ್ದಾರಿ ಏನಿಲ್ಲ ಎಂಬ ಧೋರಣೆ ಸಾಧಕನಿಗೆ ಸಲ್ಲದು. ಸ್ವಂತ ಪರಿಶ್ರಮ, ಹೊಸತನ್ನು ಕಲಿಯುವ ರೂಢಿಸಿಕೊಳ್ಳುವ ಹಪಾಹಪಿ ಇರಬೇಕು. ಇಂದಿನ ವಿದ್ಯಾರ್ಥಿಗಳನ್ನು ಗಮನಿಸಿದರೆ ತಿಳಿಯುತ್ತದೆ. ಬಹುತೇಕರು ಫೋನಿನಲ್ಲಿಯೇ ಮುಳುಗಿ ಹೋಗಿರುತ್ತಾರೆ. ಸಂತೆ ಹೊತ್ತಿಗೆ ಮೂರು ಮೊಳ ಎಂಬಂತೆ ಏನೋ ಒಂದಷ್ಟನ್ನು ಫೋನಿನಲ್ಲಿಯೇ ಓದಿಕೊಂಡು ಹೋಗಿ ಬರೆದು, ಅಲ್ಲಿಯೇ ಮರೆತೂ ಬಂದುಬಿಡುತ್ತಾರೆ. ಕೆ.ಎ.ಎಸ್ ಐ.ಎ.ಎಸ್ ಬ್ಯಾಂಕ್ ಪರೀಕ್ಷೆ ತೆಗೆದುಕೊಳ್ಳುತ್ತೇವೆ ಎನ್ನುತ್ತಾರೆ, ಸಾಮಾನ್ಯ ಜ್ಞಾನವೇ ಇರುವುದಿಲ್ಲ. ದಿನಪತ್ರಿಕೆ ಓದುವ ರೂಢಿ ಇರುವುದಿಲ್ಲ.

ಎಸ್ಸೆಸ್ಸೆಲ್ಸಿಯಾಗಲೀ, ಪಿಯುಸಿಯಾಗಲೀ ಎರಡೂ ಜೀವನದ ಅತಿಮುಖ್ಯ ಮಜಲುಗಳೇ. ಅವುಗಳ ನಂತರ ಅಂದುಕೊಂಡತೆಯೇ ಆದರೆ ಅದಕ್ಕಿಂತ ಸಂತೋಷ ಇನ್ನೊಂದಿಲ್ಲ ಆಗದಿದ್ದ ಪಕ್ಷದಲ್ಲಿ ಅದು ದುರಂತಮಯವೂ ಅಲ್ಲ. World is Full of Opportunities ಎನ್ನುವ ನಾಣ್ಣುಡಿಯಂತೆ ಅವಕಾಶಗಳ ಬಾಗಿಲುಗಳು ತೆರೆದಿರುತ್ತವೆ ನಾವು ಗುರುತಿಸಬೇಕಷ್ಟೇ. ಪ್ರತಿ ಅವಕಾಶಗಳೂ ಸುವರ್ಣಾವಕಾಶಗಳೇ.

ಭೀಮಾ ಜ್ಯುವೆಲ್ಸ್‌ಗೆ ದಕ್ಷಿಣ ಖ್ಯಾತ ನಟ ರಾಮ್‌ಚರಣ್ ಬ್ರಾಂಡ್ ಅಂಬಾಸಿಡರ್



ಮೈಸೂರು,ಏ.10–ಹೆಸರಾತ ಆಭರಣ ಮಳಿಗೆ ಭೀಮಾ ಜ್ಯುವೆಲ್ಸ್‌ಗೆ ಖ್ಯಾತ ನಟ ರಾಮ್‌ಚರಣ್ ಅವರು ಅಧಿಕೃತ ಬ್ರಾಂಡ್ ಅಂಬಾಸಿಡರ್ ಆಗಿದ್ದಾರೆ ಎಂದು ಭೀಮಾ ಜ್ಯುವೆಲ್ಸ್ ಪ್ರಕಟಣೆ ತಿಳಿಸಿದೆ.

ರಾಮ್‌ಚರಣ್ ಅವರೊಂದಿಗಿನ ನಮ್ಮ ಸಹಯೋಗವು ನಿಸ್ಸಂದೇಹವಾಗಿ ನಮ್ಮ ಬ್ರ್ಯಾಂಡ್‌ನ ಪಯಣದಲ್ಲಿ ಮಹತ್ವದ ಕ್ಷಣವನ್ನು ಗುರುತಿಸುತ್ತದೆ. ಅವರಂತಹ ಕ್ರಿಯಾತ್ಮಕ ನಟರೊಂದಿಗೆ ಕೈಜೋಡಿಸುವ ಮೂಲಕ, ನಾವು ಕರಕುಶಲತೆ ಮತ್ತು ಸಿನಿಮೀಯ ವರ್ಚಸ್ಸಿನ ಸಮ್ಮಿಳನವನ್ನು ರಚಿಸುತ್ತಿದ್ದೇವೆ. ಈ ಪಾಲುದಾರಿಕೆಯು ಗುಣಮಟ್ಟ ಮತ್ತು ಶ್ರೇಷ್ಠತೆಗೆ ನಮ್ಮ ಬದ್ಧತೆ ಬಗ್ಗೆ ಹೇಳುತ್ತದೆ. ರಾಮ್‌ಚರಣ್ ಅವರ ಸಾರ್ವತ್ರಿಕ ಮನವಿಯು ನಿಸ್ಸಂದೇಹವಾಗಿ ನಮ್ಮ ವೈವಿಧ್ಯಮಯ ಪ್ರೇಕ್ಷಕರನ್ನು ಅನುರಣಿಸುತ್ತದೆ. ಮುಂಬರುವ ಪೀಳಿಗೆಗೆ ಪಾಲಿಸಬೇಕಾದ ಸೌಂದರ್ಯ ಮತ್ತು ಆಚರಣೆ ಕ್ಷಣಗಳನ್ನು ರಚಿಸಲು ನಾವು ಸಿದ್ಧರಾಗಿದ್ದೇವೆ. ಭೀಮಾ ಜ್ಯುವೆಲ್‌ನ ಶತಮಾನದ ಸುದೀರ್ಘ ಪರಂಪರೆಯಲ್ಲಿ ಯಶಸ್ವಿ ಸಹಯೋಗ ಮತ್ತು ಅತ್ಯಾಕರ್ಷಕ ಹೊಸ ಅಧ್ಯಾಯದ ಆರಂಭ ಇಲ್ಲಿದೆ ಎಂದು ಭೀಮಾ ಜ್ಯುವೆಲ್ಸ್ ಅಧ್ಯಕ್ಷ ಬಿ. ಬಿಂದುಮಾಧವ್ ಹೇಳಿದರು.

ಭೀಮಾ ಜ್ಯುವೆಲ್ಸ್, ಆಂಧ್ರಪ್ರದೇಶ, ತೆಲಂಗಾಣ, ಭಾರತ ಮತ್ತು ಯುಎಇ ಯಾದ್ಯಂತ ಶೋರೂಮ್‌ಗಳೊಂದಿಗೆ ಉತ್ತಮವಾದ ಶಾಪಿಂಗ್ ಅನುಭವ ಮತ್ತು ವ್ಯಾಪಕ ಶ್ರೇಣಿಯ ಅಧಿಕೃತ ವಿನ್ಯಾಸಗಳಿಗೆ ತಾಣವಾಗಿದೆ. ಏಕೆಂದರೆ ನೀವು ಅತ್ಯುತ್ತಮವಾದವುಗಳಿಗೆ ಅರ್ಹರು. ಭೀಮಾ ಜ್ಯುವೆಲ್ಸ್ ಮತ್ತು ನಾನು ಅತ್ಯುತ್ತಮವಾದುದನ್ನು ನಂಬುತ್ತೇನೆ. ಭೀಮಾ ಜ್ಯುವೆಲ್ಸ್ ಮತ್ತು ರಾಮ್‌ಚರಣ್ ನಡುವಿನ ಸಹಯೋಗವು ಆಕರ್ಷಕ ಜಾಹೀರಾತು ಪ್ರಚಾರ ಮತ್ತು ನಟನ ವಿಶಿಷ್ಟ ಶೈಲಿಯನ್ನು ಪ್ರದರ್ಶಿಸುವ ವಿಶೇಷ ಸಂಗ್ರಹಗಳ ಮೂಲಕ ತೆರೆದುಕೊಳ್ಳಲು ಸಿದ್ಧವಾಗಿದೆ ಮತ್ತು ಭೀಮಾ ಜ್ಯುವೆಲ್ಸ್ ಗುಣಮಟ್ಟ ಮತ್ತು ನಾವೀನ್ಯತೆಗೆ ಬದ್ಧತೆಯನ್ನು ಎತ್ತಿ ತೋರಿಸುತ್ತದೆ ಎಂದಿದ್ದಾರೆ.

ರಸ್ತೆಬದಿ ನಿಲ್ಲಿಸಿದ್ದ ಸ್ಕೂಟರ್ ಕಳವು

ಮೈಸೂರು, ಏ.10(ಎಂಕೆ)–ರಸ್ತೆಬದಿ ನಿಲ್ಲಿಸಿದ್ದ ಸ್ಕೂಟರ್ ಕದ್ದೊಯ್ದಿರುವ ಘಟನೆ ನಡೆದಿದೆ. ಮೈಸೂರಿನ ಅಗ್ರಹಾರ ನಿವಾಸಿ ಶ್ರೀನಿವಾಸ್ ಎಂಬುವರು ಏ.4 ರಂದು ಮುಂಜಾನೆ ಅಶೋಕ ರಸ್ತೆ (ಮಹಾಲಕ್ಷ್ಮಿ ಸ್ವೀಟ್ ಸಮೀಪ) ಬದಿಯಲ್ಲಿ ತಮ್ಮ ಹೋಂಡಾ ಡಿಯೋ(ಕೆಎ05 ಹೆಚ್‌ಯು5828) ಸ್ಕೂಟರ್ ನಿಲ್ಲಿಸಿ ಹೋಗಿದ್ದಾರೆ. ಮಧ್ಯಾಹ್ನ 12 ಗಂಟೆಗೆ ವಾಪಸ್ ಬಂದು ನೋಡಿದಾಗ ಸ್ಕೂಟರ್ ಕಳ್ಳತನವಾಗಿರುವುದು ಗೊತ್ತಾ ಗಿದೆ. ಈ ಸಂಬಂಧ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಾಂಗ್ರೆಸ್ ಅಭ್ಯರ್ಥಿ ಪರ ಎಂ.ಕೆ.ಸೋಮಶೇಖರ್ ಪ್ರಚಾರ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರವಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.49ರಲ್ಲಿ ಕಾಂಗ್ರೆಸ್ ಮುಖಂಡರು ಮತ ಯಾಚಿಸಿದರು.

ಮೈಸೂರು, ಏ.10(ಜಿಎ)–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.49ರ ಹುಲ್ಲಿನ ಬೀದಿ ಶ್ರೀ ಮಲ್ಲೆ ಮಹದೇಶ್ವರ ದೇವಸ್ಥಾನದ ಬಳಿ ಯಿಂದ ಮತಯಾಚನೆ ಮಾಡಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮ ಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇರ್, ಶ್ರೀಧರ್ ಮನೆ ಮನೆಗಳಿಗೆ ಭೇಟಿ ನೀಡಿ ಮತಯಾಚನೆ ಮಾಡಿ, ಕಾಂಗ್ರೆಸ್ ಸರ್ಕಾರದ ಸಾಧನೆ ಮತ್ತು ಗ್ಯಾರಂಟಿಗಳ ಬಗ್ಗೆ ತಿಳಿಸಿ, ಕಾಂಗ್ರೆಸ್‌ಗೆ ಮತ ನೀಡುವಂತೆ ಮನವಿ ಮಾಡಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಮಾಜಿ ನಗರಾಧ್ಯಕ್ಷ ಟಿ.ಎಸ್.ರವಿ ಶಂಕರ್, ಪ್ರಧಾನ ಕಾರ್ಯದರ್ಶಿ ಭಾಸ್ಕರ್ ಎಲ್.ಗೌಡ, ಮಾಜಿ ಪಾಲಿಕೆ ಸದಸ್ಯರಾದ ಕೆ.ವಿ.ಮಲ್ಲೇಶ್, ಶೋಭಾ ಮೋಹನ್, ಪಲ್ಲವಿ ಬೇಗಂ, ಆರ್.ಹೆಚ್.ಕುಮಾರ್, ಮುಖಂಡರಾದ ಹರೀಶ್, ವಿಜಯ್‌ಕುಮಾರ್, ಶಿವಕುಮಾರ್, ಡಾ.ಸುಜಾತ ರಾವ್, ಕೇಬಲ್ ಶೇಖರ್, ವಾರ್ಡ್ ಅಧ್ಯಕ್ಷರಾದ ಮಹ್ಮದ್ ಫಾರೂಖ್, ಕಲೀಂ ಷರೀಫ್, ಅಭಿಷೇಕ್ ಶಿವಣ್ಣ, ಟೈಲರ್ ಮಹದೇವು, ರಾಘವೇಂದ್ರ, ಲೋಕೇಶ್, ಮೋಹನ್, ಮಂಜು, ಶಿವರಾಮು, ಆನಂದ್, ಚಿಕ್ಕಲಿಂಗು, ದೀಪು ಸೇರಿದಂತೆ ಇನ್ನಿತರರು ಹಾಜರಿದ್ದರು.

ಏ.14ರಂದು ಅಂಬೇಡ್ಕರ್ ಜಯಂತಿ

ಮೈಸೂರು, ಏ.10– ವಿಜಯನಗರ ಮೊದಲನೇ ಹಂತದ ಡಿ.ಸಂಜೀವಯ್ಯ ಸ್ಮಾರಕ ಶಿಕ್ಷಣ ಸಂಸ್ಥೆಯ ಆವರಣದಲ್ಲಿರುವ ಬುದ್ಧವಿಹಾರದಲ್ಲಿ ಕರ್ನಾಟಕ ಬುದ್ಧಧಮ್ಮ ಸಮಿತಿ ವತಿಯಿಂದ ಏ.14ರ ಭಾನುವಾರ ಸಂಜೆ 6 ಗಂಟೆಗೆ ಬೋಧಿಸತ್ವ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜಯಂತಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದ ಸಮ್ಮುಖವನ್ನು ಕೊಳ್ಳೇಗಾಲ ತಾಲೂಕಿನ ಚೆನ್ನಲಿಂಗಾನಹಳ್ಳಿಯ ಜೇತವನ ಬುದ್ಧವಿಹಾರದ ಮನೋರಕ್ಖಿತ ಭಂತೇಜಿಯವರು ವಹಿಸುವರು. ಸೋದೆ ಭಂತೇಜಿಯವರು ಬುದ್ಧವಂದನೆಯನ್ನು ನೆರವೇರಿಸಿ ಕೊಡುವರು. ನಂತರ ಭಗವಾನ್ ಬುದ್ಧರಿಗೆ ಹಾಗೂ ಬಾಬಾ ಸಾಹೇಬರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಗುವುದು. ಮುಖ್ಯ ಅತಿಥಿಗಳಾಗಿ ವಿಚಾರವಾದಿ ಡಾ.ವಿ.ಲಕ್ಷ್ಮಿ ನಾರಾಯಣ ಭಾಗವಹಿಸುವರು. ಮೈವಿವಿ ಸಿಂಡಿಕೇಟ್ ಮಾಜಿ ಸದಸ್ಯರು ಹಾಗೂ ಕರ್ನಾಟಕ ಬುದ್ಧಧಮ್ಮ ಸಮಿತಿ ಅಧ್ಯಕ್ಷ ಪ್ರೊ.ಡಿ.ನಂಜುಂಡಯ್ಯ ಅಧ್ಯಕ್ಷತೆ ವಹಿಸುವರು. ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ಪ್ರಾಸ್ತಾವಿಕ ಮಾತುಗಳನ್ನಾಡುವರು. ಸಹ ಕಾರ್ಯದರ್ಶಿ ಎಚ್.ಶಿವರಾಜ್, ಆರ್.ನಟರಾಜು, ಸಮಿತಿಯ ಪದಾಧಿಕಾರಿಗಳು, ಮುಖಂಡರು, ಸಂಶೋಧಕರು ಭಾಗವಹಿಸುವರು ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿ ಆರ್.ಮಹಾದೇವಪ್ಪ ತಿಳಿಸಿದ್ದಾರೆ.



ಜಯಪುರದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ನಡೆದ ಕಂಡಾಯ ಉತ್ಸವದಲ್ಲಿ ಪಾಲ್ಗೊಂಡು ಅನ್ನ ದಾಸೋಹಕ್ಕೆ ವೈಯಕ್ತಿಕವಾಗಿ 15 ಸಾವಿರ ರೂ.ಗಳ ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಜಯಪುರ ಮಂಟೇ ಸ್ವಾಮಿ ಸೇವಾ ಸಮಿತಿ ಸದಸ್ಯರು ಆತ್ಮೀಯವಾಗಿ ಅಭಿನಂದಿಸಿದರು.





ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾತಿ, ಧರ್ಮ ಮೀರಿ ಗ್ಯಾರಂಟಿ ಯೋಜನೆ ಅನುಷ್ಠಾನ

ಶಾಸಕ ನರೇಂದ್ರಸ್ವಾಮಿ ಸ್ಪಷ್ಟೋಕ್ತಿ, ಹಲಗೂರು ಭಾಗದಲ್ಲಿ ಸ್ಟಾರ್ ಚಂದ್ರು ಅಬ್ಬರದ ಪ್ರಚಾರ



ಹಲಗೂರು ವ್ಯಾಪ್ತಿಯಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮತ್ತು ಅಭ್ಯರ್ಥಿ ಸ್ಟಾರ್‌ಚಂದ್ರು ಮತ ಯಾಚಿಸುತ್ತಿರುವುದು

ಹಲಗೂರು,ಏ.10–ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜಾತಿ, ಧರ್ಮ ಮೀರಿ ದೇಶದ ಎಲ್ಲಾ ವರ್ಗದವರಿಗೂ ದೇಶದ ಸಂಪತ್ತು ಸಮಾನ ಹಂಚಿಕೆ, ಪ್ರತಿ ಒಂದು ವರ್ಷಕ್ಕೆ ಮಹಿಳೆಯರಿಗೆ ಒಂದು ಲಕ್ಷ ನಿರುದ್ಯೋಗ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡಲಾಗುವುದು ಎಂದು ಪಕ್ಷದ ಪ್ರಣಾಳಿಕೆಯಾಗಿದೆ. ಅಧಿಕಾರಕ್ಕೆ ಬಂದ ಕೂಡಲೇ ಜಾತಿ, ಧರ್ಮ ಮೀರಿ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಲಾಗುವುದು ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಮಳವಳ್ಳಿ ತಾಲೂಕಿನ ಹಲಗೂರು ವ್ಯಾಪ್ತಿಯ ದಳವಾಯಿ ಕೋಡಿಹಳ್ಳಿ, ಹೆಚ್.ಬಸಾಪುರ, ಬ್ಯಾಡರಹಳ್ಳಿ, ಲಿಂಗಪಟ್ಟಣ, ನಿಟ್ಟೂರು, ಯತ್ತುಬಾಡಿ, ಅಗಸನಪುರ, ಹಾಡ್ಲಿ, ಟಿ.ಕೆ.ಹಳ್ಳಿ, ಡಿ.ಹಲಸಹಳ್ಳಿ ಹಾಗೂ ಹಲಗೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಬಿರುಸಿನ ಚುನಾವಣೆ ಪ್ರಚಾರ ಸಭೆ ಉದ್ದೇಶಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಪ್ರಮುಖ ಪ್ರಣಾಳಿಕೆಯಾದ ದೇಶದ ಸಂಪತ್ತನ್ನು ಜಾತಿ, ಧರ್ಮ ಮೀರಿ ದೇಶದ ಜನತೆಗೆ ಸಮಾನ ಹಂಚಿಕೆ ಹಾಗೂ ಪ್ರತಿ ಮಹಿಳೆಗೆ ಪ್ರತಿ ವರ್ಷಕ್ಕೆ ಒಂದು ಲಕ್ಷ ಹಾಗೂ ನಿರುದ್ಯೋಗ ಯುವತಿ, ಯುವಕರಿಗೆ ಉದ್ಯೋಗ ಜಾತಿ, ಧರ್ಮ ಮೀರಿ ಗ್ಯಾರಂಟಿ ಯೋಜನೆಗಳನ್ನು ಅಧಿಕಾರಕ್ಕೆ ಬಂದ ಕೂಡಲೇ ಜಾರಿಗೆ ಬರುವುದು ಎಂದರು.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ತೀವ್ರ ಬರಗಾಲದಿಂದ ತತ್ತರಿಸುತ್ತಿರುವಾಗ ಸಂದರ್ಭದಲ್ಲಿ ಹಾಗೂ ಕುಡಿಯುವ ನೀರಿಗಾಗಿ ತತ್ವಾರ ಪಡುತ್ತಿರುವ ಸಂದರ್ಭದಲ್ಲಿ ರಾಜ್ಯಕ್ಕೆ ನಯಾಪೈಸೆ ಬರಪರಿಹಾರ ನೀಡದೇ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿರುವ ಹಾಗೂ ಸಂಕಷ್ಟ ಸಮಯದಲ್ಲಿ ಇತ್ತ ಮುಖ ಮಾಡದ ಬಿಜೆಪಿ, ಜೆಡಿಎಸ್ ನಾಯಕರು ಯಾವ ಮುಖ ಹೊತ್ತುಕೊಂಡು ಓಟು ಕೇಳಲು ಬರುತ್ತಿದ್ದಾರೆ. ರಾಜ್ಯಕ್ಕೆ ಕಿಂಚಿತ್ತೂ ನೆರವು ನೀಡದ ಕೇಂದ್ರ ಸರ್ಕಾರದ ಧೋರಣೆ ನೋಡಿದರೆ ಅವರ ಒಕ್ಕೂಟ ವ್ಯವಸ್ಥೆಗೆ ನಮ್ಮ ರಾಜ್ಯ ಸೇರಿಲ್ಲವೇ ಎಂದು ಕಿಡಿಕಾರಿದರು.

ಕೇಂದ್ರ ಬಿಜೆಪಿ ಸರ್ಕಾರ ಜನ ವಿರೋಧಿ, ರೈತಾ ವಿರೋಧಿ, ಸಂವಿಧಾನ ವಿರೋಧಿ ಸರ್ಕಾರ ಬೆಲೆ ಏರಿಕೆಯಿಂದಾಗಿ ಜನ ಸಾಮಾನ್ಯರು ಬಳಲುತ್ತಿದ್ದಾರೆ. ಭೂ ಸ್ವಾಧೀನ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆ ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿದೆ ಎಂದರು.

ಜಿಲ್ಲೆಯ ಮಳವಳ್ಳಿ ತಾಲೂಕಿನ ಅಭಿವೃದ್ಧಿಗೆ ಒಂದೇ ಒಂದು ಯೋಜನೆ ನೀಡದ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಕೇವಲ ಮಂತ್ರಿಯಾಗಲು ಮತ ಕೇಳುತ್ತಿದ್ದಾರೆ. ಜಿಲ್ಲೆಯಲ್ಲಿ ಬರ ಬಂದರು ಬಾರದ ಇವರು, ಹನುಮ ಧ್ವಜ ವಿಚಾರವಾಗಿ ಬೆಂಕಿ ಹಚ್ಚಲಿಕೆ ಬಂದರು. ಅವರ ಆಟ ಜಿಲ್ಲೆಯಲ್ಲಿ ಏನೂ ನಡೆಯಲ್ಲ. ಜಿಲ್ಲೆಯ ನಿಜವಾದ ಮಣ್ಣಿನ ಮಗ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ವೆಂಕಟರಮಣೇಗೌಡ ಅವರಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ಗೆಲ್ಲಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮಾತನಾಡಿ, ಈ ಚುನಾವಣೆಯಲ್ಲಿ ಮತದಾರರು ನನ್ನನ್ನು ಬೆಂಬಲಿಸುವ ಮೂಲಕ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಲಿದ್ದಾರೆ. ಪ್ರಚಾರಕ್ಕೆ ಹೋದಕಡೆಯಲ್ಲೆಲ್ಲ ಜನರು ತೋರುತ್ತಿರುವ ಪ್ರೀತಿ, ಅಭಿಮಾನ ನನ್ನ ಗೆಲುವಿನ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು.

ಸುಡುಬಿಸಿಲಿನಲ್ಲೂ ಜನರು ರಸ್ತೆಯಲ್ಲಿ ನನಗಾಗಿ ಕಾಯುತ್ತ ನಿಂತಿರುವುದನ್ನು ಕಂಡರೆ ಅವರ ಪ್ರೀತಿ ವಿಶ್ವಾಸಕ್ಕೆ ಚಿರಋಣಿಯಾಗಿದ್ದಾನೆ. ಚುನಾವಣೆಯಲ್ಲಿ ಗೆಲುವು ನಿಶ್ಚಿತವಾಗಿದ್ದು. ರೈತಾಪಿ ವರ್ಗವೇ ಹೆಚ್ಚಾಗಿರುವ ಮಳವಳ್ಳಿ ತಾಲೂಕು ಅನೇಕ ಪ್ರವಾಸಿತಾಣ ಗಳು, ಪುಣ್ಯಕ್ಷೇತ್ರಗಳನ್ನು ಒಳಗೊಂಡಿದೆ. ಕೇಂದ್ರದಿಂದ ವಿಶೇಷ ಅನುದಾನ ತಂದು ಇಲ್ಲಿನ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಿದರೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಿ ಆರ್ಥಿಕವಾಗಿ ಸದೃಢರಾಗಲಿದ್ದಾರೆ ಎಂದು ತಿಳಿಸಿದರು.

ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ನನಗೆ ರೈತರ ಕಷ್ಟಸುಖ ಗೊತ್ತಿದೆ. ದೇವರು ನನಗೆ ಎಲ್ಲವನ್ನೂ ಕೊಟ್ಟಿದ್ದಾನೆ. ಹಣ ಮಾಡಲು ರಾಜಕೀಯಕ್ಕೆ ಬಂದಿಲ್ಲ. ಸಂಸತ್ತಿನಲ್ಲಿ ಜನರ ದನಿಯಾಗಲು ಬಂದಿದ್ದೇನೆ. ಜನ ನನ್ನನ್ನು ಆಶೀರ್ವದಿಸುವ ಸಂಪೂರ್ಣ ವಿಶ್ವಾಸವಿದೆ ಎಂದು ಹೇಳಿದರು.

ಮಾಜಿ ಎಂಎಲ್‌ಸಿ ಸದಸ್ಯ ಮರಿತಿಬ್ಬೇಗೌಡ, ಶ್ರೀರಂಗಪಟ್ಟಣ ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಮುಖಂಡರಾದ ದಡದಪುರ ಶಿವಣ್ಣ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜು, ಗ್ರಾಪಂ ಅಧ್ಯಕ್ಷೆ ರಕ್ಷಿತ ಜೀವನ್ ಕುಮಾರ್, ಉಪಾಧ್ಯಕ್ಷೆ ಲತಾ ಮಹದೇವ್, ಕಾಂಗ್ರೆಸ್ ಮುಖಂಡರಾದ ಹೆಚ್.ವಿ.ರಾಜಣ್ಣ ಸಾಗ್ಯ ಕೆಂಪಣ್ಣ, ಗೋಪಾಲ್, ಲಿಯಾಕತ್ ಅಲಿ, ಜಮೀಲ್, ಸದ್ರುಲ್, ಮರಿಸ್ವಾಮಿ, ಕೀರ್ತಿ, ಜೀವನ್‌ಕುಮಾರ್, ಶಿವಣ್ಣ ಮಂಜು, ಮೋಹನ್, ಚಂದ್ರಕು ಮಾರ್, ಬಾಗೋ ಕುಮಾರ್, ನವೀನ್, ಚಂದನ್ ಇದ್ದರು.

ಅಣ್ಣನ ಗೆಲುವಿಗಾಗಿ ಮಠಗಳಿಗೆ ಸುತ್ತಿದ ತಮ್ಮ



ಹಲಗೂರು,ಏ.10– ತಾಲೂಕಿನ ಗವಿಮಠ, ಧನಗೂರು, ಡಿ.ಹಲಸಹಳ್ಳಿ, ಹೆಬ್ಬಣಿ ಹಾಗೂ ಬಿ.ಜಿ.ಪುರದ ಮಠ ಹಾಗೂ ಇತರೆ ಪ್ರಮುಖ ಮಠಗಳಿಗೆ ಹೆಚ್.ಡಿ ಕುಮಾರಸ್ವಾಮಿ ಕಿರಿಯ ಸಹೋದರ ಹೆಚ್.ಡಿ.ರಮೇಶ್ ಹಾಗೂ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಾ.ಕೆ.ಅನ್ನದಾನಿಯವರು ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು. ಇದೇ ವೇಳೆ ಮಾತನಾಡಿದ ಹೆಚ್.ಡಿ.ರಮೇಶ್, ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸಿದ್ದು ಅವರ ಗೆಲುವಿಗೆ ಮಳವಳ್ಳಿ ತಾಲೂಕಿನಲ್ಲಿರುವ ಮಠಾಧೀಶರ ಆಶೀರ್ವಾದವನ್ನು ಪಡೆದು ತಾಲೂಕಿನ ಜೆಡಿಎಸ್ ಹಾಗೂ ಬಿಜೆಪಿ ಮುಖಂಡರ ಜೊತೆಗೆ ಎನ್‌ಡಿಎ ಮೈತ್ರಿ ಅಭ್ಯರ್ಥಿ ಕುಮಾರಸ್ವಾಮಿ ಗೆಲುವಿನ ಚರ್ಚೆ ಮಾಡುವುದಾಗಿ ತಿಳಿಸಿದರು. ಕೆಎಂಎಫ್ ನಿರ್ದೇಶಕ ವಡ್ಡರಹಳ್ಳಿ ವಿಶ್ವನಾಥ್, ಇತರ ಮುಖಂಡರು ಉಪಸ್ಥಿತಿ ಇದ್ದರು.

ದ್ವಿತೀಯ ಪಿಯು ಫಲಿತಾಂಶದಲ್ಲಿ ಏರಿಕೆ ಕಂಡರೂ 24ನೇ ಸ್ಥಾನಕ್ಕೆ ಕುಸಿದ ಮಂಡ್ಯ

ಮಂಡ್ಯ,ಏ.10– ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಜಿಲ್ಲೆಯು 24ನೇ ಸ್ಥಾನಕ್ಕೆ ಇಳಿಕೆ ಕಂಡಿದೆ. ಕಳೆದ ವರ್ಷ ಶೇ.77.47 ರಷ್ಟು ಫಲಿತಾಂಶದೊಂದಿಗೆ 20ನೇ ಸ್ಥಾನ ಪಡೆದಿತ್ತು. ಆದರೆ ಈ ಬಾರಿ ಫಲಿತಾಂಶದಲ್ಲಿ ಶೇ.80.56ರಷ್ಟು ಏರಿಕೆಯಾಗಿದ್ದರೂ 24ನೇ ಸ್ಥಾನ ಪಡೆದಿದೆ. ಸ್ಥಾನದಲ್ಲಿ ವ್ಯತ್ಯಾಸವಾಗಿದ್ದರೂ ಫಲಿತಾಂಶದಲ್ಲಿ ಏರಿಕೆ ಕಂಡಿರುವುದು ಕೊಂಚ ಉತ್ತಮ ಬೆಳವಣಿಗೆಯಾಗಿದೆ.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಎಸ್‌ಟಿಜಿ ಕಾಲೇಜಿನ ವಿಜ್ಞಾನದ ವಿಭಾಗದ ವಿದ್ಯಾರ್ಥಿನಿ ಪ್ರಗತಿ.ಬಿ.ಆರ್(592) ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಅದೇ ಕಾಲೇಜಿನ ವಿಜ್ಞಾನ ವಿಭಾಗದ ಜೀವನ್ ಗೌಡ

ಪ್ರಗತಿ ಜಿಲ್ಲೆಗೆ ಟಾಪರ್

ಬಿ.ಎಸ್(590) ದ್ವಿತೀಯ ಸ್ಥಾನ ಪಡೆದರೆ, ವಿದ್ಯಾರ್ಥಿನಿ ವರ್ಷಿಣಿ.ಜಿ(589) ತೃತೀಯ ಸ್ಥಾನ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಉಳಿದಂತೆ ಕಲಾವಿಭಾಗದಲ್ಲಿ ಕೆ.ಆರ್.ಪೇಟೆಯ ಶ್ರೀ ಕೆವಿಆರ್ ಪಿಯು ಕಾಲೇಜಿನ ಕಾವ್ಯ(586) ಪ್ರಥಮ, ಬೆಳಕವಾಡಿಯ ಎಸ್.ಎಸ್.ಸ್ವಾಮಿ ಪಿಯು ಕಾಲೇಜಿನ ಮಾದೇಶ.ವಿ(583) ದ್ವಿತೀಯ ಹಾಗೂ ರಕ್ಷಿತಾ.ಡಿ (575) ತೃತೀಯ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಮಂಡ್ಯದ ಕಾವೇರಿನಗರದ ಸದ್ವಿದ್ಯಾ ಪಿಯು ಕಾಲೇಜಿನ ಆಯುಷ್.ಡಿ(587) ಪ್ರಥಮ, ಮಂಡ್ಯ ತಾಲೂಕಿನ ಕ್ಯಾತುಂಗೆರೆಯ ಸಾಂಥೋಂ ಪಿಯು ಕಾಲೇಜಿನ ಎಂ.ಎಸ್.ಗುರುಕಿರಣ್(585) ದ್ವಿತೀಯ, ನಗರದ ಕಾರ್ಮೆಲ್ ಕಾನ್ವೆಂಟ್ ಕಾಲೇಜಿನ ಪಲ್ಲವಿ.ಆರ್ (584) ತೃತೀಯ ಸ್ಥಾನ ಪಡೆದಿದ್ದಾರೆ.

ಜಿಲ್ಲೆಯಾದ್ಯಂತ 12,218 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಅದರಲ್ಲಿ 9843 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಲಾ ವಿಭಾಗದಲ್ಲಿ 2297 ವಿದ್ಯಾರ್ಥಿಗಳ ಪೈಕಿ 1442(ಶೇ.62.78), ವಾಣಿಜ್ಯ ವಿಭಾಗದಲ್ಲಿ 4030 ವಿದ್ಯಾರ್ಥಿಗಳ ಪೈಕಿ 3192 (ಶೇ.79.21) ಹಾಗೂ ವಿಜ್ಞಾನ ವಿಭಾಗದಲ್ಲಿ 5891 ವಿದ್ಯಾರ್ಥಿಗಳ ಪೈಕಿ 5209 (ಶೇ.88.42) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಯುಗಾದಿ ಹಬ್ಬದಂದು ಮಂಡ್ಯದಲ್ಲಿ ರೌಡಿಶೀಟರ್‌ನ ಬರ್ಬರ ಹತ್ಯೆ



ಮಂಡ್ಯ,ಏ.10–ಯುಗಾದಿ ಹಬ್ಬದಂದು ರಾತ್ರಿ ರೌಡಿಶೀಟರ್ ಒಬ್ಬನನ್ನ ಬರ್ಬರವಾಗಿ ಹತ್ಯೆ ಮಾಡಲಾಗಿರುವ ಘಟನೆ ಮಂಡ್ಯದ ಸ್ವರ್ಣಸಂದ್ರದಲ್ಲಿ ಸಂಭವಿಸಿದೆ.

ಮೂಲತಃ ಚಿಕ್ಕೇಗೌಡನದೊಡ್ಡಿ ಗ್ರಾಮದ, ಹಾಲಿ ಆನೆಕೆರೆ ಬೀದಿಯ ಕೆಂಪೇಗೌಡ ರಸ್ತೆಯಲ್ಲಿ ವಾಸವಾಗಿದ್ದ ರೌಡಿ ಶೀಟರ್ ಅಕ್ಷಯ್(24) ಎಂಬಾತನನ್ನು ಮಾರಕಾಸ್ತ್ರದಿಂದ ಹತ್ಯೆ ಮಾಡಲಾಗಿದ್ದು, ಹತ್ಯೆ ನಡೆಸಿರುವ ಪ್ರಮುಖ ಆರೋಪಿ ಭರತ್ ಸೇರಿದಂತೆ ಹಲವರು ಪರಾರಿಯಾಗಿದ್ದಾರೆ.


ಅಕ್ಷಯ್ ಸ್ನೇಹಿತ ಭರತ್ ಎಂಬಾತನ ತಾಯಿ ಖಾಸಗಿ ಸಂಸ್ಥೆಯಲ್ಲಿ ಅಕ್ಷಯ್ ತಾಯಿಗೆ 25 ಸಾವಿರ ಸಾಲ ತೆಗೆದು ಕೊಟ್ಟಿದ್ದರು. ಮರು ಪಾವತಿಸದ ಹಿನ್ನೆಲೆಯಲ್ಲಿ ಕಳೆದ ಫೆಬ್ರವರಿಯಲ್ಲಿ ಚಿಕ್ಕೇಗೌಡನದೊಡ್ಡಿಯ ಮನೆಯ ಬಳಿ ಹೋಗಿದ್ದ ಭರತ್ ಮತ್ತು ಆತನ ತಾಯಿ ಹಣ ನೀಡುವಂತೆ ಒತ್ತಾಯಿಸಿದಾಗ ಇಬ್ಬರು ಮಹಿಳೆಯರ ಜೊತೆ ಜಗಳ ನಡೆದು ಇದೇ ವೇಳೆ ಭರತ್ ಮತ್ತು ಅಕ್ಷಯ್ ನಡುವೆ ಗಲಾಟೆಯಾಗಿ ಭರತ್ ಮತ್ತು ಆತನ ತಾಯಿ ಮೇಲೆ ಅಕ್ಷಯ್ ಹಾಗೂ ಆತನ ಸ್ನೇಹಿತರು ಹಲ್ಲೆ ಮಾಡಿದ್ದರಂತೆ. ಈ ಬಗ್ಗೆ ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ಮಂಗಳವಾರ ಅಕ್ಷಯ್ ಸ್ವರ್ಣಸಂದ್ರಕ್ಕೆ ತೆರಳಿದ್ದನು. ಇಸ್ಪೀಟ್ ಆಡುತ್ತಿರುವ ವೇಳೆ ಅಕ್ಷಯ್ ಹಾಗೂ ಭರತ್ ಮುಖಾಮುಖಿಯಾಗಿದ್ದರು. ಬಡಾವಣೆಗೆ ಬಂದಿರುವುದನ್ನು ಕಣ್ಣಾರೆ ಕಂಡ ಭರತ್ ಸ್ನೇಹಿತರ ಜೊತೆಗೂಡಿ ಹತ್ಯೆ ಮಾಡಲು ನಿರ್ಧರಿಸಿದ್ದು, ಅದರಂತೆ ಮಂಗಳವಾರ ರಾತ್ರಿ 11:30 ಸಮಯದಲ್ಲಿ ಅಕ್ಷಯ್ ಸ್ನೇಹಿತನ ಜೊತೆ ಬಡಾವಣೆಯ ದಾಸೇಗೌಡ ರಸ್ತೆಯ ಉದ್ಯಾನವನ ಬಳಿಯ ಅರಳಿ ಕಟ್ಟೆ ಬಳಿ ನಡೆದುಕೊಂಡು ಬರುತ್ತಿದ್ದಾಗ ದಾಳಿ ಮಾಡಿ ಮಾರಕಾಸ್ತ್ರದಿಂದ ಕೊಚ್ಚಿ ಕೊಲೆಗೈದಿದ್ದಾರೆ. ಜೊತೆಯಲ್ಲಿದ್ದ ಹೇಮಂತ್ ಮೇಲೂ ದಾಳಿ ಮಾಡಿದ್ದು, ಆತನಿಗೆ ಗಂಭೀರ ಗಾಯವಾಗಿದೆ.

ಪೂರ್ವ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಹತ್ಯೆ ಮಾಡಿ ಪರಾರಿಯಾಗಿರುವ ಆರೋಪಿಗಳ ಶೋಧ ಕೈಗೊಂಡಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪರಿಶೀಲನೆ

ಮಂಡ್ಯ,ಏ.10–ಮಂಡ್ಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಕ್ ತನ್ವೀರ್ ಆಸಿಫ್ ಬುಧವಾರ ಮಂಡ್ಯ ತಾಲೂಕಿನ ಬಸರಾಳು, ಹಲ್ಲೇಗೆರೆ ಹಾಗೂ ಬಿ.ಹೊಸೂರು ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಚರ್ಚಿಸಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪರಿಶೀಲಿಸಿದರು. ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಲ್ಲಿ ವೈಯಕ್ತಿಕ ಕೊಳವೆ ಬಾವಿಗಳ ಮೂಲಕ ನೀರು ಪೂರೈಕೆ ಮಾಡುವಂತಹ ಪರ್ಯಾಯ ಮಾರ್ಗಗಳನ್ನು ಅನುಸರಿಸಿ ತುರ್ತಾಗಿ ಸಮಸ್ಯೆ ಬಗೆಹರಿಸಲು ಕ್ರಮವಹಿಸುವಂತೆ ಹಾಗೂ ಮಳೆಯಾದ ನಂತರ ಕೊಳವೆ ಬಾವಿ ತೆಗೆಸಲು ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಭಾರತೀನಗರ ಸಮೀಪದ ದೊಡ್ಡರಸಿನಕೆರೆ ಶ್ರೀ ಸಣ್ಣಕ್ಕಿರಾಯಸ್ವಾಮಿ ದೇವಸ್ಥಾನದಲ್ಲಿ ಯುಗಾದಿ ಹಬ್ಬದ ಅಂಗವಾಗಿ ನೂತನ ಸಣ್ಣಕ್ಕಿರಾಯಸ್ವಾಮಿ ಬಸವನಿಗೆ ವಿಧಿ–ವಿಧಾನದೊಂದಿಗೆ ವಿಶೇಷ ಪೂಜೆ ನಡೆಯಿತು.

ಬೆದರಿಸಿ ವಕೀಲೆಯನ್ನು ಬೆತ್ತಲಾಗುವಂತೆ ಮಾಡಿ 14 ಲಕ್ಷ ದೋಚಿದ ಸೈಬರ್ ವಂಚಕರು

ಲಂಗು–ಲಗಾಮು ಇಲ್ಲದೆ ಮೆರೆಯುತ್ತಿರುವ ಆನ್‌ಲೈನ್ ವಂಚಕರು!

ಬೆಂಗಳೂರು,ಏ.10– ಬೆಂಗಳೂರಿನಲ್ಲಿ ವಕೀಲೆಯೊಬ್ಬರು 14 ಲಕ್ಷ ರೂ ವಂಚನೆಗೆ ಒಳಗಾಗಿರುವುದು ಮಾತ್ರವಲ್ಲದೆ, ಸೈಬರ್ ವಂಚಕರು ಆಕೆ ಕ್ಯಾಮರಾ ಎದುರೇ ಉಡುಪು ಕಳಚುವಂತೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ.

ವಕೀಲೆಯ ಬೆತ್ತಲೆ ವಿಡಿಯೋಗಳನ್ನು ಬಳಸಿಕೊಂಡು, ಬ್ಲ್ಯಾಕ್‌ಮೇಲ್ ಮೂಲಕ ಮತ್ತೆ 10 ಲಕ್ಷ ರೂ ಸುಲಿಗೆ ಮಾಡಲು ಅವರು ಪ್ರಯತ್ನಿಸಿದ್ದಾರೆ. ಕಾನೂನು ಹಾಗೂ ಸೈಬರ್ ವಂಚನೆಯ ಕುರಿತಾದ ತಿಳಿವಳಿಕೆ ಹೊಂದಿದ್ದರೂ, ಸ್ಕ್ಯಾಮರ್‌ಗಳ ಜಾಲಕ್ಕೆ ಬಿದ್ದ ಮಹಿಳೆ ಕೊನೆಗೂ ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ. 29 ವರ್ಷದ ವಕೀಲೆ, ಎರಡು ದಿನ ಅಕ್ಷರಶಃ ಸೈಬರ್ 'ಒತ್ತೆಯಾಳು' ಆಗಿದ್ದರು. ಮುಂಬಯಿ ಸೈಬರ್ ಕ್ರೈಂ ತಂಡ ಅಥವಾ ಸಿಬಿಐ ಎಂದು ಹೇಳಿಕೊಂಡ ದುಷ್ಕರ್ಮಿಗಳ ತಂಡವು ಎರಡು ದಿನವಿಡೀ ಆಕೆಯನ್ನು ವಿಡಿಯೋ ಕ್ಯಾಮೆರಾ ಅಥವಾ ಮೈಕ್ರೋಫೋನ್ ಎದುರು ಇರುವಂತೆ ಮಾಡಿದೆ.

ಪಾರ್ಸೆಲ್‌ನಲ್ಲಿ ಡ್ರಗ್ಸ್: ಏಪ್ರಿಲ್ 3ರ ಬುಧವಾರ ಫೆಡ್ ಎಕ್ಸ್‌ನಿಂದ ಮಾತನಾಡುತ್ತಿರುವುದು ಎಂಬ ಕರೆ ಮಾಡಿದ ವಂಚಕರು, ನಿಮ್ಮ ಹೆಸರಿನಲ್ಲಿ ಮುಂಬಯಿಯಿಂದ ಥಾಯ್ಲೆಂಡ್‌ಗೆ ಕಳುಹಿಸಿದ್ದ ಪಾರ್ಸೆಲ್ ವಾಪಸ್ ಬಂದಿದೆ. ಅದರಲ್ಲಿ ಐದು ಪಾಸ್‌ಪೋರ್ಟ್, ಮೂರು ಕ್ರೆಡಿಟ್ ಕಾರ್ಡ್‌ಗಳು ಹಾಗೂ ನಿಷೇಧಿತ ಮಾದಕ ವಸ್ತು ಎಂಡಿಎಂಎ 140 ಮಾತ್ರೆಗಳಿವೆ ಎಂದು ತಿಳಿಸಿದ್ದರು.

ಆ ಪಾರ್ಸೆಲ್‌ಗೂ ತಮಗೂ ಯಾವುದೇ ಸಂಬಂಧ ಇಲ್ಲ ಎಂದು ವಕೀಲೆ ಪ್ರತಿಕ್ರಿಯೆ ನೀಡಿದ್ದರು. ಆಗ ಪಾರ್ಸೆಲ್ ಕಂಪೆನಿ ಸೋಗಿನಲ್ಲಿ ಮಾತನಾಡಿದ್ದ ವಂಚಕರು, ತಮ್ಮ ಹೆಸರಿನಲ್ಲಿ ವಂಚನೆ ನಡೆದಿರುವ ಬಗ್ಗೆ ಮುಂಬಯಿಯ ಸೈಬರ್ ಟೀಮ್‌ಗೆ ದೂರು ನೀಡುವಂತೆ ಸಲಹೆ ನೀಡಿದ್ದರು. ಇದಕ್ಕೆ ವಕೀಲೆ ಒಪ್ಪಿದಾಗ, ವಂಚಕರು ಕರೆಯನ್ನು ಸೈಬರ್ ಅಪರಾಧ ತಂಡಕ್ಕೆ ವರ್ಗಾಯಿಸುವುದಾಗಿ ತಿಳಿಸಿ ವರ್ಗಾಯಿಸಿದ್ದರು. ಆಗ ಮಾತನಾಡಿದ ವ್ಯಕ್ತಿ, ಸ್ಕೈಪ್ ಆಪ್ ಡೌನ್‌ಲೋಡ್ ಮಾಡಿ, ವಿಡಿಯೋ ಕಾಲ್‌ಗೆ ಬರುವಂತೆ ವಕೀಲೆಗೆ ಸೂಚಿಸಿದ್ದ.



ಅದರಂತೆ ವಕೀಲೆ ಸ್ಕೈಪ್ ಡೌನ್‌ಲೋಡ್ ಮಾಡಿ ಸಂಪರ್ಕಿಸಿದಾಗ ಆತ ವಕೀಲೆಯ ಆಧಾರ್ ಕಾರ್ಡ್‌ಅನ್ನು ಮಾನವ ಕಳ್ಳಸಾಗಣೆ ಹಾಗೂ ಡ್ರಗ್ಸ್ ಸಾಗಣೆಗೆ ಬಳಸಿಕೊಳ್ಳುತ್ತಿರುವ ಬಗ್ಗೆ ಹೈ ಅಲರ್ಟ್ ನೀಡಲಾಗಿದೆ ಎಂದದ್ದಲ್ಲದೇ ಸ್ಕೈಪ್ ಕರೆಯನ್ನು ಹಿರಿಯ ಸಿಬಿಐ ಅಧಿಕಾರಿ ಎಂದು ತಿಳಿಸಿ ಅಭಿಷೇಕ್ ಚೌಹಾಣ್ ಎಂಬಾತನಿಗೆ ವರ್ಗಾಯಿಸಿದ್ದಾನೆ. ಆ ವ್ಯಕ್ತಿ ವಕೀಲೆಯ ಕ್ಯಾಮೆರಾ ಆನ್ ಮಾಡಿ ಮಾತನಾಡುವಂತೆ ಅವರು ನಿರ್ದೇಶಿಸಿ, ವಕೀಲೆ ಬಳಿ ಖಾತೆಯಲ್ಲಿರುವ ಹಣ, ಸಂಬಳ, ಹೂಡಿಕೆ ಸೇರಿದಂತೆ ಎಲ್ಲಾ ವಿವರಗಳನ್ನು ಕೇಳಿ ಬರೆದುಕೊಂಡ. ತನಿಖೆ ಪೂರ್ಣಗೊಳ್ಳುವವರೆಗೂ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ ಎಂಬ ಪ್ರತಿಜ್ಞೆ ತೆಗೆಸಿಕೊಳ್ಳುವ ಗೌಪ್ಯತಾ ಪ್ರಮಾಣ ಓದುವಂತೆ ಸೂಚಿಸಿದ್ದ. ಈ ಬಗ್ಗೆ ಕುಟುಂಬ ಅಥವಾ ಪೊಲೀಸರ ಬಳಿ ಮಾತನಾಡಬಹುದೇ ಎಂದು ಮಹಿಳೆ ಕೇಳಿದಾಗ, ನಿಮ್ಮ ಸುರಕ್ಷತೆ ದೃಷ್ಟಿಯಿಂದ ಬೇಡ ಎಂದು ಆತ ಹೇಳಿದ್ದ. ಉದ್ಯೋಗಿಗಳ ವಿವರ ಬಳಸಿಕೊಂಡು ಭಾರತದ ಪ್ರಮುಖ ಬ್ಯಾಂಕ್ ಒಂದಕ್ಕೆ ಸೇರಿದವರು ಅಕ್ರಮ ಹಣ ವರ್ಗಾವಣೆ ಮತ್ತು ಮಾನವ ಕಳ್ಳಸಾಗಣೆ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಕಥೆಯನ್ನು ಆಕೆ ಬಳಿ ಹೇಳಿದ್ದ.

ಈ ಹೈ ಪ್ರೊಫೈಲ್ ಪ್ರಕರಣದಲ್ಲಿ ಪೊಲೀಸರು ಮತ್ತು ರಾಜಕಾರಣಿಗಳು ಭಾಗಿಯಾಗಿದ್ದಾರೆ. ಅವರ ಜತೆ ವಕೀಲೆ ಸಹಕರಿಸಬೇಕು. ಈ ಬಗ್ಗೆ ಯಾರ ಬಳಿಯೂ ಮಾತನಾಡಬಾರದು ಎಂದು ಹೇಳಿದ್ದ. ಇದಕ್ಕಾಗಿ ವಕೀಲೆ ಬುಧವಾರ ಇಡೀ ದಿನ ನಿಗಾದಲ್ಲಿರಬೇಕು ಹೀಗಾಗಿ ಆಕೆಯ ಕ್ಯಾಮೆರಾ ಆನ್‌ನಲ್ಲಿ ಇರಿಸಿ, ಸ್ಕ್ರೀನ್ ಶೇರ್ ಮಾಡಬೇಕು. ವಕೀಲೆ ಯಾರಿಗಾದರೂ ಕರೆ ಮಾಡುವುದು ಅಥವಾ ಮೆಸೇಜ್ ಕಳುಹಿಸುತ್ತಿದ್ದೀನಾ ಎಂಬುದು ಗೊತ್ತಾಗಬೇಕು ಎಂದು ಆತ ಹೇಳಿದ್ದ. ಇಡೀ ಹಗಲು ಮತ್ತು ರಾತ್ರಿ ಆತ ವಕೀಲೆ ಮೇಲೆ ನಿಗಾ ಇರಿಸಿದ್ದ. ವಕೀಲೆ ಕ್ಯಾಮೆರಾ ಆನ್ ಮಾಡಿಯೇ ಮಲಗಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ: ಮರುದಿನ ಮಾತನಾಡಿದ ಸಿಬಿಐ ಅಧಿಕಾರಿ ಎಂದು ಪರಿಚಯಿಸಿಕೊಂಡಿದ್ದ ಚೌಹಾಣ್ ಎಂಬಾತ ಆರ್‌ಬಿಐ ಮಾರ್ಗಸೂಚಿ ಪ್ರಕಾರ, ವರ್ಗಾವಣೆಯು ಕಾನೂನುಬದ್ಧವಾಗಿದೆಯೇ ಎಂಬುದನ್ನು ತಿಳಿಯಲು ವಕೀಲೆಯ ಖಾತೆಯಲ್ಲಿನ ಎಲ್ಲ ಹಣವನ್ನೂ 'ಡಮ್ಮಿ' ಖಾತೆಗೆ ವರ್ಗಾಯಿಸುವಂತೆ ಸೂಚಿಸಿದ್ದ. ಬ್ಯಾಂಕ್ ಶಾಖೆಗೆ ಹೋಗಿ, ಅದೇ ಬ್ಯಾಂಕ್‌ನಲ್ಲಿದ್ದ ಮತ್ತೊಂದು ಖಾತೆಗೆ ವಕೀಲೆ 10.79 ಲಕ್ಷ ರೂ ಹಣವನ್ನು ವರ್ಗಾಯಿಸಿದ್ದರು. ಇಡೀ ಪ್ರಕ್ರಿಯೆ ಉದ್ದಕ್ಕೂ ಆಕೆ ಕರೆಯನ್ನು ಕಟ್ ಮಾಡುವಂತೆ ಇರಲಿಲ್ಲ ಮತ್ತು ಆಕೆಯ ಫೋನ್ ಸ್ಕ್ರೀನ್ ಆತನಿಗೆ ಕಾಣುವಂತೆ ಇರಬೇಕಿತ್ತು.

ಹಣ ವರ್ಗಾವಣೆಯಾದ ಬಳಿಕ, ಬಹುತೇಕ ವರ್ಗಾವಣೆಯನ್ನು ಪರಿಶೀಲಿಸಲಾಗಿದೆ. ಆದರೆ ಕ್ರೆಡಿಟ್ ಕಾರ್ಡ್ ವ್ಯವಹಾರಗಳಲ್ಲಿ ಕೆಲವು ಅವ್ಯವಹಾರ ಆಗಿದೆ ಎಂದು ಹೇಳಿದ್ದ. ಅದಕ್ಕಾಗಿ ಆ್ಯಪ್ ಒಂದನ್ನು ಡೌನ್‌ಲೋಡ್ ಮಾಡಿಸಿದ್ದ. ಅದರಲ್ಲಿ 5 ಸಾವಿರ ಡಾಲರ್ (ಅಂದಾಜು 4.16 ಲಕ್ಷ ರೂ) ಮೊತ್ತದ ಬಿಟ್‌ಕಾಯಿನ್ ಖರೀದಿಸಲು ವಂಚಕರು ಪ್ರಯತ್ನಿಸಿದ್ದರು. ಆದರೆ ಆ ವಹಿವಾಟು ವಿಫಲಗೊಂಡಿತ್ತು. ಬಳಿಕ ಮಿತಿಯನ್ನು ಬದಲಿಸುವಂತೆ ವಕೀಲೆಗೆ ಆತ ಸೂಚಿಸಿದ್ದ. ಆದರೆ ಅದೆಲ್ಲವೂ ವಿಫಲವಾಗಿದ್ದವು. ಆಕೆಯ ಹೆಸರು ದುರ್ಬಳಕೆಯಾಗದಂತೆ ತಡೆಯಲು ಅದರ ಫೋಟೋಗಳನ್ನು ಕಳುಹಿಸುವಂತೆ ಹೇಳಿದ್ದ. ಗುರುವಾರ ಮುಂಜಾನೆ ಶಾಪಿಂಗ್ ತಾಣವೊಂದರಿಂದ 2.04 ಲಕ್ಷ ರೂ ಮತ್ತು 1.73 ಲಕ್ಷ ರೂ ಮೊತ್ತದ ವಹಿವಾಟು ನಡೆಸಿದ್ದಾರೆ. ಈ ಸಂಬಂಧ ಆಕೆಗೆ ಬ್ಯಾಂಕ್ ಗ್ರಾಹಕ ಸೇವಾ ಕೇಂದ್ರದಿಂದ ಕರೆ ಬಂದಿತ್ತು. ಇದು ತಾನೇ ನಡೆಸಿದ ವಹಿವಾಟು ಎಂದು ಅವರಿಗೆ ಹೇಳಬೇಕು. ಇಲ್ಲವಾದರೆ ಪ್ರಕರಣ ಅಂತ್ಯಗೊಳಿಸಲು ಸಾಧ್ಯವಾಗುವುದಿಲ್ಲ ಎಂದು ವಂಚಕ ಹೇಳಿದ್ದ.

ಕ್ಯಾಮೆರಾ ಎದುರು ಬೆತ್ತಲೆ: ಇಷ್ಟೆಲ್ಲಾ ಹಣ ವರ್ಗಾವಣೆ ಆದ ಬಳಿಕ ಆತ 'ಮಾದಕವಸ್ತು ಪರೀಕ್ಷೆ' ನಡೆಸಬೇಕು. ಇದಕ್ಕಾಗಿ ಬಟ್ಟೆ ಕಳಚಿ ಎಂದು ಆದೇಶಿಸಿದ್ದ. ಕ್ಯಾಮೆರಾ ಎದುರು ಆಕೆ ಉಡುಪುಗಳನ್ನು ಕಳಚಿದ್ದರು. ಹಾಗೆ ಮಾಡದೆ ಇದ್ದರೆ, ನನ್ನನ್ನು ಮತ್ತು ನನ್ನ ಕುಟುಂಬವನ್ನು ಡ್ರಗ್ಸ್ ಪ್ರಕರಣದಲ್ಲಿ ಬಂಧಿಸಲಾಗುವುದು. ಇಡೀ ಕುಟುಂಬವನ್ನು ಸಾಯಿಸಲಾಗುವುದು ಎಂದು ಬೆದರಿಕೆ ಹಾಕಿ ನಿಂದಿಸಿದ್ದ ಎಂದು ವಕೀಲೆ ದೂರಿನಲ್ಲಿ ತಿಳಿಸಿದ್ದಾರೆ.

ಇದರ ಬಳಿಕ ಆಕೆಯ ಬೆತ್ತಲೆ ವಿಡಿಯೋಗಳನ್ನು ಇರಿಸಿಕೊಂಡು ಬ್ಲ್ಯಾಕ್‌ಮೇಲ್ ಮಾಡತೊಡಗಿದ್ದ. ಅದೇ ದಿನ ಮಧ್ಯಾಹ್ನ 3 ಗಂಟೆ ಒಳಗೆ 10 ಲಕ್ಷ ರೂ ನೀಡದೆ ಹೋದರೆ ಡಾರ್ಕ್ ವೆಬ್ ಹಾಗೂ ಹಲವಾರು ಜನರಿಗೆ ವಿಡಿಯೋಗಳನ್ನು ಮಾರಾಟ ಮಾಡುವುದಾಗಿ ಬೆದರಿಸಿದ್ದ. ಇದರ ಬಳಿಕ ವಕೀಲೆ ಬೆಂಗಳೂರಿನಲ್ಲಿ ಪೊಲೀಸರಿಗೆ ದೂರು ನೀಡಿದ್ದಾರೆ.

ಸೈಬರ್ ಅಪರಾಧ ತಡೆಯಲು ಇನ್‌ಫೋಸಿಸ್‌ನಿಂದ ರಾಜ್ಯ ಪೊಲೀಸ್ ಇಲಾಖೆಗೆ 33 ಕೋಟಿ ನೆರವು

ನವದೆಹಲಿ: ಸೈಬರ್ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಕ್ಕೆ ನೆರವಾಗಲು ಇನ್ಫೋಸಿಸ್ ಫೌಂಡೇಶನ್‌ನಿಂದ ಕರ್ನಾಟಕ ಪೊಲೀಸ್ ಇಲಾಖೆಗೆ 33 ಕೋಟಿ ಆರ್ಥಿಕ ನೆರವು ನೀಡಲಾಗಿದೆ.

ಬೆಂಗಳೂರಿನಲ್ಲಿ ಇರುವ ಸಿಐಡಿ ಘಟಕ, ಭಾರತೀಯ ದತ್ತಾಂಶ ಭದ್ರತಾ ಸಮಿತಿ (ಡಿಎಸ್‌ಸಿಐ) ಹಾಗೂ ಸೈಬರ್ ಅಪರಾಧಗಳ ತನಿಖೆ ತರಬೇತಿ ಮತ್ತು ಸಂಶೋಧನಾ ಕೇಂದ್ರದ (ಸಿಸಿಐಟಿಆರ್) ಜೊತೆಗೆ ಈ ಕುರಿತ ಒಡಂಬಡಿಕೆಗೆ ಫೌಂಡೇಶನ್ ಅಂಕಿತ ಹಾಕಿದೆ.

ಸೈಬರ್ ಅಪರಾಧಗಳ ತನಿಖಾ ಸಾಮರ್ಥ್ಯವನ್ನು ಮತ್ತಷ್ಟು ಬಲಗೊಳಿಸಲು ಈ ನೆರವು ನೀಡಲಾಗಿದೆ. ಈ ನಿಟ್ಟಿನಲ್ಲಿ ಸಿಸಿಐಟಿಆರ್ ಜೊತೆಗಿನ ಒಡನಾಟವನ್ನು ಮತ್ತೆ ನಾಲ್ಕು ವರ್ಷಗಳವರೆಗೆ ವಿಸ್ತರಿಸಲಾಗಿದೆ. ಡಿಜಿಟಲ್ ಫೊರೆನ್ಸಿಕ್ ಹಾಗೂ ಸೈಬರ್ ಅಪರಾಧದ ತನಿಖೆ ಬಗೆಗಿನ ತರಬೇತಿ ಮತ್ತು ಸಂಶೋಧನೆಗೆ ಇದರಿಂದ ನೆರವಾಗಲಿದೆ ಎಂದು ತಿಳಿಸಿದೆ.


ಮಹದೇಶ್ವರಬೆಟ್ಟದಲ್ಲಿ ಕಾಡಾನೆ ದಾಳಿಯಿಂದ ಮಹಿಳೆ ಸಾವು



ಲಕ್ಷ್ಮೀ

ಹನೂರು, ಏ.10–ತಾಳುಬೆಟ್ಟದಿಂದ ಮಹದೇಶ್ವರಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ಮಹಿಳೆ ಕಾಡಾನೆ ದಾಳಿಗೆ ಬಲಿಯಾಗಿರುವ ಘಟನೆ ಮಂಗಳ ವಾರ ರಾತ್ರಿ ಮಾರ್ಗ ಮಧ್ಯೆ ಅರಣ್ಯ ಪ್ರದೇ ಶದ ಕಾಲುದಾರಿಯಲ್ಲಿ ನಡೆದಿದೆ.

ಮಳವಳ್ಳಿ ತಾಲೂಕಿನ ಹೊನಗನಹಳ್ಳಿ ಗ್ರಾಮದ ಲಕ್ಷ್ಮೀ(36) ಮೃತಪಟ್ಟ ಮಹಿಳೆ. ಈಕೆ ತಮ್ಮ ಮಗ ಚಿರಾಗ್ ಹಾಗೂ ಸಂಬಂಧಿಕರಾದ ಚಿಕ್ಕತಾಯಮ್ಮ, ಮನು, ಪ್ರಸನ್ನ, ಮಹದೇವು, ಪುಟ್ಟರಾಜು ಅವರೊಂದಿಗೆ ಹೊನಗನಹಳ್ಳಿ ಗ್ರಾಮದಿಂದ ಗೂಡ್ಸ್ ವಾಹನದಲ್ಲಿ ಮಹದೇಶ್ವರಬೆಟ್ಟಕ್ಕೆ ತೆರಳಲು ಬಂದಿದ್ದರು. ಈ ವೇಳೆ ತಾಳಬೆಟ್ಟದಲ್ಲಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ನಂತರ ಗೂಡ್ಸ್ ವಾಹನದಲ್ಲಿ ಮಹದೇಶ್ವರ ಬೆಟ್ಟಕ್ಕೆ ಹೊರಡಬೇಕಿತ್ತು. ಆದರೆ, ತಾಳಬೆಟ್ಟದಿಂದ 10–15 ಜನ ಪಾದಯಾತ್ರೆ ಮೂಲಕ ಮಹದೇಶ್ವರಬೆಟ್ಟಕ್ಕೆ ಹೋಗುತ್ತಿದ್ದರು. ಇವರೊಂದಿಗೆ ತಾನು ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆಯಲ್ಲಿ ಬರುವುದಾಗಿ ಮಗ ಹಾಗೂ ಸಂಬಂಧಿಕರಿಗೆ ಲಕ್ಷ್ಮೀ ತಿಳಿಸಿ, ನಡೆದುಕೊಂಡು ಹೋಗುತ್ತಿದ್ದರು. ಈ ವೇಳೆ ಮಾರ್ಗಮಧ್ಯೆ ಅರಣ್ಯ ಪ್ರದೇಶದ ಕಾಲುದಾರಿಯಲ್ಲಿ ಕಾಡಾನೆಯೊಂದು ದಾಳಿ ಮಾಡಿದೆ. ಕೆಲ ಪಾದಯಾತ್ರಿಗಳು ಓಡಿ ಹೋಗಿದ್ದಾರೆ. ಲಕ್ಷ್ಮೀ ಪೊದೆಯಲ್ಲಿ ಅವಿತುಕೊಳ್ಳಲು ಓಡುತ್ತಿದ್ದಾಗ ಸೊಂಡಲಿನಿಂದ ಬಡಿದು, ಕೆಳಗೆ ಬಿದ್ದ ಅವರನ್ನು ತುಳಿದು ಸಾಯಿಸಿದೆ. ಮಹದೇಶ್ವರಬೆಟ್ಟ ಠಾಣೆಯ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಮೈಸೂರಿನ ಕನ್ನೇಗೌಡನಕೊಪ್ಪಲಿನಲ್ಲಿ ಯುಗಾದಿ ಪ್ರಯುಕ್ತ ಶ್ರೀ ಏಳುಮಲೆ ಮಹದೇಶ್ವರ ಸ್ವಾಮಿ ಮೆರವಣಿಗೆ ನಡೆಯಿತು. ಈ ವೇಳೆ ಗ್ರಾಮದ ಹಿರಿಯರಾದ ಗೋಪಾಲಕರ ಸಂಘದ ಉಪಾಧ್ಯಕ್ಷ ಎಸ್. ಮೊಗಣ್ಣ, ಮದ್ದೂರಮ್ಮನ ಟಿ. ಬಸವರಾಜಣ್ಣ, ಮೆರವೇಗೌಡರ ಎಂ.ರವಿ ಗೌಡ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮುಖಂಡರಾದ ಕಾಳಪ್ಪ, ಟಿ. ರವಿಗೌಡ, ರಾಘು, ಹರೀಶ್, ರಮೇಶ, ಬಸವರಾಜು, ಮಹದೇವು, ಕರಿಯಪ್ಪ, ನಾಗೇಶ್ ಇನ್ನಿತರಿದ್ದರು.

ಆನೆಚೌಕೂರು ಶಿಬಿರದಲ್ಲಿ ವಿರಾಟ್ ಸಾವು

ಹುಣಸೂರು, ಏ.10–ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಪಿರಿಯಾಪಟ್ಟಣ ತಾಲೂಕಿನ ಆನೆಚೌಕೂರು ಶಿಬಿರದಲ್ಲಿ ಆನೆಯೊಂದು ಮೃತಪಟ್ಟಿದೆ. ಐದು ತಿಂಗಳ ಹಿಂದೆಯಷ್ಟೇ ಸೆರೆ ಹಿಡಿದಿದ್ದ ವಿರಾಟ್ ಎನ್ನುವ ಆನೆಯು ಅನಾರೋಗ್ಯದಿಂದ ಮೃತಪಟ್ಟಿರುವುದಾಗಿ ಇಲಾಖೆ ಪ್ರಕಟಣೆ ತಿಳಿಸಿದೆ. ನಾಗರಹೊಳೆ ವ್ಯಾಪ್ತಿಯ ವೀರನಹೊಸಹಳ್ಳಿ ವಲಯ ವ್ಯಾಪ್ತಿಯಲ್ಲಿ ಕಾಡಿನಿಂದ ಹೊರ ಬಂದು ಉಪಟಳ ನೀಡುತ್ತಿದ್ದ ಕಾಡಾನೆಯನ್ನು ಕಳೆದ ವರ್ಷದ ನವೆಂಬರ್‌ನಲ್ಲಿ ಸೆರೆ ಹಿಡಿಯಲಾಗಿತ್ತು. ಅದಕ್ಕೆ ವಿರಾಟ್ ಎನ್ನುವ ಹೆಸರಿಟ್ಟು ಆನೆ ಚೌಕೂರು ಶಿಬಿರದಲ್ಲಿ ಪಳಗಿಸಲಾಗುತ್ತಿತ್ತು. ಆನೆ ಕಾಲಿಗೆ ಸೆರೆ ಹಿಡಿಯುವಾಗಲೇ ಗಾಯವಾಗಿತ್ತು. ಈಗ ಆನೆ ಮೃತಪಟ್ಟಿದೆ. ಮರಣೋತ್ತರ ಪರೀಕ್ಷೆ ನಡೆಸಿ ಆನೆ ಶವವನ್ನು ಹೂಳಲಾಗಿದೆ.

ದ್ವಿತೀಯ ಪಿಯು ಪರೀಕ್ಷೆಯಲ್ಲಿ ಕೆ.ಆರ್.ಪೇಟೆ ಸ್ಕಾಲರ್ ಕಾಲೇಜಿಗೆ ಶೇ 100ರಷ್ಟು ಫಲಿತಾಂಶ




ಮೊನಾಲಿಸಾ(586)



ಗಾನವಿ(577)



ಸ್ಪಂದನ(582)




ಸಾನಿಕಾ(584)

ಕೆ.ಆರ್.ಪೇಟೆ,ಏ.10– ಕೃಷ್ಣರಾಜಪೇಟೆ ಪಟ್ಟಣದ ಹಳೇ ಮೈಸೂರು ರಸ್ತೆಯಲ್ಲಿರುವ ಸ್ಕಾಲರ್ಸ್ ಪದವಿ ಪೂರ್ವ ಕಾಲೇಜು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಸತತ ಏಳನೇ ವರ್ಷವೂ ಶೇ.100ರಷ್ಟು ಫಲಿತಾಂಶ ಪಡೆಯುವ ಮೂಲಕ ತಾಲೂಕಿನಲ್ಲಿ ಒಳ್ಳೆಯ ಹೆಸರು ಗಳಿಸಿದೆ ಎಂದು ಕಾಲೇಜಿನ ಪ್ರಾಂಶುಪಾಲ ಮಂಜುನಾಥ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಕಾಲರ್ಸ್ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ಒಟ್ಟು 158 ವಿದ್ಯಾರ್ಥಿಗಳು, ವಾಣಿಜ್ಯಶಾಸ್ತ್ರ ವಿಭಾಗದಲ್ಲಿ 12 ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿನ ಕೀರ್ತಿ ಯನ್ನು ಬೆಳಗಿದ್ದಾರೆ. ಒಟ್ಟು 170 ವಿದ್ಯಾರ್ಥಿಗಳ ಪೈಕಿ 90 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಡೆದಿರುತ್ತಾರೆ. ಉಳಿದ 80 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ವಿಜ್ಞಾನ ವಿಭಾಗದಲ್ಲಿ ತಾಲೂಕಿನ ಹಿರಿಯ ಪತ್ರಿಕಾ ವರದಿಗಾರರು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರಾದ ಆರ್.ಶ್ರೀನಿವಾಸ್ ಮತ್ತು ಅಮರಾವತಿ ದಂಪತಿಗಳ ಸುಪುತ್ರಿ ಬಿ.ಎಸ್. ಮೊನಾಲಿಸಾ 586 ಅಂಕಗಳನ್ನು ಪಡೆಯುವ ಮೂಲಕ ತಾಲೂಕು ಟಾಪರ್ ಆಗಿ ಹೊರಹೊಮ್ಮಿದ್ದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಗಾನವಿ ಹೆಚ್.ಬಿ. 577 ಅಂಕ, ವರ್ಷಿಣಿ 576 ಅಂಕ, ಶ್ರೇಯಸ್‌ಗೌಡ ಎಂ.ಸಿ 575 ಅಂಕಗಳನ್ನು ಡಿಸ್ಟಿಂಕ್ಷನ್ ಪಡೆದು ಟಾಪರ್ ಆಗಿ ಹೊರಹೊಮ್ಮಿರು ತ್ತಾರೆ. ವಾಣಿಜ್ಯ ಶಾಸ್ತ್ರ ವಿಭಾಗದಲ್ಲಿ ಸಾನಿಕಾ. ಎಂ. 584 ಅಂಕಗಳನ್ನು ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿರು ತ್ತಾರೆ ಹಾಗೂ ಸ್ಪಂದನಾ ಜಿ.ಎಸ್. 582 ಅಂಕಗಳನ್ನು ಪಡೆಯುವ ಮೂಲಕ ತಾಲೂಕಿಗೆ ದ್ವಿತೀಯ ಸ್ಥಾನವನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ವಿಷಯವಾರು 100ಕ್ಕೆ 100 ಅಂಕಗಳನ್ನು ಗಣಕ ವಿಜ್ಞಾನದಲ್ಲಿ 15 ವಿದ್ಯಾರ್ಥಿಗಳು, ಗಣಿತದಲ್ಲಿ 6 ವಿದ್ಯಾರ್ಥಿಗಳು, ಕನ್ನಡದ ಹಾಗೂ ವ್ಯವಹಾರ ಅಧ್ಯಯನದಲ್ಲಿ ತಲಾ ಒಬ್ಬರು ನೂರಕ್ಕೆ 100 ಅಂಕಗಳನ್ನು ಪಡೆದಿರುತ್ತಾರೆ. ವಾಣಿಜ್ಯ ವಿಭಾಗದಲ್ಲಿ ಸಾನಿಕಾ.ಎಂ 584, ಸ್ಪಂದನ ಜಿ.ಎಸ್.582ಅಂಕಗಳನ್ನು ಪಡೆದಿರುತ್ತಾರೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಎಸ್.ಮಂಜುನಾಥ್ ಅವರು ಪತ್ರಿಕಾ ಗೋಷ್ಠಿಯಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.



ಭೂಮಿ, ವಸತಿ ಸಮಸ್ಯೆ ಬಗೆಹರಿಸದಿದ್ದರೆ ಚುನಾವಣೆ ಬಹಿಷ್ಕಾರ

ಪ್ರಗತಿಪರ ದಲಿತ ಒಕ್ಕೂಟ ಜಿಲ್ಲಾ ಸಮಿತಿ ಜಿಲ್ಲಾಧ್ಯಕ್ಷ ಎಚ್ಚರಿಕೆ

ಮೈಸೂರು, ಏ.10(ಜಿಎ)– ಗ್ಯಾರಂಟಿಯಾಗಿ ಭೂಮಿ, ವಸತಿ ಮುಂತಾದ ಮೂಲ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ಭರವಸೆ ಕೊಡದಿದ್ದಲ್ಲಿ ಮುಂಬರುವ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸಲಾಗುವುದು ಎಂದು ಪ್ರಗತಿಪರ ದಲಿತ ಒಕ್ಕೂಟ ಜಿಲ್ಲಾ ಸಮಿತಿ ಜಿಲ್ಲಾಧ್ಯಕ್ಷ ಎಂ.ಶಿವಣ್ಣ ಕಂದೇಗಾಲ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವತಂತ್ರ್ಯ ಬಂದು 75 ವರ್ಷ ಪೂರ್ಣಗೊಂಡಿದೆ. ಆದರೆ, ದೇಶದಲ್ಲಿ ಇನ್ನೂ ಬಡತನ, ಭ್ರಷ್ಟಾಚಾರ ಸೇರಿದಂತೆ ಅನೇಕ ಸಮಸ್ಯೆಗಳು ತಾಂಡವವಾಡುತ್ತಿರುವ ಸಂದರ್ಭದಲ್ಲಿ ಗ್ಯಾರಂಟಿಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಂಕುಬೂದಿ ಎರಚುತ್ತಿದ್ದಾರೆ ಎಂದು ಆರೋಪಿಸಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗದ ಅಭಿವೃದ್ಧಿಗೆ ಇರಿಸಿದ್ದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಾಗಿದ್ದಾಗ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಅನುದಾನವನ್ನು ಬೇರೆ ಅಭಿವೃದ್ಧಿಗೆ ಬಳಕೆ ಮಾಡಿದರೆ, ಕಠಿಣ ಕ್ರಮ ಜರುಗಿಸುತ್ತೇವೆ ಎಂದು ಹೇಳುತ್ತಿದ್ದರು. ಆದರೆ, ಇಂದು ಅವರೇ ತಮ್ಮ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದ ಅವರು, ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವವರ ಬಳಿ ಇರುವ ಹಣದಿಂದಲೇ ದೇಶದ ಅಭಿವೃದ್ಧಿ ಮಾಡಬಹುದಾಗಿದೆ ಎಂದರು.

ಭೂಮಾಲೀಕರು ಒತ್ತುವರಿ ಮಾಡಿಕೊಂಡು ಕಬಳಿಸಿರುವ ಭೂಮಿಯನ್ನು ಬಿಡಿಸಿ ಭೂಹೀನ ಬಡವರಿಗೆ ಹಂಚಿಕೆ ಮಾಡಬೇಕು. ಭೂಹೀನ ಬಡವರು ಹಲವಾರು ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿರುವ ಜಮೀನಿಗೆ ಸಾಗುವಳಿ ಪತ್ರ ನೀಡಬೇಕು. ವಸತಿಹೀನ ಬಡವರಿಗೆ ನಿವೇಶನ ಹಂಚಿಕೆ ಮಾಡಿ ಮನೆ ನಿರ್ಮಿಸಿಕೊಡಬೇಕು. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರುವ ಹಣವನ್ನು ಸರಿಯಾಗಿ ಬಳಕೆ ಮಾಡದೇ ದುರುಪಯೋಗ ಮಾಡುವ ಅಧಿಕಾರಿಗಳು ಮತ್ತು ಇದಕ್ಕೆ ಕುಮ್ಮಕ್ಕು ನೀಡುವ ರಾಜಕಾರಣಿಗಳ ವಿರುದ್ಧ ಕ್ರಿಮಿನಲ್ ಕೇಸ್ ದಾಖಲು ಮಾಡಿ ಇವರ ಹುದ್ದೆ ಸ್ಥಾನಮಾನಗಳನ್ನು ವಜಾ ಮಾಡಬೇಕು. ರಾಜ್ಯದಲ್ಲಿರುವ 1.32 ಲಕ್ಷ ಬ್ಯಾಕ್‌ಲಾಕ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವುದಾಗಿ ಗ್ಯಾರಂಟಿ ಕೊಡದಿದ್ದರೆ ಈ ಬಾರಿಯ ಲೋಕಸಭಾ ಚುನಾವಣೆ ಬಹಿಷ್ಕರಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಅನುಷಾ, ಜಿಲ್ಲಾ ಉಪಾಧ್ಯಕ್ಷ ಬಸವರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಗಟ್ಟುವಾಡಿ ಉಪಸ್ಥಿತರಿದ್ದರು.

ಬೈಕ್ ರ್‍ಯಾಲಿ ಮೂಲಕ ಮತದಾನ ಜಾಗೃತಿ

ಮೈಸೂರು, ಏ.10(ಎಂಟಿವೈ)– ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಹಾಗೂ ಕಡ್ಡಾಯ ಮತದಾನ ಮಾಡುವ ನಿಟ್ಟಿನಲ್ಲಿ ಜನರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿ ಬುಧವಾರ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ 300ಕ್ಕೂ ಹೆಚ್ಚು ಮಂದಿ ಬೈಕ್ ಸವಾರರು ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ಗನ್‌ಹೌಸ್ ವೃತ್ತದ ಬಳಿ ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ, ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಬೈಕ್ ರ್‍ಯಾಲಿಯಲ್ಲಿ ವಿವಿಧ ಇಲಾಖೆ ಸಿಬ್ಬಂದಿ, ಅಧಿಕಾರಿಗಳು, ಆಸಕ್ತ ನಾಗರಿಕರು ಸೇರಿದಂತೆ 300ಕ್ಕೂ ಹೆಚ್ಚು ಬೈಕ್ ಸವಾರರು ಪಾಲ್ಗೊಂಡಿದ್ದರು. ಗನ್‌ಹೌಸ್ ಮುಂಭಾಗದಿಂದ ಆರಂಭವಾದ ಬೈಕ್ ರ್‍ಯಾಲಿ ಪಾಠಶಾಲಾ ವೃತ್ತದಿಂದ ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹಳೆ ಆರ್‌ಎಂಸಿ, ಬಂಬೂ ಬಜಾರ್, ಹೈವೇ ವೃತ್ತ, ನೆಲ್ಸನ್ ಮಂಡೇಲ ರಸ್ತೆ, ಎಲ್‌ಐಸಿ ವೃತ್ತ, ಟಿಪ್ಪು ವೃತ್ತ, ಫೌಂಟೇನ್ ವೃತ್ತ, ಮಹದೇವಪುರ ರಸ್ತೆ, ಸಾತಗಳ್ಳಿ, ರಿಂಗ್ ರಸ್ತೆ ಮೂಲಕ ಮೈಸೂರು–ಬೆಂಗಳೂರು ರಸ್ತೆಯ ರಿಂಗ್ ರಸ್ತೆ ಜಂಕ್ಷನ್‌ವರೆಗೆ ತಲುಪಿ ಕೊನೆಗೊಂಡಿತು.


ಕಡ್ಡಾಯ ಮತದಾನಕ್ಕೆ ಜಾಗೃತಿ ಮೂಡಿಸಲು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಬುಧವಾರ ಮೈಸೂರಲ್ಲಿ ಬೈಕ್ ರ್‍ಯಾಲಿ ಆಯೋಜಿಸಲಾಗಿತ್ತು.

ಮತದಾನದ ಪ್ರಮಾಣ ಹೆಚ್ಚಳಕ್ಕೆ: ಬೈಕ್ ರ್‍ಯಾಲಿ ವೇಳೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸ್ವೀಪ್ ಸಮಿತಿ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ, ಮತದಾರರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಮತದಾರರಲ್ಲಿ ಮತದಾನದ ಮಹತ್ವ ಹಾಗೂ ಅರಿವನ್ನು ಮೂಡಿಸಲು ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತಗಟ್ಟೆಗೆ ಬಂದು ಮತದಾನ ಮಾಡಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಬೈಕ್ ರ್‍ಯಾಲಿ ನಡೆಸಲಾಗುತ್ತಿದೆ. ಚುನಾವಣೆ ದಿನ ಎಲ್ಲರೂ ಕಡ್ಡಾಯವಾಗಿ ಮತಗಟ್ಟೆಗೆ ಬಂದು ಮತದಾನ ಮಾಡಬೇಕು. ಪ್ರತಿಯೊಬ್ಬ ಮತದಾರನು ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೆ ನೈತಿಕ ಮತದಾನವನ್ನು ಕಡ್ಡಾಯವಾಗಿ ಮಾಡಬೇಕು. ಪ್ರಸ್ತುತ ಯುವ ಜನರು ಮತದಾನ ಮಾಡಲು ಹಿಂಜರಿಯುತ್ತಿದ್ದಾರೆ. ಹಾಗಾಗಿ ಯುವಜನರಿಗೆ ಮತದಾನದ ಮಹತ್ವವನ್ನು ತಿಳಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಬೇಕು ಎಂದರು.

> ಕಡ್ಡಾಯ ಮತದಾನದೊಂದಿಗೆ ಚುನಾವಣಾ ಅಕ್ರಮ ತಡೆಗೆ ಪ್ರತಿಯೊಬ್ಬರೂ ಜಿಲ್ಲಾಡಳಿತದೊಂದಿಗೆ ಕೈಜೋಡಿಸಬೇಕು. ಚುನಾವಣಾ ಅಕ್ರಮ ಕಂಡು ಬಂದರೆ ಸಿ–ವಿಜಿಲ್ ಆ್ಯಪ್‌ನಲ್ಲಿ ವಿಡಿಯೋ, ಆಡಿಯೋ, ಫೋಟೋ ಹಾಗೂ ಜಿಪಿಎಸ್ ಮೂಲಕ ಮಾಹಿತಿಯನ್ನು ನೀಡಿ ಅಕ್ರಮವನ್ನು ತಡೆಗಟ್ಟಲು ಸಹಕರಿಸಬೇಕು. **–ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ, ಮೈಸೂರು.**

ಜಿ.ಪಂ ಸಿಇಓ, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷೆ ಕೆ.ಎಂ.ಗಾಯತ್ರಿ ಮಾತನಾಡಿ, ಜಿಲ್ಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಸ್ವೀಪ್ ಸಮಿತಿಯಿಂದ ವಿವಿಧ ಕಾರ್ಯಕ್ರಮ ನಡೆಸಲಾಗುತ್ತಿದೆ. ಏ.26ರಂದು ನಡೆಯುವ ಚುನಾವಣೆಯಲ್ಲಿ ಎಲ್ಲರೂ ಮತಗಟ್ಟೆಗೆ ಬಂದು ಮತದಾನ ಮಾಡಬೇಕು. ಮತದಾನದ ಮಹತ್ವ ಜನರಿಗೆ ಮನವರಿಕೆ ಮಾಡಲು ಬೈಕ್ ರ್‍ಯಾಲಿ ಸಹಕಾರಿಯಾಗುತ್ತದೆ. ಕಳೆದ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಪ್ರದೇಶಗಳನ್ನು ಗುರುತಿಸಿ, ಅಂತಹ ಭಾಗದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ಆಯುಕ್ತ ರಮೇಶ್ ಬನೋತ್, ಎಸ್ಪಿ ಸೀಮಾ ಲಾಟ್ಕರ್, ಪಾಲಿಕೆ ಆಯುಕ್ತರಾದ ಡಾ.ಎನ್.ಎನ್.ಮಧು ಸೇರಿದಂತೆ ಇನ್ನಿತರ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

ಬಾಕಿ ಪಾವತಿಸದ ಗುತ್ತಿಗೆದಾರ ಮೈಸೂರು ಹೆಬ್ಬಾಳದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಮುಡಾ ವಶಕ್ಕೆ



ಮೈಸೂರು, ಏ.10–ಮೈಸೂರಿನ ಹೆಬ್ಬಾಳದಲ್ಲಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ (ಮುಡಾ) ಸೇರಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಅನ್ನು ಇಂದು ಮುಡಾ ಅಧಿಕಾರಿಗಳು ಗುತ್ತಿಗೆದಾರರಿಂದ ತಮ್ಮ ವಶಕ್ಕೆ ಪಡೆದರು.

ವಿವರ: ಈ ಕನ್ವೆನ್ಷನ್ ಹಾಲ್ ಅನ್ನು 5 ವರ್ಷದ ಹಿಂದೆ ವಾರ್ಷಿಕ 36 ಲಕ್ಷ ರೂ. ಬಾಡಿಗೆಗೆ ಬೆಂಗಳೂರಿನ ತಾವರೆಕೆರೆ ನಿವಾಸಿ ಸಿದ್ದರಾಜಪ್ಪ ಮುಡಾದಿಂದ ಟೆಂಡರ್ ಮೂಲಕ ಗುತ್ತಿಗೆ ಪಡೆದಿದ್ದ.

ಆದರೆ ಈತ ಟೆಂಡರ್ ಹಣವನ್ನು ಮುಡಾಗೆ ಸರಿಯಾಗಿ ಪಾವತಿಸಿರಲಿಲ್ಲ. ಈ ನಡುವೆ ಕೊರೊನಾದಿಂದಾಗಿ ತನಗೆ ನಷ್ಟ ಉಂಟಾಗಿರುವ ಕಾರಣ ಟೆಂಡರ್ ಅನ್ನು 2 ವರ್ಷ ಹೆಚ್ಚುವರಿಯಾಗಿ ವಿಸ್ತರಿಸಬೇಕೆಂದು ಕೇಳಿಕೊಂಡಿದ್ದ. ಅನಂತರವೂ ಈತ ಟೆಂಡರ್ ಹಣವನ್ನು ಪಾವತಿಸದ ಕಾರಣ ಮುಡಾ ಅಧಿಕಾರಿಗಳು ಆತನಿಗೆ ಹಲವಾರು ಬಾರಿ ನೋಟಿಸ್ ನೀಡಿದ್ದರು. ಕಳೆದ ಕೆಲ ತಿಂಗಳ ಹಿಂದೆ ಅಧಿಕಾರಿಗಳು ಈ ಕನ್ವೆನ್ಷನ್ ಹಾಲ್ ಅನ್ನು ವಶಪಡಿಸಿಕೊಂಡಿದ್ದರು. ಈ ವೇಳೆ ಸಿದ್ದರಾಜಪ್ಪ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದ. ಅಲ್ಲದೇ ಮುಡಾಗೆ ಬಾಕಿ ಹಣ ಕಟ್ಟಲು ಇನ್ನು 4 ತಿಂಗಳ ಕಾಲಾವಕಾಶವನ್ನೂ ಪಡೆದಿದ್ದ. ಆದರೆ, ನಂತರವೂ ಆತ ಟೆಂಡರ್ ಹಣ ಪಾವತಿಸದೆ ಅಂದಾಜು 68 ಲಕ್ಷ ರೂ.ಗಳನ್ನು ಉಳಿಸಿಕೊಂಡಿದ್ದು, ನ್ಯಾಯಾಲಯಕ್ಕೆ ಸಲ್ಲಿಸಿದ್ದ ಪ್ರಮಾಣ ಪತ್ರದಂತೆ ನಡೆದುಕೊಳ್ಳದ ಕಾರಣ, ನ್ಯಾಯಾಲಯ ಆತನ ಅರ್ಜಿಯನ್ನು ವಜಾಗೊಳಿಸಿತ್ತು. ಈ ಹಿನ್ನೆಲೆಯಲ್ಲಿ ಇಂದು ಅಧಿಕಾರಿಗಳು ಈ ಕನ್ವೆನ್ಷನ್ ಹಾಲ್ ಅನ್ನು ವಶಕ್ಕೆ ಪಡೆದಿದ್ದಾರೆ.

ಹಾಲಿ ಈ ಕನ್ವೆನ್ಷನ್ ಹಾಲ್ ಮುಡಾ ವಶದಲ್ಲಿದ್ದು, ಈ ಹಿಂದೆಯೇ ಸಿದ್ದರಾಜಪ್ಪನಿಗೆ ಮುಂಗಡ ಹಣ ನೀಡಿ ಕನ್ವೆನ್ಷನ್ ಹಾಲ್ ಅನ್ನು ಯಾವುದಾದರೂ ಕಾರ್ಯಕ್ರಮಕ್ಕೆ ಬುಕ್ ಮಾಡಿರುವವರು ಸಮಸ್ಯೆಗೆ ಸಿಲುಕಿದಂತಾಗಿದೆ. ಮುಡಾ ಅಧಿಕಾರಿಗಳು ಇಂತಹ ಪ್ರಕರಣಗಳಿಗೆ ಯಾವ ರೀತಿ ಪರಿಹಾರ ಕಂಡುಕೊಳ್ಳುತ್ತಾರೆ ಎಂಬುದನ್ನು ಕಾದು ನೋಡಬೇಕಾಗಿದೆ. ಅದೇ ವೇಳೆ ಈ ಹಿಂದೆ ಟೆಂಡರ್‌ದಾರರಾಗಿದ್ದ ಸಿದ್ದರಾಜಪ್ಪ ಬಳಿ ಈ ಕನ್ವೆನ್ಷನ್ ಹಾಲ್ ಅನ್ನು ಮುಂದೆ ಯಾರೂ ಬುಕ್ ಮಾಡುವಂತಿಲ್ಲ ಎಂದು ಅಧಿಕಾರಿಗಳು ಖಚಿತಪಡಿಸಿದ್ದಾರೆ.

ಎನ್‌ಡಿಎ ಲೋಕಸಭಾ ಅಭ್ಯರ್ಥಿಗಳಿಗೆ ಆದಿಚುಂಚನಗಿರಿ ಶ್ರೀಗಳಿಂದ ಆಶೀರ್ವಾದ


ಮಾಜಿ ಮುಖ್ಯಮಂತ್ರಿ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ವಿವಿಧ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಎನ್‌ಡಿಎ ಅಭ್ಯರ್ಥಿಗಳು ಬುಧವಾರ ಬೆಳಗ್ಗೆ ಬೆಂಗಳೂರಿನ ವಿಜಯನಗರದ ಆದಿಚುಂಚನಗಿರಿ ಶಾಖಾ ಮಠಕ್ಕೆ ಭೇಟಿ ನೀಡಿ, ಸ್ವಾಮಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಚಿತ್ರದಲ್ಲಿ ಎನ್‌ಡಿಎ ಅಭ್ಯರ್ಥಿಗಳಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ತೇಜಸ್ವಿಸೂರ್ಯ, ಪಿ.ಸಿ.ಮೋಹನ್, ಶೋಭಾ ಕರಂದ್ಲಾಜೆ, ವಿ.ಸೋಮಣ್ಣ, ಡಾ.ಸಿ.ಎನ್.ಮಂಜುನಾಥ್, ಮಲ್ಲೇಶ್‌ಬಾಬು ಅವರಲ್ಲದೇ ವಿಪಕ್ಷ ನಾಯಕ ಆರ್.ಅಶೋಕ್, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್, ಮಾಜಿ ಸಚಿವರಾದ ಅರಗ ಜ್ಞಾನೇಂದ್ರ, ಸಿ.ಟಿ.ರವಿ, ಶಾಸಕ ಸಾರಾ ವಿಶ್ವನಾಥ್ ಇದ್ದಾರೆ.

ಚುನಾವಣಾ ವೆಚ್ಚ ಪರಿಶೀಲನೆ

ಮೈಸೂರು,ಏ.10– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಚುನಾವಣಾ ವೆಚ್ಚದ ಲೆಕ್ಕಗಳ ಪರಿಶೀಲನೆಯನ್ನು ಚುನಾವಣಾ ವೆಚ್ಚ ವೀಕ್ಷಕರು ಚುನಾವಣಾ ನೀತಿ ಅನ್ವಯ ಚುನಾವಣಾ ಅವಧಿಯಲ್ಲಿ ಒಟ್ಟು ಮೂರು ಬಾರಿ ಪರಿಶೀಲಿಸಲಾಗುತ್ತಿದ್ದು, ಅದರಂತೆ ಏ.12, 19 ಹಾಗೂ 24ರಂದು ವೆಚ್ಚಗಳ ಪರಿಶೀಲಿಸಲಾಗುತಿದ್ದು ಅಭ್ಯರ್ಥಿಗಳು ಅಥವಾ ಏಜೆಂಟರು ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಬೆಳಗ್ಗೆ 10ರಿಂದ ಸಂಜೆ 5 ಗಂಟೆಯೊಳಗೆ ಹಾಜರಾಗುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದ್ದಾರೆ.



ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಕನ್ನಡದಲ್ಲಿ ಖಾತೆ ಆರಂಭಿಸಿದ ಪ್ರಧಾನಿ ಮೋದಿ



ನವದೆಹಲಿ: ಲೋಕಸಭೆ ಚುನಾವಣೆಯ ಹೊತ್ತಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮ ಎಕ್ಸ್ (ಹಿಂದಿನ ಟ್ವಿಟರ್) ನಲ್ಲಿ ಕನ್ನಡ ಭಾಷೆಯಲ್ಲಿ ಪ್ರತ್ಯೇಕ ಖಾತೆ ತೆರೆದಿದ್ದಾರೆ. 'ನಮೋ ಕನ್ನಡ' ಎಂಬ ಹೆಸರಿನಲ್ಲಿ ನರೇಂದ್ರ ಮೋದಿ ಕನ್ನಡ ಖಾತೆ ಆರಂಭಿಸಲಾಗಿದೆ.


ಕರ್ನಾಟಕದಲ್ಲಿ ಲೋಕಸಭೆ ಚುನಾವಣೆಯ ಮೊದಲ ಹಂತದ ಮತದಾನ ಏಪ್ರಿಲ್ 26ರಂದು ನಡೆಯಲಿದ್ದು, ಎರಡನೇ ಹಂತದ ಮತದಾನ ಮೇ 7ರಂದು ನಡೆಯಲಿದೆ. ಕನ್ನಡಿಗರನ್ನು ಹೆಚ್ಚಿನ ಸಂಖ್ಯೆಯಲ್ಲಿ ತಲುಪಲು ಮೋದಿಯವರು ಕನ್ನಡದಲ್ಲಿ ಟ್ವಿಟ್ಟರ್ ಖಾತೆ ತೆರೆದಿದ್ದಾರೆ. ಕನ್ನಡ ಭಾಷೆಯಲ್ಲಿ ಮೋದಿ ತೆರೆದಿರುವ ಪ್ರತ್ಯೇಕ ಟ್ವಿಟ್ಟರ್ ಖಾತೆಯಲ್ಲಿ ಮೋದಿ ಭಾಷಣದ ವಿಡಿಯೋ ತುಣುಕುಗಳನ್ನು ಪೋಸ್ಟ್ ಮಾಡಲಾಗಿದೆ. ಈ ವಿಡಿಯೋಗಳಿಗೆ ಮೋದಿ ಭಾಷಣದ ಕನ್ನಡಾನುವಾದದ ಹಿನ್ನೆಲೆ ಧ್ವನಿ ನೀಡಲಾಗಿದೆ.

ಶಿಕ್ಷಣ ಇಲಾಖೆಯಲ್ಲೂ ಕೋಟ್ಯಾಂತರ ರೂ. ಲೂಟಿಯಾಗಿದೆ

ಪ್ರಶ್ನೆ ಪತ್ರಿಕೆಯಲ್ಲಿ ಭಾರಿ ಅವ್ಯವಹಾರ; ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗಂಭೀರ ಆರೋಪ

- ಪ್ರತಿ ಪುಟದ ಪ್ರಶ್ನೆ ಪತ್ರಿಕೆ ಬೆಲೆ ಹೆಚ್ಚಳ
- ಅಧಿಕಾರಿಗಳು, ಸಚಿವರು ಹಗರಣದಲ್ಲಿ ಭಾಗಿ
- ಶಿಕ್ಷಣ ಸಚಿವ ಮಧು ಬಂಗಾರಪ್ಪಗೆ ಕೊಕ್ ಕೊಡಿ
- ಎನ್‌ಇಪಿ ಅರ್ಥೈಸಿಕೊಳ್ಳದೆ ಸರ್ಕಾರದಿಂದ ಅಧ್ವಾನ

ಮೈಸೂರು, ಏ.10(ಬಿಎಲ್‌ಯು)– ಪ್ರಶ್ನೆ ಪತ್ರಿಕೆ ಮುದ್ರಿಸುವ ಟೆಂಡರ್‌ನಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರ ನಡೆದಿದ್ದು, ಪ್ರತಿ ಪುಟದ ಪ್ರಶ್ನೆ ಪತ್ರಿಕೆ ಮುದ್ರಣದ ಬೆಲೆ ಹೆಚ್ಚಳ ಮಾಡಿ ಕಿಕ್ ಬ್ಯಾಕ್ ಪಡೆದಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗಂಭೀರ ಆರೋಪ ಮಾಡಿದ್ದಾರೆ.


ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಮೈಸೂರಿನ ಸಿದ್ಧಾರ್ಥ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಗರಣದಲ್ಲಿ ಸಚಿವರು ಹಾಗೂ ಅಧಿಕಾರಿಗಳು ಕೂಡ ಭಾಗಿಯಾಗಿದ್ದಾರೆ. ಹಣದಾಸೆಗಾಗಿ ಪರೀಕ್ಷೆಯ ಪಾವಿತ್ರ್ಯತೆ ಹಾಳು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಪ್ರಶ್ನೆ ಪತ್ರಿಕೆ ಮುದ್ರಣದ ಟೆಂಡರ್ ಅನ್ನು ಒಬ್ಬನೆ ವ್ಯಕ್ತಿಗೆ ನೀಡಲಾಗಿದೆ. ಇದರಿಂದ ಕೋಟ್ಯಾಂತರ ರೂಪಾಯಿ ಹಗರಣ ನಡೆದಿರುವುದು ಸ್ಪಷ್ಟವಾಗಿದೆ. ಆದರೆ ಈಗ ಸರ್ಕಾರ ಈ ಹಗರಣ ಮುಚ್ಚಿ ಹಾಕಲು ಮುಂದಾಗಿದೆ ಎಂದು ಆಪಾದಿಸಿದರು.

5, 8 ಮತ್ತು 9ನೇ ತರಗತಿ ಬೋರ್ಡ್ ಪರೀಕ್ಷೆಗಳು ಕಾನೂನುಬಾಹಿರವಾಗಿದ್ದು, ಸಂವಿಧಾನದ ಮೂಲಭೂತ ಹಕ್ಕಾದ 21 ಎ ಮತ್ತು ಶಿಕ್ಷಣದ ಹಕ್ಕು ಕಾಯ್ದೆ 30 ಅನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಈ ಮೂಲಕ ಶಿಕ್ಷಣದ ಹಕ್ಕು ಉಲ್ಲಂಘನೆ ಮಾಡಿರುವ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಎರಡು ಬಾರಿ ಛೀಮಾರಿ ಹಾಕಿದೆ ಎಂದು ಆಪಾದಿಸಿದರು.

ವಿದ್ಯಾರ್ಥಿಗಳು 8 ನೇ ತರಗತಿ ಮುಗಿಸುವ ತನಕ ಯಾವುದೇ ಬೋರ್ಡ್ ಪರೀಕ್ಷೆ ಪಾಸ್ ಮಾಡುವ ಅಗತ್ಯತೆಯನ್ನು ಕಾಯ್ದೆ ತಿಳಿಸುತ್ತದೆ. ಆದರೆ ಸರ್ಕಾರ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟಿದೆ. ಈ ವಿಚಾರದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸಂಪೂರ್ಣ ವಿಫಲರಾಗಿದ್ದು, ಕೂಡಲೇ ಶಿಕ್ಷಣ ಖಾತೆಯಿಂದ ಇವರನ್ನು ಬದಲಾವಣೆ ಮಾಡಬೇಕು ಎಂದು ವಿಶ್ವನಾಥ್ ಆಗ್ರಹಿಸಿದರು.

ಆರ್‌ಟಿಇ ಜಾರಿಗೆ ಬಂದ ನಂತರ ಶಿಕ್ಷಣ ವ್ಯವಸ್ಥೆಯಲ್ಲಿ ಹಲವು ನ್ಯೂನತೆಗಳಿದ್ದು, ಇದನ್ನು ಸರಿ ಮಾಡಲು ಹಿರಿಯ ವಕೀಲ ಕಪಿಲ್ ಸಿಬಲ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಆದರೆ ಈಗ ಸರ್ಕಾರ ಈ ವಿಚಾರದಲ್ಲಿ ಅಧ್ವಾನ ಮಾಡಿರುವ ಕಾರಣ ಸುಪ್ರೀಂಕೋರ್ಟ್ ಛೀಮಾರಿ ಹಾಕಿದೆ. ಈ ಮೂಲಕ ಮಕ್ಕಳ ಶಿಕ್ಷಣದ ಹಕ್ಕು ಎತ್ತಿ ಹಿಡಿದಿದೆ ಎಂದು ತಿಳಿಸಿದರು.

ಈ ಎಲ್ಲಾ ವಿಚಾರದಲ್ಲಿ ಮಧು ಬಂಗಾರಪ್ಪ ಸಂಪೂರ್ಣ ವಿಫಲರಾಗಿದ್ದಾರೆ. ಈ ಹಿನ್ನೆಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಮಧು ಬಂಗಾರಪ್ಪ ಅವರನ್ನು ಈ ಖಾತೆಯಿಂದ ಬದಲಾವಣೆ ಮಾಡಬೇಕು. ಅನುಭವವುಳ್ಳ ವ್ಯಕ್ತಿಗೆ ಶಿಕ್ಷಣ ಇಲಾಖೆಯ ಹೊಣೆ ವಹಿಸಬೇಕು ಸಲಹೆ ನೀಡಿದರು. ಈ ಮೂಲಕ ಸರ್ಕಾರ ತನ್ನ ಒಣ ಪ್ರತಿಷ್ಠೆ ಬಿಟ್ಟು ಮಕ್ಕಳ ಹಿತಾಸಕ್ತಿ ಗೌರವಿಸಬೇಕು. ಮಂಡಳಿಯ ಪರೀಕ್ಷೆಯ ಎಲ್ಲಾ ಪ್ರಕ್ರಿಯೆ ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಜಾರಿಗೊಳಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯ ಕಾಂಗ್ರೆಸ್ ಸರಿಯಾಗಿ ಅರ್ಥೈಸಿಕೊಂಡಿಲ್ಲ. ಈ ಕಾರಣದಿಂದ ಎನ್‌ಇಪಿ ಜಾರಿಯಿಂದ ಹಿಂದೆ ಸರಿದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಕೇಂದ್ರ ಸರ್ಕಾರದ ಮುಂದೆ ರಾಜ್ಯ ಸರ್ಕಾರದ ಕಾಯ್ದೆ ನಡೆಯುವುದಿಲ್ಲ ಎಂದು ಮನದಟ್ಟು ಮಾಡಿಕೊಳ್ಳಬೇಕು ಎಂದು ಮತ್ತೊಮ್ಮೆ ಸಲಹೆ ನೀಡಿದರು. ಕರ್ನಾಟಕ ಶಿಕ್ಷಣ ಕ್ಷೇತ್ರದಲ್ಲಿ ಹಲವು ವಿನೂತನ ಕಾರ್ಯಕ್ರಮಗಳಿಂದ ದೇಶದಲ್ಲೆ ಅಗ್ರಸ್ಥಾನದಲ್ಲಿತ್ತು ಆದರೆ ಈಗ ತೀರ ಕೆಳಗೆ ಇದ್ದೇವೆ. ಶಿಕ್ಷಣದ ಗ್ಯಾರಂಟಿ ಮಕ್ಕಳಿಗೆ ಬಹಳ ಮುಖ್ಯವಾಗಿದ್ದು ಸರ್ಕಾರ ಶಾಲಾ ಶಿಕ್ಷಣದ ಗ್ಯಾರಂಟಿ ಕೂಡ ನೀಡಬೇಕು ಎಂದು ಆಗ್ರಹಿಸಿದರು.

ಯದುವೀರ್, ಕುಮಾರಸ್ವಾಮಿ ಬೆಂಬಲಿಸಿ ಪ್ರಚಾರಕ್ಕೆ ಹೋಗುವೆ

ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರೂ ಯದುವೀರ್ ವಿರುದ್ಧ ಸ್ಪರ್ಧಿಸುತ್ತಿರಲಿಲ್ಲ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಹಾಗೂ ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಬೆಂಬಲಿಸಿ ಪ್ರಚಾರಕ್ಕೆ ಹೋಗುತ್ತೇನೆ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ನಾನು ಎಂದೂ ಅವಕಾಶಸಿಂಧು ರಾಜಕಾರಣಿ ಅಲ್ಲ. ಆದರೆ ಸಂದರ್ಭ ಹುಡುಕದೆ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಆಗಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಸ್ಪಷ್ಟಪಡಿಸಿದರು.

ನಾನು ಈಗಲೂ ಬಿಜೆಪಿ ವಿಧಾನಪರಿಷತ್ ಸದಸ್ಯ. ತಾಂತ್ರಿಕವಾಗಿ ನಾನು ಬಿಜೆಪಿ ಎಂಎಲ್‌ಸಿ ಎಂದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ವಿಶ್ವನಾಥ್ ತಿಳಿಸಿದರು.

ನಾನು ಕಾಂಗ್ರೆಸ್‌ನಿಂದ ಟಿಕೆಟ್ ಕೇಳಿದ್ದು ನಿಜ. ಆದರೆ ಯದುವೀರ್‌ಗೆ ಟಿಕೆಟ್ ಕೊಟ್ಟ ಬಳಿಕ ನನಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರೆ ನಾನು ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಿರಲಿಲ್ಲ. ಏಕೆಂದರೆ ರಾಜ್ಯ ಹಾಗೂ ದೇಶಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದ ಮೈಸೂರು ಮಹಾರಾಜರಿಗೆ ನಾನು ಬದ್ಧನಾಗಿದ್ದೇನೆ. ನನ್ನ ಮತ ಹಾಗೂ ಬೆಂಬಲವನ್ನು ಯದುವೀರ್‌ಗೆ ನೀಡುವ ಮೂಲಕ ಮಹಾರಾಜರ ಋಣ ತೀರಿಸಲು ನಿರ್ಧರಿಸಿದ್ದೇನೆ ಎಂದರು.

ಯದುವೀರ್ ಯಾರು ಎಂದು ಪ್ರಶ್ನೆ ಕೆಲವರು ಕೇಳುತ್ತಾರೆ. ಮಹಾರಾಜರ ಹಿರಿಯ ಮಗಳು ಗಾಯತ್ರಿದೇವಿಯವರ ಮೊಮ್ಮಗನೇ ಯದುವೀರ್. ಆದ ಕಾರಣ ಮೈಸೂರು ರಾಜಮನೆತನದ ಯದುವೀರ್ ಬೆಂಬಲಿಸಬೇಕು ಎಂದು ಎಂಎಲ್‌ಸಿ ಹೆಚ್. ವಿಶ್ವನಾಥ್ ಸಲಹೆ ನೀಡಿದರು.

ರಾಜಕಾರಣ ಹರಿಯುವ ನೀರಲ್ಲ, ಗಂಗೆ ಇದ್ದಂತೆ. ಎಂದೂ ಇದನ್ನು ಕಲುಷಿತ ಮಾಡಬಾರದು. ಒಂದು ವೇಳೆ ಕಲುಷಿತವಾದರೆ ಶುದ್ಧೀಕರಿಸಿ ಕುಡಿಯಬೇಕು. ಹಾಗೆಯೇ ರಾಜಕಾರಣವನ್ನು ಕಲುಷಿತ ಮುಕ್ತ ಮಾಡಬೇಕು ಎಂದು ಸಲಹೆ ನೀಡಿದರು. ಪಕ್ಷ ರಾಜಕಾರಣ ಸತ್ತು ಬಹಳ ವರ್ಷಗಳಾಗಿದೆ. ಇವತ್ತು ವ್ಯಕ್ತಿ ರಾಜಕಾರಣವಿದ್ದು, ಇದೇ ವೈಭವೀಕರಣಗೊಳ್ಳುತ್ತಿದೆ ಎಂದು ವಿಶ್ವನಾಥ್ ಬೇಸರ ವ್ಯಕ್ತಪಡಿಸಿದರು.

ದೇವರಾಜ ಅರಸ್ ಕೈ ಹಿಡಿಯದ ಜನರು, ಗ್ಯಾರಂಟಿ ಕೈ ಹಿಡಿಯುವರೆ!?

ಮಹತ್ವದ ಹಾಗೂ ಐತಿಹಾಸಿಕ ತೀರ್ಮಾನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ ದಿವಂಗತ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರನ್ನೇ ಕೈ ಹಿಡಿಯದ ಜನರು, ಇನ್ನು ಗ್ಯಾರಂಟಿ ನೀಡುವ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಕೈ ಹಿಡಿಯುವರೇ ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನಿಸಿದರು.

ದೇವರಾಜ ಅರಸ್ ಅವರು ಜಾರಿಗೊಳಿಸಿದ ಬಹಳಷ್ಟು ಕಾನೂನು ಇಂದು ಕೂಡ ಪ್ರಸ್ತುತವಾಗಿದೆ. ಅವರ ಸಾಮಾಜಿಕ ಕ್ರಾಂತಿ ಪರಿಕಲ್ಪನೆಯ ತೀರ್ಮಾನಗಳನ್ನು ಇಂದು ಕೂಡ ಜನರು ಅನುಭವಿಸುತ್ತಿದ್ದಾರೆ. ಆದರೆ ದೇವರಾಜ ಅರಸ್ ಕಾಂಗ್ರೆಸ್‌ನಿಂದ ಹೊರ ಬಂದು ಸ್ವತಂತ್ರ ಪಕ್ಷ ಕಟ್ಟಿದ್ದಾಗ ಅವರನ್ನು ಜನರು ಕೈ ಹಿಡಿಯಲಿಲ್ಲ ಎಂದರು. ಕೆ.ಆರ್.ನಗರ ಕ್ಷೇತ್ರದಲ್ಲಿ ನಾನೇ ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೆ. ಆದರೆ ಜನರು ನನ್ನನ್ನೇ ಕೈ ಹಿಡಿಯಲಿಲ್ಲ ಎಂದು ತಿಳಿಸಿದರು. ಇದರಿಂದ ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಶೇಕಡ 100ರಷ್ಟು ಮತಗಳಾಗಿ ಪರಿವರ್ತನೆ ಆಗುತ್ತದೆ ಎಂದು ಹೇಳಲು ಬರುವುದಿಲ್ಲ. ಮನೆಯಲ್ಲಿದ್ದಾಗ ಇದ್ದ ಮತದಾರನ ಮನಸು ಮತಗಟ್ಟೆಗೆ ಹೋದಾಗ ಬದಲಾಗುತ್ತದೆ ಎಂದು ವಿಶ್ವನಾಥ್ ಅಭಿಪ್ರಾಯಪಟ್ಟರು.

ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಮಂತ್ರಿ ಆಗುತ್ತಾರೆ. ಆದರೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಥವಾ ರಾಹುಲ್ ಗಾಂಧಿಗೆ ಸ್ಪಷ್ಟ ಬಹುಮತ ಬಂದರೆ ಅವರು ಪ್ರಧಾನಿ ಆಗಬಹುದು ಎಂದು ವಿಶ್ವನಾಥ್ ಹೇಳಿದರು.

ಕೆಸರಿನ ಕಂದಕಕ್ಕೆ ಬಿದ್ದ ಕಾಡಾನೆ ರಕ್ಷಣೆ



ಚಿಕ್ಕಬೆಟಗೇರಿ ಕೆರೆಮೂಲೆಯ ಕೆಸರಿನ ಕಂದಕಕ್ಕೆ ಕಾಡಾನೆ ಬಿದ್ದಿರುವುದು.

ಕುಶಾಲನಗರ, ಏ.10–ಸಮೀಪದ ಚಿಕ್ಕ ಬೆಟಗೇರಿ ಕೆರೆಮೂಲೆಯ ಕೆಸರಿನ ಕಂದಕಕ್ಕೆ ಬಿದ್ದು ಒದ್ದಾಡುತ್ತಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಗ್ರಾಮಸ್ಥರು ರಕ್ಷಿಸಿದರು.

ಆಹಾರ ಅರಸಿ ಕಾಡಿನಿಂದ ಬಂದಿದ್ದ ಸುಮಾರು 16 ವರ್ಷದ ಕಾಡಾನೆ, ಹರೀಶ್ ಹಾಗೂ ಅಶೋಕ್ ಅವರ ಜಮೀನಿಗೆ ಲಗ್ಗೆಯಿಟ್ಟು ಬುಧವಾರ ದಾಂಧಲೆ ನಡೆಸಿದೆ. ಪರಿಣಾಮ ಅಶೋಕ್ ಅವರಿಗೆ ಸೇರಿದ ಕೊಳವೆ ಬಾವಿಯ ಮೋಟಾರು ಭೂಮಿಯೊಳಗೆ ಕುಸಿದು ಬಿದ್ದಿದೆ.

ನಂತರ ಮಾಹಿತಿ ಮೇರೆಗೆ ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಕಾಡಾನೆಯನ್ನು ಕಾಡಿಗಟ್ಟಲು ಮುಂದಾಗಿದ್ದಾರೆ. ಈ ಸಂದರ್ಭ ಕಾಡಾನೆ ಕೆಸರಿನ ಆನೆ ಕಂದಕದೊಳಗೆ ಸಿಲುಕಿ ಹೊರಬರಲಾಗದೆ ಪರದಾಡಿದೆ.

ಬಳಿಕ ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ ಸ್ಥಳೀಯರ ನೆರವಿನಿಂದ ಜೆಸಿಬಿ ಮೂಲಕ ಕಾಡಾನೆ ಮೇಲೆತ್ತಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಸತತ 3 ಗಂಟೆ ಕಾರ್ಯಾಚರಣೆ ಬಳಿಕ ತಾನಾಗಿಯೇ ಚೇತರಿಸಿಕೊಂಡ ಕಾಡಾನೆ ಕಂದಕದೊಳಗೆ ಮುಂದೆ ಸಾಗಿ ಸಮೀಪದ ತೋಟದೊಳಗೆ ಸೇರಿಕೊಂಡಿತು.

ಇದೇ ವೇಳೆ ಲಾಲು ಅವರ ಶುಂಠಿ ಬೆಳೆ ಹಾಗೂ ನಾದನ್ ಅವರಿಗೆ ಸೇರಿದ ದ್ವಿಚಕ್ರ ವಾಹನವನ್ನು ಕಾಡಾನೆ ಹಾನಿಗೊಳಿಸಿದೆ. ಇದೇ ಕಾಡಾನೆ ಬಾಳುಗೋಡು ಬೆಟ್ಟಗೇರಿ ವ್ಯಾಪ್ತಿಯ ಕೃಷಿ ಭೂಮಿಗಳಿಗೆ ದಾಳಿ ನಡೆಸಿ, ಫಸಲು ನಷ್ಟ ಮಾಡುತ್ತಿತ್ತು ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ರತನ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿಗಳಾದ ರಂಜನ್, ಅನಿಲ್ ಡಿಸೋಜ, ದೇವಯ್ಯ ಮತ್ತು ಅರಣ್ಯ ರಕ್ಷಕರು ಭಾಗವಹಿಸಿದ್ದರು.

ದ್ವಿತೀಯ ಪಿಯುಸಿಯಲ್ಲಿ ಕೊಡಗಿಗೆ 5ನೇ ಸ್ಥಾನ

ಜಿಲ್ಲೆಯಲ್ಲಿ 4576 ವಿದ್ಯಾರ್ಥಿಗಳ ಪೈಕಿ 4216 ವಿದ್ಯಾರ್ಥಿಗಳು ತೇರ್ಗಡೆ

ಮಡಿಕೇರಿ, ಏ.10–ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕೊಡಗು ಜಿಲ್ಲೆ ಶೇ.92.13ರಷ್ಟು ಫಲಿತಾಂಶ ಪಡೆಯುವ ಮೂಲಕ ರಾಜ್ಯದಲ್ಲಿ 5ನೇ ಸ್ಥಾನ ಪಡೆದಿದೆ.

ಕಳೆದ ಸಾಲಿನಲ್ಲಿ ಶೇ.90.55ರಷ್ಟು ಫಲಿತಾಂಶ ದಾಖಲಿಸುವ ಮೂಲಕ ತೃತೀಯ ಸ್ಥಾನ ಪಡೆದಿದ್ದ ಕೊಡಗು. ಈ ಬಾರಿ ಶೇಕಡವಾರು ಫಲಿತಾಂಶದಲ್ಲಿ ಏರಿಕೆ ಕಾಣುವ ಮೂಲಕ ಉತ್ತಮ ಸಾಧನೆ ಮಾಡಿದ್ದರೂ, ರಾಜ್ಯವಾರು ಫಲಿತಾಂಶದಲ್ಲಿ 5ನೇ ಸ್ಥಾನಕ್ಕೆ ತೃಪ್ತಿಪಟ್ಟಿದೆ. ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿ ಬೀಗಿದ್ದಾರೆ.

ಜಿಲ್ಲೆಯಲ್ಲಿ 4576 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 4216 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ 804 ವಿದ್ಯಾರ್ಥಿಗಳ ಪೈಕಿ 671 ಮಂದಿ ಉತ್ತೀರ್ಣರಾಗಿದ್ದು, ಶೇ.83.46 ಫಲಿತಾಂಶ ದಾಖಲಾಗಿದೆ. ವಾಣಿಜ್ಯ ವಿಭಾಗದಲ್ಲಿ 2351 ವಿದ್ಯಾರ್ಥಿಗಳ ಪೈಕಿ 2196 ವಿದ್ಯಾರ್ಥಿಗಳು ತೇರ್ಗಡೆಯಾಗಿ, ಶೇ.93.41 ಫಲಿತಾಂಶ ಲಭಿಸಿದೆ. ವಿಜ್ಞಾನ ವಿಭಾಗದಲ್ಲಿ 1421 ವಿದ್ಯಾರ್ಥಿಗಳ ಈ ಪೈಕಿ 1349 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.94.93ರಷ್ಟು ಫಲಿತಾಂಶ ಬಂದಿದೆ.

ಖಾಸಗಿಯಾಗಿ ಪರೀಕ್ಷೆ ಬರೆದಿದ್ದ 385 ವಿದ್ಯಾರ್ಥಿಗಳ ಪೈಕಿ 222 ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಶೇ.57.66ರಷ್ಟು ಫಲಿತಾಂಶ ಹಾಗೂ ಪುನರಾವರ್ತಿತ 140 ಅಭ್ಯರ್ಥಿಗಳ ಪೈಕಿ 71 ಮಂದಿ ತೇರ್ಗಡೆಯಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ಪುಟ್ಟರಾಜು ತಿಳಿಸಿದರು.

ಕಲಾ ವಿಭಾಗ: ಕಲಾ ವಿಭಾಗದಲ್ಲಿ ಮಡಿಕೇರಿಯ ಸಂತ ಜೋಸೆಫರ ಪಿಯು ಕಾಲೇಜು ಪ್ರಥಮ ಮತ್ತು ತೃತೀಯ ಸ್ಥಾನ ಪಡೆದಿದೆ. ಈ ಕಾಲೇಜಿನ ಎಸ್.ಹೇಮಾವತಿ(574), ಎಸ್.ಶ್ರೀನಂದಾ(571) ಮತ್ತು ಸಿದ್ದಾಪುರದ ಇಕ್ರಾ ಪಿಯು ಕಾಲೇಜಿನ ಪಿ.ಐ.ಸಪ್ನಾ(572) ಅಂಕ ಪಡೆದಿದ್ದಾರೆ.

ವಾಣಿಜ್ಯ ವಿಭಾಗ: ವಾಣಿಜ್ಯ ವಿಭಾಗದಲ್ಲಿ ಗೋಣಿಕೊಪ್ಪಲು ವಿದ್ಯಾನಿಕೇತನ ಪಿಯು ಕಾಲೇಜಿನ ಚರಿಷ್ಮಾ ಜಾನ್‌ಸನ್ (591), ಗೋಣಿಕೊಪ್ಪಲು ಸರ್ವ ದೈವತಾ ಕಾಲೇಜಿನ ಕೆ.ಕೆ.ರಶ್ಮಿತಾ(589), ಪೊನ್ನಂಪೇಟೆ ಸಂತ ಅಂತೋಣಿ ಕಾಲೇಜಿನ ಐ.ಬಿಂದು(588) ಮತ್ತು ಮಡಿಕೇರಿ ತಾಲೂಕಿನ ಮರ್ಕಜ್ ಪಿಯು ಕಾಲೇಜಿನ ಜೂವೇರಿಯಾ ಪಿ.ಝುಡ್(588) ಅಂಕ ಗಳಿಸಿದ್ದಾರೆ.

ವಿಜ್ಞಾನ ವಿಭಾಗ: ವಿಜ್ಞಾನ ವಿಭಾಗದಲ್ಲಿ ಮಡಿಕೇರಿಯ ಸಂತ ಮೈಕಲರ ಪಪೂ ಕಾಲೇಜಿನ ಎ.ಡಿಯಾನ ನವೀನ್(592), ಡಿ.ಪಿ.ಜೀವನ್(588), ಪೊನ್ನಂಪೇಟೆ ಕೂರ್ಗ್ ಇನ್ಸಿಟ್ಯೂಟ್ ಆಫ್ ಪಿಯು ಕಾಲೇಜಿನ ಹೆಚ್.ಆರ್.ಸಿಂಚನಾ(588) ಮತ್ತು ಗೋಣಿಕೊಪ್ಪ ವಿದ್ಯಾನಿಕೇತನ ಪಿಯು ಕಾಲೇಜಿನ ಎಂ.ಎಂ.ಕಾವೇರಮ್ಮ ತೃತೀಯ ಸ್ಥಾನ ಪಡೆದು, ಜಿಲ್ಲೆಯಲ್ಲೇ ಅತಿ ಹೆಚ್ಚು ಅಂಕ ಗಳಿಸಿದ್ದಾರೆ.

ತಾಯಿ–ಮಗಳು ಉತ್ತೀರ್ಣ



ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಯಾದ ರಿನಿಶಾ ಹಾಗೂ ಈಕೆಯ ತಾಯಿ ಎಂ.ಯು.ಬೇಬಿರಾಣಿ.

ಕುಶಾಲನಗರ ತಾಲೂಕಿನ ಕೂಡ್ಲೂರು ಚೆಟ್ಟಳ್ಳಿ ಗ್ರಾಮದ ರಿನಿಶಾ ಹಾಗೂ ಈಕೆಯ ತಾಯಿ ಎಂ.ಯು.ಬೇಬಿರಾಣಿ 2023–24ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಜಿಲೆಯಲ್ಲಿ ಹೊಸ ದಾಖಲೆ ಬರೆದಿದ್ದಾರೆ.

ಎಲೆಕ್ಟ್ರಿಕಲ್ ಕ್ಲಾಸ್ 1 ಗುತ್ತಿಗೆದಾರ ಟಿ.ಕೆ. ಸುರೇಂದ್ರ ಪುತ್ರಿ ರಿನಿಶಾ ಗೋಣಿಕೊಪ್ಪಲಿನ ವಿದ್ಯಾನಿಕೇತನ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 570 ಅಂಕ ಪಡೆದು ತೇರ್ಗಡೆಯಾಗಿದ್ದಾಳೆ. ಈಕೆಯ ತಾಯಿ ಎಂ.ಯು. ಬೇಬಿರಾಣಿ ನೆಲ್ಲಿಹುದಿಕೇರಿ ಜೂನಿಯರ್ ಕಾಲೇಜಿನಲ್ಲಿ ಖಾಸಗಿ ಅಭ್ಯರ್ಥಿಯಾಗಿ ಕಲಾ ವಿಭಾಗದಲ್ಲಿ ಪರೀಕ್ಷೆ ಬರೆದು 600ಕ್ಕೆ 388 ಅಂಕ ಪಡೆಯುವ ಮೂಲಕ ತಾಯಿ–ಮಗಳು ಉತ್ತೀರ್ಣರಾಗಿ ಮಾದರಿ ಮಹಿಳೆ ಎನಿಸಿಕೊಂಡಿದ್ದಾರೆ.

25 ವರ್ಷಗಳ ಹಿಂದೆ 10ನೇ ತರಗತಿ ಓದಿದ ನಂತರ ಈಗ ಮಗಳ ಒತ್ತಾಯಕ್ಕಾಗಿ ಪಿಯುಸಿ ಪರೀಕ್ಷೆ ಬರೆದು ಉತ್ತೀರ್ಣರಾಗಿರುವುದು ಹೆಮ್ಮೆ ಎನಿಸಿದೆ ಎಂದು ಬೇಬಿರಾಣಿ ಸಂತಸ ಹಂಚಿಕೊಂಡಿದ್ದಾರೆ. ನನ್ನ ತಾಯಿ ಪಿಯುಸಿ ಉತ್ತೀರ್ಣರಾಗಿರುವುದು ನಾನು ಉತ್ತೀರ್ಣರಾಗಿರುವುದಕ್ಕಿಂತಲೂ ಖುಷಿಯಾಗಿದೆ ಎಂದು ರಿನಿಶಾ ಹೇಳಿದ್ದಾಳೆ.

ಶಿವಕೇರಿ ದೇವಸ್ಥಾನದಲ್ಲಿ ಪೂಜಾ ಕಾರ್ಯ



ವಿರಾಜಪೇಟೆಯ ಶಿವಕೇರಿಯ ದುರ್ಗಿ ವಿಷ್ಣುಮೂರ್ತಿ ಹಾಗೂ ನಾಗ ದೇವಸ್ಥಾನದಲ್ಲಿ ಸತ್ಯನಾರಾಯಣ ಪೂಜೆ ನೆರವೇರಿಸಲಾಯಿತು.

ವಿರಾಜಪೇಟೆ, ಏ.10–ವಿರಾಜಪೇಟೆಯ ಶಿವಕೇರಿಯ ಶ್ರೀ ದುರ್ಗಿ ವಿಷ್ಣುಮೂರ್ತಿ ಹಾಗೂ ನಾಗ ದೇವಸ್ಥಾನ ವಾರ್ಷಿಕೋತ್ಸವ ಮತ್ತು ಪ್ರತಿಷ್ಠಾನ ವರ್ಧಂತಿ ದೇವತಾ ಕಾರ್ಯವನ್ನು ಮಂಗಳವಾರ ಭಕ್ತಿಯಿಂದ ಆಚರಿಸಲಾಯಿತು.

ಯುಗಾದಿ ಹಬ್ಬದ ಪ್ರಯುಕ್ತ ದೇವಾಲಯದಲ್ಲಿ ಶ್ರೀ ಸತ್ಯನಾರಾಯಣ ಪೂಜೆ ನಡೆಯಿತು. ಇದಕ್ಕೂ ಮೊದಲು ಬೆಳಗ್ಗೆ ಶ್ರೀ ದುರ್ಗಿ ವಿಷ್ಣುಮೂರ್ತಿ ಹಾಗೂ ನಾಗ ದೇವರಿಗೆ ಪ್ರಥಮ ಗಣಹೋಮ, ವಿಷ್ಣು ಸಹಸ್ರನಾಮ, ತುಳಸಿ ಅರ್ಚನೆ, ಕಳಶಾಭಿಷೇಕ ಹಾಗೂ ವಿಶೇಷ ಪೂಜೆ ನೆರವೇರಿಸಲಾಯಿತು.

ದೇವಸ್ಥಾನದ ಆವರಣದಲ್ಲಿ ದುರ್ಗಿ ವಿಷ್ಣು ದೇವರ ಉತ್ಸವ ಮೂರ್ತಿಯ ನೃತ್ಯ ನಡೆಯಿತು. ಮಹಾಪೂಜೆ ನಂತರ ಮಧ್ಯಾಹ್ನ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಪೂಜಾ ಕಾರ್ಯದಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರು, ನೂರಾರು ಭಕ್ತರು ಭಾಗವಹಿಸಿದ್ದರು.

ಹಲವು ಕಾಂಗ್ರೆಸ್ಸಿಗರು ಬಿಜೆಪಿಗೆ ಸೇರ್ಪಡೆ

ಮಡಿಕೇರಿ, ಏ.10–ಕೊಡವ ಮಕ್ಕಡ ಕೂಟದ ಸ್ಥಾಪಕಾಧ್ಯಕ್ಷ ಹಾಗೂ ವಿಧಾನ ಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಅವರ ಕಾರ್ಯದರ್ಶಿ ಬೊಳ್ಳಜಿರ ಬಿ.ಅಯ್ಯಪ್ಪ ತಮ್ಮ ಬೆಂಬಲಿಗರೊಂದಿಗೆ ಬಿಜೆಪಿಗೆ ಸೇರ್ಪಡೆಗೊಂಡರು.

ಕುಶಾಲನಗರದ ಕಾರು ನಿಲ್ದಾಣದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖ ಹಾಗೂ ಬೊಳ್ಳಜಿರ ಬಿ.ಅಯ್ಯಪ್ಪ ನೇತೃತ್ವದಲ್ಲಿ ಚನ್ನಪಂಡ ದರ್ಶನ್, ಅಜ್ಜಮಕ್ಕಡ ನವೀನ್, ಸುಮಂತ್ ಪೂಜಾರಿ, ನಿತಿನ್ ಪೂಜಾರಿ, ತಂಬುಕುತ್ತಿರ ಮೊಣ್ಣಯ್ಯ, ಸಿ.ಡಿ.ಪ್ರಸಾದ್, ಕೆ.ಜಿ.ವಿನಯ್, ಕೆ.ಎಸ್. ರಕ್ಷಿತ್, ಕೆ.ಜೆ.ಹರ್ಷಿತ್, ಬಿ.ಇ.ಲೋಹಿತ್, ಕೆ.ಕೆ.ಗಿರೀಶ್, ಸಿ.ಎಂ.ಪ್ರಮೋದ್, ಎಸ್.ಎಸ್. ಅಕ್ಷಿತ್, ಎಂ.ಬಿ.ಆನಂದ್, ಪಿ.ಆರ್.ಚಂದ್ರಕಾಂತ್, ಸಿ.ಆರ್.ಬಿಪಿನ್, ಜಿ.ಕೆ.ಬೀನಾ, ಸಿ.ಎಸ್.ತೀರ್ಥ, ಶಿವಯ್ಯ, ವೀರನ್ ದೇವಯ್ಯ, ಕವನ್ ಕಾರ್ಯಪ್ಪ, ಶರೀಫ್, ಕೆ.ಕೆ.ಕೌಶಿಕ್, ಜಗದೀಶ್, ಹೃತಿಕ್, ವಂಸತ್, ರಾಜ, ಆನಂದ್, ಲೋಕೇಶ್, ರಂಜಿತ್, ಶಶಾಂಕ್, ಮಂಜು, ಅಜ್ಜಮಕ್ಕಡ ವಿನು ಕುಶಾಲಪ್ಪ ಸೇರಿದಂತೆ 50ಕ್ಕೂ ಹೆಚ್ಚು ಮಂದಿ ಬಿಜೆಪಿಗೆ ಸೇರ್ಪಡೆಗೊಂಡರು.

ಸಭೆಯಲ್ಲಿ ಮಾಜಿ ಶಾಸಕರಾದ ಕೆ.ಜಿ. ಬೋಪಯ್ಯ, ಎಂ.ಪಿ.ಅಪ್ಪಚ್ಚುರಂಜನ್, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಸೋಮವಾರಪೇಟೆ ಮಂಡಲ ಅಧ್ಯಕ್ಷ ಗೌತಮ್ ಗೌಡ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.



ಕುಶಾಲನಗರದ ಕಾರು ನಿಲ್ದಾಣದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಯದುವೀರ್ ಸಮ್ಮುಖದಲ್ಲಿ ಬೊಳ್ಳಜಿರ ಬಿ.ಅಯ್ಯಪ್ಪ ತಮ್ಮ ಬೆಂಬಲಿಗರೊಂದಿಗೆ ಬಿಜೆಪಿಗೆ ಸೇರ್ಪಡೆಗೊಂಡರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಡಿಕೇರಿ,ಏ.10– ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯಡಿ 2024–25ನೇ ಸಾಲಿಗೆ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳ ದಾಖಲಾತಿಗಾಗಿ ಆನ್‌ಲೈನ್‌ನಲ್ಲಿ ಪೋಷಕರು ಹೆಚ್ಚು ಅರ್ಜಿ ಸಲ್ಲಿಸಲು ಅವಕಾಶ ನೀಡುವ ಸಲುವಾಗಿ ಅರ್ಜಿ ಸಲ್ಲಿಕೆಗೆ ಮೇ20ರವರೆಗೆ ಅವಧಿ ವಿಸ್ತರಿಸಲಾಗಿದೆ.

ಇಲಾಖಾ ವೆಬ್‌ಸೈಟ್ http://www.schooleducation.karnataka.gov.in ನಲ್ಲಿ ಆಸಕ್ತ ಪೋಷಕರು ಅರ್ಜಿ ಸಲ್ಲಿಸಬಹುದು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೇತು ಗ್ರಾಮದಲ್ಲಿ ಕಾಫಿ ಗಿಡಗಳಿಗೆ ಬೆಂಕಿ



ಬೇತು ಗ್ರಾಮದ ಕೊಂಡೀರ ಪೂವಣ್ಣ ತೋಟದಲ್ಲಿ ಕಾಫಿ ಗಿಡಗಳು ಬೆಂಕಿಗೆ ಸುಟ್ಟು ಹೋಗಿರುವುದು.

ನಾಪೋಕ್ಲು (ದುಗ್ಗಳ), ಏ.10– ಸಮೀಪದ ಬೇತು ಗ್ರಾಮದಲ್ಲಿ ಬುಧವಾರ ಮಧ್ಯಾಹ್ನ ಆಕಸ್ಮಿಕ ಬೆಂಕಿಗೆ ಹುಲ್ಲಿನ ರಾಶಿ ಭಸ್ಮವಾಗಿ, 50 ಕಾಫಿ ಗಿಡಗಳು ಸುಟ್ಟು ಹೋಗಿವೆ.

ಗ್ರಾಮ ಕೊಂಡೀರ ಪೂವಣ್ಣ (ಗಿರಿ) ಅವರ ಗದ್ದೆಯಲ್ಲಿದ್ದ ಹುಲ್ಲಿನ ರಾಶಿಗೆ ಆಕಸ್ಮಿಕ ಬೆಂಕಿ ತಗುಲಿದೆ. ಬಳಿಕ ಪಕ್ಕದ ಕಾಫಿ ತೋಟಕ್ಕೂ ಬೆಂಕಿಯ ಜ್ವಾಲೆ ಹಬ್ಬಿ ಸುಮಾರು 50 ಕಾಫಿ ಗಿಡಗಳಷ್ಟು ಸುಟ್ಟು ಹೋಗಿವೆ.

ಗ್ರಾಮಸ್ಥರು ಹರಸಾಹಸಪಟ್ಟು ಬೆಂಕಿ ನಂದಿಸಿದರು. ಅಗ್ನಿಶಾಮಕ ದಳದ ವಾಹನ ಆಗಮಿಸಿದ್ದರೂ ಸ್ಥಳಕ್ಕೆ ತೆರಳಲಾಗದೆ ಮಕ್ಕಿ ಶಾಸ್ತವು ದೇವಾಲಯ ಸಮೀಪ ನಿಲ್ಲಿಸಲಾಯಿತು. ಬಳಿಕ ಸಿಬ್ಬಂದಿ ಸ್ಥಳಕ್ಕೆ ತೆರಳಿ ಉಳಿದ ಅಲ್ಪಸ್ವಲ್ಪ ಬೆಂಕಿ ನಂದಿಸಿದರು.

ಪಿಯು ಫಲಿತಾಂಶ: ಚಾ.ನಗರಕ್ಕೆ 14ನೇ ಸ್ಥಾನ

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಶೇಕಡಾ 84.99ರಷ್ಟು ಫಲಿತಾಂಶ



ಫಲಿತಾಂಶ ತುಂಬಾ ಖುಷಿಯಾಗಿದೆ. ಕಂಪ್ಯೂಟರ್ ಸೈನ್ಸ್‌ನಲ್ಲಿ ಇನ್ನೂ ಉತ್ತಮ ಅಂಕ ಬರಬೇಕಾಗಿತ್ತು. ಅದನ್ನು ಮರು ಮೌಲ್ಯಮಾಪನಕ್ಕೆ ಹಾಕಲು ನಿರ್ಧರಿಸಿದ್ದೇನೆ. ಪೋಷಕರು ಹಾಗೂ ಉಪನ್ಯಾಸಕರ ಬೆಂಬಲವಿತ್ತು. ಕಾಲೇಜಿನಲ್ಲಿ ವಿಶೇಷ ತರಗತಿಗಳು ನನಗೆ ಸಹಕಾರಿ ಯಾಗಿತ್ತು. ಬಿಕಾಂ ಜೊತೆಗೆ ಎಸಿಸಿಎ ಮಾಡಲು ನಿರ್ಧರಿಸಿದ್ದೇನೆ.

–ರೋಹಿತ್ ಪ್ರಸಾದ್, ವಾಣಿಜ್ಯ ವಿಭಾಗದ ಟಾಪರ್



ವಿಜ್ಞಾನ ವಿಭಾಗದಲ್ಲಿ ಜಿಲ್ಲೆಗೇ ಟಾಪರ್ ಆಗಿರುವುದು ತುಂಬಾ ಖುಷಿಯಾಗಿದೆ. ಇದಕ್ಕಾಗಿ ಹೆಚ್ಚಿನ ಪರಿಶ್ರಮ ಹಾಕಿದ್ದೆ. ಅದಕ್ಕೆ ತಕ್ಕ ಪ್ರತಿಫಲ ದೊರೆತಿದೆ. ಪೋಷಕರು, ಉಪನ್ಯಾಸಕರ ಪ್ರೋತ್ಸಾಹದಿಂದ ನನ್ನ ಉತ್ತಮ ಫಲಿತಾಂಶಕ್ಕೆ ಕಾರಣರಾಗಿದ್ದಾರೆ.

–ಎಸ್.ನಿಶ್ಚಿತಾ, ವಿಜ್ಞಾನ ವಿಭಾಗದ ಟಾಪರ್

ಚಾಮರಾಜನಗರ, ಏ.10–ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಒಟ್ಟಾರೆ ಶೇ.84.99ರಷ್ಟು ಫಲಿತಾಂಶ ದೊರೆತಿದ್ದು, ರಾಜ್ಯದಲ್ಲಿ 14ನೇ ಸ್ಥಾನ ಪಡೆದುಕೊಂಡಿದೆ.

ಕಳೆದ ವರ್ಷಕ್ಕೆ ಹೋಲಿಸಿದರೆ 2 ಸ್ಥಾನ ಇಳಿಕೆಯಾಗಿದೆ. ಜಿಲ್ಲೆಯಲ್ಲಿ ಪರೀಕ್ಷೆ ಬರೆದಿದ್ದ 6342 ವಿದ್ಯಾರ್ಥಿಗಳ ಪೈಕಿ 5390 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಬಾಲಕಿಯರೇ ಮೇಲುಗೈ: ಈ ಬಾರಿಯೂ ಜಿಲ್ಲೆಯಲ್ಲಿ ಬಾಲಕಿಯರೇ ಮೇಲುಗೈ ಸಾಧಿಸಿದ್ದು, ಶೇ.84.51ರಷ್ಟು ಬಾಲಕಿಯರು ಹಾಗೂ ಶೇ.75.45ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. 3136 ಬಾಲಕರ ಪೈಕಿ 2366 ಮಂದಿ ಹಾಗೂ 3970 ಬಾಲಕಿಯರ ಪೈಕಿ 3355 ಮಂದಿ ಉತ್ತೀರ್ಣರಾಗಿದ್ದಾರೆ.

ಪಟ್ಟಣ ಪ್ರದೇಶದ ವಿದ್ಯಾರ್ಥಿಗಳ ಮುನ್ನಡೆ: ಪಟ್ಟಣ ಪ್ರದೇಶದ 4650 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇವರಲ್ಲಿ 3977 ಮಂದಿ ತೇರ್ಗಡೆಯಾಗಿದ್ದಾರೆ (ಶೇ.85.53). ಗ್ರಾಮೀಣ ಪ್ರದೇಶದ 1692 ವಿದ್ಯಾರ್ಥಿಗಳ ಪೈಕಿ 1413 ಮಂದಿ (ಶೇ.83.51) ಉತ್ತೀರ್ಣರಾಗಿದ್ದಾರೆ.

ಜಿಲ್ಲೆಯಲ್ಲಿ ಈ ಬಾರಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು (ಶೇ.89.02) ಹೆಚ್ಚಿನ ಫಲಿತಾಂಶ ಪಡೆದಿದ್ದಾರೆ. ವಾಣಿಜ್ಯ ವಿಭಾಗ ಎರಡನೇ ಸ್ಥಾನ (ಶೇ.87.18) ಹಾಗೂ ಕಲಾ ವಿಭಾಗ (ಶೇ.78.92) ಮೂರನೇ ಸ್ಥಾನ ಪಡೆದಿದೆ. ವಿಜ್ಞಾನ ವಿಭಾಗದಿಂದ 1963 ವಿದ್ಯಾರ್ಥಿಗಳ ಪೈಕಿ 1751 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಿಂದ 2216 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ 1932 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಕಲಾ ವಿಭಾಗದಿಂದ 2163 ವಿದ್ಯಾರ್ಥಿಗಳ ಪೈಕಿ 1707 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು: ಕಲಾವಿಭಾಗದಲ್ಲಿ ಬೇಗೂರಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮಹಾದೇವಿ 591 ಅಂಕ, ವಾಣಿಜ್ಯ ವಿಭಾಗದಲ್ಲಿ ಚಾಮರಾಜನಗರದ ಎನ್ ಬ್ರೈಟ್ ಕಾಲೇಜಿನ ರೋಹಿತ್‌ಪ್ರಸಾದ್, ದಿಕ್ಷಿತ್ ದರ್ಶಿನಿ, ದೀಪಿಕಾ 589 ಅಂಕ ಪಡೆದು ಮೊದಲ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಚಾಮರಾಜನಗರದ ಜೆಎಸ್‌ಎಸ್ ಕಾಲೇಜಿನ ಎಸ್.ನಿಶ್ಚಿತಾ 588 ಅಂಕ ಪಡೆದು ಮೊದಲ ಸ್ಥಾನ ಪಡೆದಿದ್ದಾರೆ. ಕೊಳ್ಳೇಗಾಲದ ವಿಶ್ವಚೇತನ ಪಿಯು ಕಾಲೇಜು ಶೇ.100, ಚಾಮರಾಜನಗರ ಬ್ರೈಟ್ ಪಿಯು ಕಾಲೇಜು, ಕಾಮಗೆರೆಯ ಸೆಂಟ್ ಮಾರ್ಗರೇಟ್ ಪಿಯು ಕಾಲೇಜು ಶೇ.100ರಷ್ಟು, ಬಂಡಳ್ಳಿ ಪಿಯು ಕಾಲೇಜಿಗೆ ಶೇ.96.55ರಷ್ಟು ಫಲಿತಾಂಶ ಪಡೆದಿದೆ.

ಜಿಲ್ಲೆಯಲ್ಲಿ ಕಳೆದ ವರ್ಷ ವಾಣಿಜ್ಯ ವಿಭಾಗದಲ್ಲಿ ಶೇ.88.56ರಷ್ಟು, ಕಲಾ ವಿಭಾಗದಲ್ಲಿ ಶೇ.72.42 ಹಾಗೂ ವಿಜ್ಞಾನ ವಿಭಾಗದಲ್ಲಿ 85.92ರಷ್ಟು ಫಲಿತಾಂಶ ಬಂದಿತ್ತು. ಈ ಬಾರಿ ವಿಜ್ಞಾನ ವಿಭಾಗದಲ್ಲಿ ಉತ್ತಮ ಫಲಿತಾಂಶ ದಾಖಲಿಸಿದೆ. ಕಳೆದ ಬಾರಿ ಜಿಲ್ಲೆ ಶೇ.81.92 ಫಲಿತಾಂಶದಿಂದ ರಾಜ್ಯದಲ್ಲೇ 12 ಸ್ಥಾನ ಪಡೆದಿತ್ತು. ಈ ಬಾರಿ ಶೇ.84.99ರಷ್ಟು ಫಲಿತಾಂಶದೊಂದಿಗೆ 14ನೇ ಸ್ಥಾನ ಪಡೆದು ಎರಡು ಸ್ಥಾನ ಇಳಿಕೆಯಾಗಿದೆ.

ಮ.ಬೆಟ್ಟದಲ್ಲಿ ವಿಜೃಂಭಣೆಯ ಯುಗಾದಿ ಜಾತ್ರೆ



ಮಲೆಮಹದೇಶ್ವರಬೆಟ್ಟದಲ್ಲಿ ಯುಗಾದಿ ಜಾತ್ರೆಯ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಹನೂರು, ಏ.10–ಪ್ರಸಿದ್ಧ ಯಾತ್ರಾಸ್ಥಳ ಮಲೆಮಹದೇಶ್ವರಬೆಟ್ಟದಲ್ಲಿ ಯುಗಾದಿ ಜಾತ್ರೆಯ ಅಂಗವಾಗಿ ಬ್ರಹ್ಮರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಜಿಲ್ಲೆ, ಹೊರ ಜಿಲ್ಲೆ ಸೇರಿದಂತೆ ನೆರೆಯ ತಮಿಳುನಾಡಿನಿಂದ ಬಂದಿದ್ದ ಸಾವಿರಾರು ಭಕ್ತರು ಮಾದಪ್ಪನ ರಥೋತ್ಸವವನ್ನು ಕಣ್ತುಂಬಿಕೊಂಡರು. ರಥೋತ್ಸವದ ಅಂಗವಾಗಿ ಮಂಗಳವಾರ ಮುಂಜಾನೆಯಿಂದಲೇ ದೇವಾಲಯದಲ್ಲಿ ವಿವಿಧ ಧಾರ್ಮಿಕ ಪೂಜಾ ಕಾರ್ಯ ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ನೇತೃತ್ವದಲ್ಲಿ ನಡೆಯಿತು.

ಮೆರವಣಿಗೆ ಬಳಿಕ, ಅಲಂಕೃತ ತೇರಿನಲ್ಲಿ ಮಾದಪ್ಪನ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು. ಬೇಡಗಂಪಣ ಸಮುದಾಯದ 108 ಹೆಣ್ಣು ಮಕ್ಕಳು ಬೆಲ್ಲದ ಆರತಿ ಬೆಳಗಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬೆಳಗ್ಗೆ 7.30ರಿಂದ 9.30ರ ನಡುವಿನ ಶುಭ ಲಗ್ನದಲ್ಲಿ ರಥೋತ್ಸವ ನಡೆಯಿತು.

ಸಾವಿರಾರು ಭಕ್ತರು, ಮಹದೇಶ್ವರಬೆಟ್ಟದ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಸಿಬ್ಬಂದಿ ದೇವಾಲಯದ ಸುತ್ತ ಒಂದು ತೇರನ್ನು ಎಳೆದರು. ದೇವಾಲಯದ ಆವರಣದಲ್ಲಿ ಕಿಕ್ಕಿರಿದು ಸೇರಿದ್ದ ಭಕ್ತರು ನಾಣ್ಯ, ಹಣ್ಣು–ದವಸವನ್ನು ತೇರಿಗೆ ಎಸೆದು ಹರಕೆ ತೀರಿಸಿದರು. ಉಘೇ ಮಾದಪ್ಪ... ಮಾಯ್ಕಾರ ಮಾದಪ್ಪನಿಗೆ ಉಘೇ ಉಘೇ... ಎಂಬ ಘೋಷಣೆಗಳು ಬೆಟ್ಟದಾದ್ಯಂತ ಮರ್ದನಿಸಿದವು. ರಥೋತ್ಸವ ಬಳಿಕ ಭಕ್ತರು ರಥಕ್ಕೆ ನಮಸ್ಕರಿಸುವ ಮೂಲಕ ಮಾದಪ್ಪನನ್ನು ನೆನೆದರು.

ಇದೇ ವೇಳೆ ಪಲ್ಲಕ್ಕಿ ಉತ್ಸವ, ಹುಲಿ ವಾಹನ, ರುದ್ರಾಕ್ಷಿ ಮಂಟಪ, ಬಸವ ವಾಹನ ಸೇವೆ ನೆರವೇರಿಸಿದವು. ಭಕ್ತರು ಪಂಜಿನ ಸೇವೆ, ಉರುಳು ಸೇವೆ, ಆಲಾಂಬಾಡಿ ಬಸವೇಶ್ವರನ ಬೆಣ್ಣೆ ಸೇವೆಯನ್ನು ನೆರವೇರಿಸಿದರು.

ರಥೋತ್ಸವದೊಂದಿಗೆ 4 ದಿನಗಳ ಮಹದೇಶ್ವರಸ್ವಾಮಿಯ ಯುಗಾದಿ ಜಾತ್ರೋತ್ಸವಕ್ಕೆ ತೆರೆ ಬಿದ್ದಿದೆ.

ಹೂ, ವಿದ್ಯುತ್ ದೀಪಾಲಂಕಾರ: ಯುಗಾದಿ ಜಾತ್ರೆ ಅಂಗವಾಗಿ ದೇವಾಲಯವನ್ನು ವಿವಿಧ ಹೂ, ಹಣ್ಣು ತರಕಾರಿ ಹಾಗೂ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ರಥೋತ್ಸವದ ಹಿನ್ನೆಲೆಯಲ್ಲಿ ದೇಗುಲದ ಆವರಣದಲ್ಲಿ ಲಕ್ಷಾಂತರ ಭಕ್ತರು ಕಿಕ್ಕಿರಿದು ತುಂಬಿದ್ದರು. ಪೊಲೀಸ್ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥೋತ್ಸವದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ರಘು, ನೌಕರರು, ದೇಗುಲದ ಅರ್ಚಕರು ಹಾಗೂ ಸಿಬ್ಬಂದಿ ಇದ್ದರು.

ಮದ್ದೂರು ಚೆಕ್‌ಪೋಸ್ಟ್‌ನಲ್ಲಿ 60 ಸಾವಿರ ರೂ. ವಶ

ಚಾಮರಾಜನಗರ, ಏ.10–ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮದ್ದೂರು ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದ 60 ಸಾವಿರ ರೂ. ಅನ್ನು ಎಫ್‌ಎಸ್‌ಟಿ ತಂಡದ ಅಧಿಕಾರಿಗಳು ಬುಧವಾರ ವಶಕ್ಕೆ ಪಡೆದಿದ್ದಾರೆ.

ಮದ್ದೂರು ಚೆಕ್‌ಪೋಸ್ಟ್‌ನಲ್ಲಿ ಕ್ಯಾಂಟರ್‌ನಲ್ಲಿ ಯಾವುದೇ ದಾಖಲೆಗಳಿಲ್ಲದೇ ಸಾಗಿಸುತ್ತಿದ್ದ ಸಲೀಂ ಪಾಷ ಅವರಿಂದ 60 ಸಾವಿರ ರೂ. ಅನ್ನು ಎಫ್‌ಎಸ್‌ಟಿ ತಂಡದ ಅಧಿಕಾರಿ ಡಿ.ಎಂಗುರುಮಲ್ಲೇಶ್ ಜಪ್ತಿ ಮಾಡಿದ್ದಾರೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸಿಯೂಟ ಮುಂದುವರಿಕೆ

ಚಾಮರಾಜನಗರ, ಏ.10–ಸರ್ಕಾರ ಜಿಲ್ಲೆಯ 5 ತಾಲೂಕುಗಳನ್ನು ಬರಗಾಲ ಪೀಡಿತ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಏ.11 ರಿಂದ ಮೇ 28ರವರೆಗೆ (ಭಾನುವಾರ ಮತ್ತು ಸರ್ಕಾರಿ ರಜಾ ದಿನ ಹೊರತುಪಡಿಸಿ) ಬಿಸಿಯೂಟ ಮುಂದುವರೆಸಲಾಗುವುದು.

1 ರಿಂದ 10ನೇ ತರಗತಿ ಮಕ್ಕಳಿಗೆ ಬೇಸಿಗೆ ರಜಾ ಅವಧಿಯಲ್ಲೂ ಬಿಸಿಯೂಟ ಕಾರ್ಯಕ್ರಮವನ್ನು ಮುಂದುವರೆಸಲಾಗುವುದು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟ್ಪಾ ದಾಳಿ: 2310 ರೂ. ದಂಡ



ಕೋಟ್ಪಾ ಅಧಿಕಾರಿಗಳು ತಂಬಾಕು ಉತ್ಪನ್ನಗಳ ಮಾರಾಟ ಅಂಗಡಿಗಳ ಮೇಲೆ ದಾಳಿ ನಡೆಸಿದರು.

ಯಳಂದೂರು: ಪಟ್ಟಣದ ಬಳೇಪೇಟೆ ಬೀದಿ ಹಾಗೂ ಬಿಳಿಗಿರಿರಂಗನಬೆಟ್ಟದ ರಸ್ತೆ ವ್ಯಾಪ್ತಿಯಲ್ಲಿ ಕೋಟ್ಪಾ ತನಿಖಾ ತಂಡದ ಅಧಿಕಾರಿಗಳು ಬುಧವಾರ ತಂಬಾಕು ಉತ್ಪನ್ನಗಳ ಮಾರಾಟ ಮಾಡುತ್ತಿದ್ದ ಅಂಗಡಿಗಳ ಮೇಲೆ ದಾಳಿ ನಡೆಸಿ, 2310 ರೂ. ದಂಡ ವಿಧಿಸಿದ್ದಾರೆ.

ದಾಳಿ ವೇಳೆ ನಿಯಮ ಉಲ್ಲಂಘನೆ ಮಾಡಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಎಚ್ಚರಿಕೆ ನಾಮಫಲಕಗಳನ್ನು ಪ್ರದರ್ಶಿಸದ ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್‌ಗಳು, ಚಿಲ್ಲರೆ ಅಂಗಡಿಗಳ ಮೇಲೆ ದಾಳಿ ನಡೆಸಲಾಯಿತು. ಒಟ್ಟು 18 ಪ್ರಕರಣ ದಾಖಲಿಸಿ, 2310 ರೂ. ದಂಡ ವಿಧಿಸಲಾಯಿತು.

ಈ ವೇಳೆ ಕರಪತ್ರ ವಿತರಿಸಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಎಂ.ಎಸ್. ರಾಜೇಶ್‌ಕುಮಾರ್, ಜಿಲ್ಲಾ ಸಲಹೆಗಾರರಾದ ಪ್ರಶಾಂತ್, ಸಮಾಜ ಕಾರ್ಯಕರ್ತರಾದ ವೀರಣ್ಣ, ತಾಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸೋಮಣ್ಣ, ಯಳಂದೂರು ಪಟ್ಟಣ ಪಂಚಾಯಿತಿ ಜಯಲಕ್ಷ್ಮೀ, ಮಲ್ಲಿಕಾರ್ಜುನಸ್ವಾಮಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯ ಸರಸ್ವತಿ ಹಾಗೂ ಪೊಲೀಸರು ಇದ್ದರು.

ಕೆರೆಯಲ್ಲಿ ಮುಳುಗಿ ಯುವಕ ಸಾವು



ಗುಂಡ್ಲುಪೇಟೆ, ಏ.10– ಓಕುಳಿ ಆಟದ ನಂತರ ಸ್ನಾನಕ್ಕೆ ತೆರಳಿದ ಯುವಕ ಕೆರೆಯಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ತೆರಕಣಾಂಬಿ ಗ್ರಾಮದಲ್ಲಿ ಬುಧವಾರ ನಡೆದಿದೆ.

ಗ್ರಾಮದ ಮಹದೇವಶೆಟ್ಟಿ ಎಂಬುವರ ಮಗ ವಿನೋದ್(20) ಮೃತ ಯುವಕ.

ಯುಗಾದಿ ಹಬ್ಬದ ಮರುದಿನ ಬುಧವಾರ ಗ್ರಾಮದ ಯುವಕರು ಒಂದೆಡೆ ಸೇರಿ ಪರಸ್ಪರ ಬಣ್ಣ ಬಳಿಯುವ ಮೂಲಕ ಓಕುಳಿ ಆಡುತ್ತಿದ್ದರು. ನಂತರ ವಿನೋದ್ ತನ್ನ ಸ್ನೇಹಿತ ಸಾಗರ್‌ನೊಂದಿಗೆ ಬಟ್ಟೆ ತೆಳೆದುಕೊಳ್ಳಲು ಹಾಗೂ ಸ್ನಾನಕ್ಕೆ ಲಕ್ಕೂರು ಸಮೀಪದ ಕೆರೆಗೆ ಹೋಗಿದ್ದಾನೆ. ಈ ವೇಳೆ ಆಳವಾದ ಗುಂಡಿಗೆ ಬಿದ್ದು ವಿನೋದ್ ಮೃತಪಟ್ಟಿದ್ದಾನೆ. ಈ ಸಂಬಂಧ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಮ್ಮತ್ತೂರು ದೇವಮ್ಮ ನಿಧನ



ಚಾಮರಾಜನಗರ, ಏ.10–ತಾಲೂಕಿನ ಉಮ್ಮತ್ತೂರು ಗ್ರಾಮದ ನಿವಾಸಿ ಗುತ್ತಿಗೆದಾರ ಶಿವಣ್ಣ ಅವರ ತಾಯಿ ದೇವಮ್ಮ(82) ಮಂಗಳವಾರ ನಿಧನರಾದರು.

ಮೃತರು ಗುತ್ತಿಗೆದಾರ ಶಿವಣ್ಣ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮದ ಮೃತರ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮರಿಶೆಟ್ಟಿ



ಯಳಂದೂರು, ಏ.10–ತಾಲೂಕಿನ ವೈ.ಕೆ.ಮೋಳೆ ಗ್ರಾಮದ ಉಪ್ಪಾರ ಬಡಾವಣೆಯ ನಿವಾಸಿ ಮರಿಶೆಟ್ಟಿ (75) ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಒಬ್ಬ ಪುತ್ರಿ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವಗ್ರಾಮದ ಮೃತರ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ಜರುಗಿತು.

‘ಅಪೋಲೊ ಆಸ್ಪತ್ರೆಯಿಂದ ಚಾಮುಂಡಿಬೆಟ್ಟದ 1001 ಮೆಟ್ಟಿಲು ಹತ್ತುವ ಸ್ಪರ್ಧೆ

ಹೃದಯದ ಆರೋಗ್ಯಕ್ಕೆ ವಾಕಿಂಗ್ ಸೇರಿದಂತೆ ದೈಹಿಕ ಚಟುವಟಿಕೆಗಳು ಸಹಕಾರಿ; ಹಿರಿಯ ಪ್ಲಾಸ್ಟಿಕ್ ಸರ್ಜನ್ ಡಾ.ಹೆಚ್.ವಿ.ಸತೀಶ್



ಚಾಮುಂಡಿಬೆಟ್ಟ ಪಾದದ ಮೆಟ್ಟಿಲು ಮಾರ್ಗದಲ್ಲಿ ನೆರೆದಿರುವ ಸ್ಪರ್ಧಿಗಳನ್ನು ಕಾಣಬಹುದು.

ಮೈಸೂರು,ಏ.10(ಪಿಎಂ)– ಅಪೊಲೊ ಬಿಜಿಎಸ್ ಆಸ್ಪತ್ರೆ ವತಿಯಿಂದ ವಿಶ್ವ ಆರೋಗ್ಯ ದಿನಾಚರಣೆ ಪ್ರಯುಕ್ತ ಇತ್ತೀಚೆಗೆ ‘ಅಪೊಲೊ ಕ್ಲೈಂಬಥಾನ್ 2.0’ ಶೀರ್ಷಿಕೆಯಡಿ ಚಾಮುಂಡಿಬೆಟ್ಟದ 1001 ಮೆಟ್ಟಿಲು ಹತ್ತುವ ಸ್ಪರ್ಧೆ ನಡೆಯಿತು.

ಸ್ಪರ್ಧೆಯಲ್ಲಿ ಯುವ ಜನರು, ಪುರುಷರು, ಮಹಿಳೆಯರು ಮತ್ತು ಹಿರಿಯ ನಾಗರಿಕರು ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು. ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಕ್ಷೇತ್ರದ ವೃತ್ತಿಪರರ ಮೆಟ್ಟಿಲು ಹತ್ತುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಬಳಿಕ ಬೆಟ್ಟದ ಚಾಮುಂಡೇಶ್ವರಿ ತಾಯಿ ದೇವಸ್ಥಾನದ ಸಮೀಪ ಸಮಾರೋಪ ಹಾಗೂ ಬಹುಮಾನ ವಿತರಣಾ ಸಮಾರಂಭ ನಡೆಯಿತು. ಇದೇ ವೇಳೆ ಮಾತನಾಡಿದ ಅಪೊಲೊ ಬಿಜಿಎಸ್ ಆಸ್ಪತ್ರೆ ಹಿರಿಯ ಪ್ಲಾಸ್ಟಿಕ್ ಸರ್ಜನ್ ಡಾ.ಹೆಚ್.ವಿ.ಸತೀಶ್, ಹೃದಯವು ಸರಿಸುಮಾರು ನಮ್ಮ ಮುಷ್ಟಿಯ ಗಾತ್ರವಿರುತ್ತದೆ. ವಯಸ್ಸಾದಂತೆ ವಾಕಿಂಗ್, ಓಟ ಮತ್ತು ಕ್ಲೈಂಬಿಂಗ್‌ನಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹೃದಯದ ಆರೋಗ್ಯದ ದೃಷ್ಟಿಯಿಂದ ಅಗತ್ಯ. ಆದರೆ ಇಂತಹ ಚಟುವಟಿಕೆಗಳಿಂದ ಹೃದಯದ ಮೇಲೆ ಒತ್ತಡ ಬೀಳುತ್ತದೆ ಎಂಬ ತಪ್ಪು ಕಲ್ಪನೆ ಇದೆ. ಆದರೆ ಈ ರೀತಿಯ ಚಟುವಟಿಕೆಗಳು ನಮ್ಮ ಹೃದಯದ ಆರೋಗ್ಯವನ್ನು ಕಾಪಾಡಲು ಸಹಕಾರಿ ಎಂದು ತಿಳಿಸಿದರು. ಅಪೊಲೊ ಬಿಜಿಎಸ್ ಆಸ್ಪತ್ರೆ ಮೈಸೂರು ಉಪಾಧ್ಯಕ್ಷ ಮತ್ತು ಆಸ್ಪತ್ರೆಯ ಮುಖ್ಯಸ್ಥ ಎನ್.ಜಿ.ಭಾರತೀಶ ರೆಡ್ಡಿ ಮಾತನಾಡಿ, ಈ ಕಾರ್ಯಕ್ರಮವು ಮೈಸೂರಿನ ಜನತೆಯಲ್ಲಿ ಆರೋಗ್ಯದ ದೃಷ್ಟಿಯಿಂದ ವ್ಯಾಯಾಮದ ಅಗತ್ಯತೆ ಬಗ್ಗೆ ಜಾಗೃತಿ ಮೂಡಿಸಲು ಸಹಕಾರಿಯಾಗಿದೆ. ಆ ಮೂಲಕ ಈ ಬಾರಿಯ ವಿಶ್ವ ಆರೋಗ್ಯ ದಿನದಂದು ಮೈಸೂರಿನ ಜನರನ್ನು ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಇದೇ ವೇಳೆ ಸ್ಪರ್ಧೆಯ ಎಲ್ಲಾ ವಿಭಾಗದ ವಿಜೇತರಿಗೆ ಪದಕ, ಟ್ರೋಫಿ ಮತ್ತು ಪ್ರಮಾಣಪತ್ರಗಳನ್ನು ನೀಡಲಾಯಿತು. ಜೆಕೆ ಟೈರ್ಸ್ ಉಪಾಧ್ಯಕ್ಷ ಹಾಗೂ ಸಿಐಐ ಅಧ್ಯಕ್ಷ ಈಶ್ವರ್‌ರಾವ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಕನ್ಸಲ್ಟೆಂಟ್ ಆರ್ಥೋಪೆಡಿಕ್ ಮತ್ತು ಆರ್ತ್ರೋಸ್ಕೋಪಿಕ್ ಸರ್ಜನ್ ಡಾ.ವೈ.ಬಿ.ಜಯವರ್ಧನ್, ವೈದ್ಯರಾದ ಡಾ.ಶ್ರೇಯಸ್ ಆಳ್ವ, ಡಾ.ಶಿವಕುಮಾರ್, ಡಾ.ವೆಂಕಟೇಶ್ ಮೂರ್ತಿ ಮತ್ತಿತರರು ಹಾಜರಿದ್ದರು.

ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ 17 ಸ್ಥಾನಕ್ಕೆ ಕುಸಿತ

● ಪರೀಕ್ಷೆ ಬರೆದ 30,756 ವಿದ್ಯಾರ್ಥಿಗಳಲ್ಲಿ 25,566 ಮಂದಿ ತೇರ್ಗಡೆ ● ಫಲಿತಾಂಶ ಪ್ರಮಾಣ ಸುಧಾರಿಸಿದರೂ ಟಾಪ್‌ಟೆನ್ ಒಳಗೆ ದೊರಕದ ಸ್ಥಾನ

ಮೈಸೂರು, ಏ.10(ಎಂಟಿವೈ)– ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆ ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚಾಗಿದ್ದರೂ ಒಟ್ಟಾರೆ ಫಲಿತಾಂಶ 17ನೇ ಸ್ಥಾನಕ್ಕೆ ಕುಸಿದಿದ್ದು ತೀವ್ರ ನಿರಾಸೆಯುಂಟು ಮಾಡಿದೆ.

ರಾಜ್ಯದಲ್ಲಿ ಮೊದಲ ಹತ್ತು ಸ್ಥಾನಗಳಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ 13ನೇ ಸ್ಥಾನದಿಂದ 17ನೇ ಸ್ಥಾನಕ್ಕೆ ಕುಸಿದಿದೆ. ಜಿಲ್ಲೆಯಲ್ಲಿ ಈ ಬಾರಿ 30,756 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ ಶೇ.83.13ರಷ್ಟು 25,566 ಮಂದಿ ಉತ್ತೀರ್ಣರಾಗಿದ್ದಾರೆ. ಕಳೆದ ವರ್ಷ ಶೇ.79.89ರೊಂದಿಗೆ 13ನೇ ಸ್ಥಾನ ಪಡೆದಿತ್ತು. ಆದರೆ, ಈ ಬಾರಿ ಉತ್ತೀರ್ಣರಾದವರ ಸಂಖ್ಯೆ ಹೆಚ್ಚಿದ್ದರೂ, ಫಲಿತಾಂಶದ ಸ್ಥಾನ ಕುಸಿತ ಕಂಡಿದೆ.

> ಜಿಲ್ಲೆಯಲ್ಲಿ ಪಿಯುಸಿ ಫಲಿತಾಂಶ ಸುಧಾರಣೆಗೆ ಹಲವು ಕಾರ್ಯಕ್ರಮ ರೂಪಿಸಲಾಗಿತ್ತು. ಇದರಿಂದ ವಿದ್ಯಾರ್ಥಿಗಳು ಕಳೆದ ಬಾರಿಗಿಂತ ಈ ಬಾರಿ ಉತ್ತಮ ಸಾಧನೆ ಮಾಡಿದ್ದಾರೆ. ಕಳೆದ ವರ್ಷ ಜಿಲ್ಲೆಯ ಫಲಿತಾಂಶ ಶೇ.79.89ರಷ್ಟು ಬಂದಿತ್ತು. ಈ ಬಾರಿ ಶೇ.83.13ಕ್ಕೆ ಏರಿಕೆಯಾಗಿದೆ. ರ‍್ಯಾಂಕಿಂಗ್‌ನಲ್ಲಿ ಮಾತ್ರ 17ನೇ ಸ್ಥಾನ ಪಡೆದಿದೆ. ಮುಂದಿನ ಬಾರಿ ರಾಜ್ಯದಲ್ಲಿಯೇ 10ನೇ ಸ್ಥಾನದೊಳಗೆ ಜಿಲ್ಲೆಯ ಫಲಿತಾಂಶ ಬರುವಂತೆ ಕ್ರಮ ಕೈಗೊಳ್ಳಲಾಗುತ್ತದೆ.
> –ಮರಿಸ್ವಾಮಿ, ಡಿಡಿಪಿಯು

2023–24ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಈ ಬಾರಿ 30,756 ಫ್ರೆಷರ್ಸ್, 1268 ಖಾಸಗಿ ವಿದ್ಯಾರ್ಥಿಗಳು, 1852 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ 33,876 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 25,566 ಫ್ರೆಷರ್ಸ್, 557 ಖಾಸಗಿ ವಿದ್ಯಾರ್ಥಿಗಳು, 718 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ 26,841 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಈ ಸಾಲಿನಲ್ಲಿ 15,568 ಬಾಲಕರು ಪರೀಕ್ಷೆ ಬರೆದಿದ್ದರೂ ಶೇ.71.87ರಷ್ಟು 11,188 ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. 18,308 ಬಾಲಕಿಯರಲ್ಲಿ 15,653 ಮಂದಿ ತೇರ್ಗಡೆಯಾಗಿದ್ದು, ಶೇ.85.2ರಷ್ಟು ಫಲಿತಾಂಶ ನೀಡಿ ಬಾಲಕಿಯರೇ ಮೇಲುಗೈ ಕಾಯ್ದುಕೊಂಡಿದ್ದಾರೆ. ಮೈಸೂರು ನಗರ ಪ್ರದೇಶ ವ್ಯಾಪ್ತಿಯ 29,355 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರೆ, ಅವರಲ್ಲಿ 23,585 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಗ್ರಾಮೀಣ ಪ್ರದೇಶದ ಪರೀಕ್ಷೆ ಬರೆದ 4521 ವಿದ್ಯಾರ್ಥಿಗಳಲ್ಲಿ 3256 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಕಲಾ ವಿಭಾಗ: ಪಿಯುಸಿ ಕಲಾ ವಿಭಾಗದಲ್ಲಿ 8,033 ಮಂದಿ ಪರೀಕ್ಷೆ ಬರೆದಿದ್ದರು. ಅವರಲ್ಲಿ 5,170 ಮಂದಿ ತೇರ್ಗಡೆಯಾಗಿದ್ದಾರೆ. ಕಲಾವಿಭಾಗದ ಶೇ.64.36ರಷ್ಟು ದಾಖಲಾಗಿದೆ.

ವಾಣಿಜ್ಯ ವಿಭಾಗ: ಕಾಮರ್ಸ್ ವಿಭಾಗದಲ್ಲಿ 11,560 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಅವರಲ್ಲಿ 9,208 ತೇರ್ಗಡೆಯಾಗಿದ್ದು, ಶೇ.79.65ರಷ್ಟು ಫಲಿತಾಂಶ ದಾಖಲಾಗಿದೆ.

ವಿಜ್ಞಾನ ವಿಭಾಗ: ಪರೀಕ್ಷೆ ಬರೆದ 14,283 ವಿದ್ಯಾರ್ಥಿಗಳಲ್ಲಿ 12,463 ವಿದ್ಯಾರ್ಥಿಗಳು ಪಾಸಾಗಿದ್ದು, ಫಲಿತಾಂಶ ಶೇ.87.26ರಷ್ಟು ದಾಖಲಾಗಿದೆ. ಕನ್ನಡ ಮಾಧ್ಯಮದಲ್ಲಿ 12,238 ವಿದ್ಯಾರ್ಥಿಗಳು ಪರೀಕ್ಷೆ ಬರೆದು, 8,406 ತೇರ್ಗಡೆಯಾಗಿದ್ದಾರೆ. ಆಂಗ್ಲ ಮಾಧ್ಯಮದ 21,638 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 18,435 ವಿದ್ಯಾರ್ಥಿಗಳು ಪಾಸಾಗಿದ್ದಾರೆ.

ಇಂದು ಪವಿತ್ರ ರಂಜಾನ್

ಮೈಸೂರು, ಏ. 10– ಮುಸ್ಲಿಂ ಬಾಂಧವರ ಪವಿತ್ರ ರಂಜಾನ್ ಹಬ್ಬವನ್ನು ನಾಳೆ (ಏ. 11) ಆಚರಿಸಲಾಗುತ್ತಿದೆ. ಇಂದು ಹಲವೆಡೆ ಚಂದ್ರ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನಾಳೆ ರಂಜಾನ್ ಆಚರಿಸಲು ಮುಸ್ಲಿಂ ಧರ್ಮಗುರುಗಳು ಸಂದೇಶ ನೀಡಿದ್ದಾರೆ. ನಾಳೆ ಬೆಳಗ್ಗೆ 9 ಗಂಟೆಗೆ ಮೈಸೂರಿನ ತಿಲಕ್‌ನಗರದಲ್ಲಿರುವ ಈದ್ಗಾ ಮೈದಾನದಲ್ಲಿ ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ನೇತೃತ್ವದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮಾಡಲಿದ್ದಾರೆ. ಜೊತೆಗೆ ನಗರದ ಎಲ್ಲಾ ಮಸೀದಿಗಳಲ್ಲೂ ವಿಶೇಷ ಪ್ರಾರ್ಥನೆ ನಡೆಯಲಿದೆ.

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

5, 8, 9 ಮತ್ತು 11ನೇ ತರಗತಿ ಬೋರ್ಡ್ ಪರೀಕ್ಷೆಗೆ 'ಸುಪ್ರೀಂ' ತಡೆಯಾಜ್ಞೆ: ಕಾನೂನು ಅಭಿಪ್ರಾಯ ಪಡೆಯಲು ಶಾಲಾ ಶಿಕ್ಷಣ ಇಲಾಖೆ ನಿರ್ಧಾರ

ಬೆಂಗಳೂರು, ಏ. 10– 5, 8 ಮತ್ತು 9ನೇ ತರಗತಿಗಳಿಗೆ ನಡೆಸಲಾದ ಬೋರ್ಡ್ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸದಂತೆ ಸುಪ್ರೀಂಕೋರ್ಟ್‌ನ ಮಧ್ಯಂತರ ತಡೆಗೆ ಸಂಬಂಧಿಸಿದಂತೆ ಮುಂದಿನ ಕ್ರಮವನ್ನು ನಿರ್ಧರಿಸಲು ಕಾನೂನು ಅಭಿಪ್ರಾಯವನ್ನು ತೆಗೆದುಕೊಳ್ಳಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದೆ. ಸುಪ್ರೀಂ ಕೋರ್ಟ್ ತೀರ್ಪು ಬರುವ ಹೊತ್ತಿಗೆ ಶಾಲೆಗಳು ಪರೀಕ್ಷೆ ಫಲಿತಾಂಶ ಪ್ರಕಟಿಸಿಯಾಗಿತ್ತು. ಶಿಕ್ಷಣ ಇಲಾಖೆಯ ನಿರ್ದೇಶನ ಪ್ರಕಾರ, ಬೆಳಗ್ಗೆ 9 ಗಂಟೆಗೆ ಶಾಲೆಗಳು ಫಲಿತಾಂಶ ಪ್ರಕಟಿಸಿದ್ದು, ಸುಪ್ರೀಂ ಕೋರ್ಟ್ ತೀರ್ಪು ಬಂದಿದ್ದು ಬೆಳಗ್ಗೆ 11 ಗಂಟೆಯ ವೇಳೆಗೆ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಮುಂದಿನ ಕ್ರಮ ಕೈಗೊಳ್ಳಲು ನಾವು ಅಡ್ವೊಕೇಟ್ ಜನರಲ್ ಅವರ ಅಭಿಪ್ರಾಯ ಪಡೆಯುತ್ತೇವೆ ಎಂದರು.

ಒಂದನೇ ಪುಟದಿಂದ

ಶೇ.81.15 ತೇರ್ಗಡೆ

ಪಡೆದುಕೊಂಡಿವೆ. ಇನ್ನು ಕೊಡಗು ಶೇಕಡ 92.13, ಹಾಸನ 85.83, ಚಾಮರಾಜನಗರ 84.99, ಮೈಸೂರು ಶೇಕಡ 83.13, ದಾವಣಗೆರೆ ಶೇಕಡ 80.96, ಮಂಡ್ಯ ಶೇಕಡ 80.56ರಷ್ಟು ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ.

ಮೂರೂ ವಿಭಾಗಗಳಲ್ಲಿ ಪ್ರಥಮ ಸ್ಥಾನಗಳನ್ನು ನಗರ ಪ್ರದೇಶದ ಜೊತೆಗೆ ಗ್ರಾಮೀಣ ವಿದ್ಯಾರ್ಥಿಗಳು ಹಂಚಿಕೆ ಮಾಡಿಕೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಹುಬ್ಬಳ್ಳಿಯ ವಿದ್ಯಾನಿಕೇತನದ ವಿದ್ಯಾಲಕ್ಷ್ಮಿ ಗರಿಷ್ಠ 600 ಅಂಕಗಳಿಗೆ 598 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದಾರೆ.

ನಂತರದಲ್ಲಿ ಉಡುಪಿಯ ವಿದ್ಯೋದಯ ಪಿಯು ಕಾಲೇಜಿನ ವೈಷ್ಣವಿ ಹಾಗೂ ಮೈಸೂರು ಆದಿಚುಂಚನಗಿರಿ ಪಿಯು ಕಾಲೇಜಿನ ಕೆ.ಎಚ್.ಉರ್ವಿಶ್ 597 ಅಂಕ ಪಡೆದು ಎರಡನೇ ಸಾಧನೆ ಹಂಚಿಕೊಂಡಿದ್ದಾರೆ. ಇನ್ನು ವಾಣಿಜ್ಯ ವಿಭಾಗದಲ್ಲಿ ತುಮಕೂರು ವಿದ್ಯಾನಿಧಿ ಕಾಲೇಜಿನ ಜ್ಞಾನವಿ 597 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದರೆ, ಶಿವಮೊಗ್ಗದ ಕುಮದ್ವತಿ ಪಿಯು ಕಾಲೇಜಿನ ಪವನ್ ಹಾಗೂ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಹರ್ಷಿತ್ 594 ಅಂಕ ಪಡೆದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಕಲಾ ವಿಭಾಗದಲ್ಲಿ ಬೆಂಗಳೂರಿನ ಎನ್‌ಎಂಕೆಆರ್‌ವಿ ಪಿಯು ಕಾಲೇಜಿನ ಮೇಧಾ ಡಿ. 596 ಅಂಕ ಪಡೆದು ಪ್ರಥಮ ಸ್ಥಾನದಲ್ಲಿದ್ದಾರೆ. ಮೂರೂ ವಿಭಾಗಗಳಲ್ಲಿ ಬಾಲಕಿಯರೇ ಪ್ರಥಮ ಸ್ಥಾನಗಳನ್ನು ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಮೂವರು ಪ್ರಥಮ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಬೆಂಗಳೂರು ಜಯನಗರದ ಎನ್‌ಎಂಕೆಆರ್‌ವಿಯ ಮೇಧಾ, ವಿಜಯಪುರದ ಎಸ್‌ಎಸ್ ಪಿಯು ಕಾಲೇಜಿನ ವೇದಾಂತ್ ಹಾಗೂ ಬಳ್ಳಾರಿಯ ಇಂದೂ ಪಿಯು ಕಾಲೇಜಿನ ಕವಿತಾ ಬಿ.ವಿ ತಲಾ 596 ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ಧಾರವಾಡ ಕೆಇಬಿ ಪಿಯು ಕಾಲೇಜಿನ ರವೀನಾ ಸೋಮಪ್ಪ ಲಮಾಣಿ 595 ಅಂಕ ಪಡೆದು ದ್ವಿತೀಯ ಸ್ಥಾನ ಗಳಿಸಿದ್ದಾರೆ.

ಗಣಿತದಲ್ಲಿ 6,960 ಮಂದಿ, ಜೀವಶಾಸ್ತ್ರದಲ್ಲಿ 5,925 ಮಂದಿ, ಕನ್ನಡದಲ್ಲಿ 2,570 ಮಂದಿ, ಸಂಸ್ಕೃತದಲ್ಲಿ 1,499 ಮಂದಿ, ಅರ್ಥಶಾಸ್ತ್ರದಲ್ಲಿ 1,403 ಮಂದಿ, ಗಣಕ ವಿಜ್ಞಾನದಲ್ಲಿ 2,661 ಮಂದಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿದ್ದಾರೆ.

ಪುನರಾವರ್ತಿತ ವಿದ್ಯಾರ್ಥಿಗಳಲ್ಲಿ ಶೇಕಡ 41.98 ಮಂದಿ ಹಾಗೂ ಖಾಸಗಿಯಾಗಿ ಪರೀಕ್ಷೆ ಬರೆದವರಲ್ಲಿ ಶೇಕಡ 48.16 ಮಂದಿ ಉತ್ತೀರ್ಣರಾಗಿದ್ದಾರೆ.

ಅಧಿಕೃತ ವೆಬ್‌ಸೈಟ್ ಮೂಲಕ ವಿದ್ಯಾರ್ಥಿಗಳು ತಮ್ಮ ಫಲಿತಾಂಶ ನೋಡಿಕೊಳ್ಳಬಹುದಾಗಿದೆ, ಇದೇ ವೇಳೆ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆ ಪ್ರತಿ ಪಡೆಯಲು ಅರ್ಜಿ ಸಲ್ಲಿಕೆ, ಡೌನ್ಲೋಡ್ ಮಾಡಿಕೊಳ್ಳಲು, ಮರುಮೌಲ್ಯಮಾಪನ ಹಾಗೂ ಮರು ಅಂಕ ಎಣಿಕೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನೂ ಕಲ್ಪಿಸಲಾಗಿದೆ.

ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿಗಾಗಿ ಅರ್ಜಿ ಸಲ್ಲಿಸಲು ಏಪ್ರಿಲ್ 10ರಿಂದ ಏಪ್ರಿಲ್ 16ರವರೆಗೆ ಅವಕಾಶವಿದೆ, ಉತ್ತರ ಪತ್ರಿಕೆ ಸ್ಕ್ಯಾನ್ಡ್ ಪ್ರತಿ ಡೌನ್ಲೋಡ್ ಮಾಡಿಕೊಳ್ಳಲು ಏಪ್ರಿಲ್ 14ರಿಂದ ಏಪ್ರಿಲ್ 19ರವರೆಗೆ, ಮರು ಮೌಲ್ಯಮಾಪನಕ್ಕಾಗಿ ಹಾಗೂ ಮರು ಅಂಕ ಎಣಿಕೆಗಾಗಿ ಅರ್ಜಿ ಸಲ್ಲಿಸಲು ಏಪ್ರಿಲ್ 14ರಿಂದ ಏಪ್ರಿಲ್ 20ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಸ್ಕ್ಯಾನ್ಡ್ ಪ್ರತಿ ಪಡೆಯಲು ಪ್ರತಿ ವಿಷಯಕ್ಕೆ 530 ರೂ. ಶುಲ್ಕ ಪಾವತಿಸಬೇಕಿದ್ದು, ಮರುಮೌಲ್ಯಮಾಪನದ ಶುಲ್ಕ ಪ್ರತಿ ವಿಷಯಕ್ಕೆ 1,670 ರೂ. ಆಗಿರುತ್ತದೆ. ವಿದ್ಯಾರ್ಥಿಗಳು ತಮ್ಮ ನೋಂದಣಿ ಸಂಖ್ಯೆ ಮತ್ತು ವಿಷಯ ಸಂಯೋಜನೆ/ಸ್ಟ್ರೀಮ್ ಅನ್ನು ಬಳಸಿ ಫಲಿತಾಂಶ ಪರಿಶೀಲಿಸಬಹುದಾಗಿದೆ.

ಸಿಇಟಿಗೆ ಅರ್ಜಿ ಸಲ್ಲಿಸಲು ಮತ್ತೊಂದು ಅವಕಾಶ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು' ಇವರ ಹೆಸರಿಗೆ 600 ರೂ. ಮೊತ್ತದ ಡಿ.ಡಿ. ತೆಗೆಸಿ, ಸಿಇಟಿ ಅರ್ಜಿ ನಮೂನೆ ಸಹಿತ ಪ್ರಾಧಿಕಾರದ ಕಚೇರಿಗೆ ಅಭ್ಯರ್ಥಿಗಳು ಖುದ್ದಾಗಿ ಹಾಜರಾಗಿ ಸಲ್ಲಿಸಬೇಕು. ನೀಟ್ ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಸಿಇಟಿ ಪರೀಕ್ಷೆಯನ್ನೂ ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿದ್ದು, ಈ ಅಭ್ಯರ್ಥಿಗಳು ಸಹಾ ಈ ತಿಂಗಳ 12ರ ಸಂಜೆ 5 ಗಂಟೆಯೊಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಅರ್ಜಿ ಸಲ್ಲಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಿಳಿಸಿದೆ.

ದ್ವಿತೀಯ ಪಿಯು ಪರೀಕ್ಷೆ–2ರ ವೇಳಾಪಟ್ಟಿ ಪ್ರಕಟ

ಮೇ 14ರಂದು ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಮೇ 15ರಂದು ಹಿಂದಿ ವಿಷಯ ಹಾಗು ಮೇ 16ರಂದು ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್ ಭಾಷಾ ವಿಷಯಗಳ ಪರೀಕ್ಷೆಗಳು ನಡೆಯಲಿವೆ. ಎಲ್ಲ ವಿಷಯಗಳಿಗೆ ತಲಾ 80 ಅಂಕಗಳಿವೆ. ಪ್ರತಿದಿನ ಬೆಳಗ್ಗೆ 10.15ರಿಂದ 1.30ರವರೆಗೆ ಪರೀಕ್ಷೆ ನಡೆಯಲಿದೆ. ಪ್ರಶ್ನೆ ಪತ್ರಿಕೆ ಓದಲು 15 ನಿಮಿಷಗಳನ್ನು ಪ್ರಾರಂಭದಲ್ಲಿ ನೀಡಲಾಗುತ್ತದೆ. ಮೊದಲ ಬಾರಿಗೆ ಪರೀಕ್ಷೆ ಬರೆಯುವವರ ಜತೆಗೆ ಪುನರಾವರ್ತಿತ ಅಭ್ಯರ್ಥಿಗಳು ಹಾಗೂ ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು ಪರೀಕ್ಷೆ ಬರೆಯಬಹುದು ಎಂದು ಮಂಡಳಿ ತಿಳಿಸಿದೆ.

ಶ್ರೇಯಾ ಗಣೇಶ್ ಐದನೇ ಸ್ಥಾನ

ಕಾಲೇಜಿನ ಜಾಹ್ನವಿ ವಿಜ್ಞಾನ ವಿಭಾಗದಲ್ಲಿ ತಲಾ 597 ಅಂಕ ಪಡೆದು ರಾಜ್ಯದಲ್ಲೇ ದ್ವಿತೀಯ ಸ್ಥಾನ ಹಂಚಿಕೊಂಡಿದ್ದಾರೆ. ಇವರೇ ಮೈಸೂರು ಜಿಲ್ಲೆಯ ಟಾಪರ್ ಆಗಿ ಹೊರಹೊಮ್ಮಿದ್ದಾರೆ. ಕೆ.ಹೆಚ್.ಊರ್ವಿಶ್ ಪ್ರಶಾಂತ್ ಕನ್ನಡ, ಇಂಗ್ಲಿಷ್, ಭೌತವಿಜ್ಞಾನದಲ್ಲಿ ತಲಾ 99, ರಸಾಯನ ವಿಜ್ಞಾನ, ಗಣಿತ ಹಾಗೂ ಜೀವವಿಜ್ಞಾನದಲ್ಲಿ ತಲಾ 100 ಅಂಕ ಪಡೆದಿದ್ದಾರೆ. ಜಾಹ್ನವಿ ಸಂಸ್ಕೃತ, ಗಣಿತ, ಜೀವ ವಿಜ್ಞಾನ ಹಾಗೂ ರಸಾಯನ ವಿಜ್ಞಾನದಲ್ಲಿ ತಲಾ 100 ಅಂಕ, ಇಂಗ್ಲಿಷ್‌ನಲ್ಲಿ 99 ಮತ್ತು ಭೌತವಿಜ್ಞಾನದಲ್ಲಿ 98 ಅಂಕ ಗಳಿಸಿದ್ದಾರೆ. ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಶ್ರೇಯಾ ಗಣೇಶ್ ಅಯ್ಯರ್ ವಿಜ್ಞಾನ ವಿಭಾಗದಲ್ಲಿ 594 ಅಂಕ ಪಡೆದು ರಾಜ್ಯದಲ್ಲಿ 5ನೇ ಸ್ಥಾನ, ಜಿಲ್ಲೆಯಲ್ಲಿ 2ನೇ ಸ್ಥಾನ ಪಡೆದಿದ್ದಾರೆ. ಸರ್ಕಾರಿ ಕಾಲೇಜಿನ ವಿದ್ಯಾರ್ಥಿನಿಯ ಸಾಧನೆಗೆ ಕಾಲೇಜಿನ ಪ್ರಾಂಶುಪಾಲ ಪಿ.ಸೋಮಣ್ಣ ಹಾಗೂ ಬೋಧಕ ವರ್ಗ ಅಭಿನಂದಿಸಿದೆ. ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳಷ್ಟೇ ಗುಣಮಟ್ಟದ ಶಿಕ್ಷಣ ನೀಡುವ ಸರ್ಕಾರಿ ಸ್ವಾಮ್ಯದ ಮಹಾರಾಣಿ ಕಾಲೇಜು ಸಾಧನೆ ಮೆರೆದಿದೆ. ವಾಣಿಜ್ಯ ವಿಭಾಗದಲ್ಲಿ ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜಿನ ಸ್ವಾತಿ ಎಸ್.ಭಟ್ 594 ಅಂಕಗಳೊಂದಿಗೆ ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದು, ವ್ಯವಹಾರಿಕ ಅಧ್ಯಯನ, ಅಕೌಂಟೆನ್ಸಿ, ಗಣಿತ ಹಾಗೂ ಸಂಸ್ಕೃತದಲ್ಲಿ 100, ಇಂಗ್ಲಿಷ್‌ನಲ್ಲಿ 96, ಸಂಖ್ಯಾಶಾಸ್ತ್ರದಲ್ಲಿ 98 ಅಂಕ ಪಡೆದಿದ್ದಾರೆ. ಅದೇ ಕಾಲೇಜಿನ ಸಹನ ಎಸ್.ಪೈ 586, ಪಿ. ಮನೀಶ್‌ಕುಮಾರ್ 585 ಅಂಕ ಪಡೆದು ಗಮನ ಸೆಳೆದಿದ್ದಾರೆ.

ಕೆ.ಜಿ.ಅನಂತರಾಜ್ ಅರಸ್ ವಿಧಿವಶ

ಅಧ್ಯಕ್ಷರಾಗಿ, ಶ್ರೀ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ (ಮೈಸೂರು ಸ್ಪೋರ್ಟ್ಸ್ ಕ್ಲಬ್) ಕಾರ್ಯದರ್ಶಿಯಾಗಿ ಮತ್ತು 2019–2020ನೇ ಸಾಲಿನಲ್ಲಿ ಟರ್ಫ್ ಅಥಾರಿಟೀಸ್ ಆಫ್ ಇಂಡಿಯಾ(ಟಿಎಐ)ದ ಸೆಕ್ರೆಟರಿ ಜನರಲ್ ಆಗಿ ಕೂಡ ಸೇವೆ ಸಲ್ಲಿಸಿದ್ದರು. ಅನಂತರಾಜ್ ಅರಸ್ ಅವರು ಮೈಸೂರು ರೇಸ್ ಕ್ಲಬ್‌ನಲ್ಲಿ 1994ರಿಂದ 2019 ರವರೆಗೆ ನಿರಂತರವಾಗಿ 25 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದರು ಎಂದು ಮೈಸೂರು ರೇಸ್ ಕ್ಲಬ್ ಕಾರ್ಯದರ್ಶಿ ಡಾ.ಎಂ.ಆರ್. ಜಗನಾಥ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂತಾಪ: ಇಂದು ಮಧ್ಯಾಹ್ನ ಎಂಆರ್‌ಸಿ ಅಧ್ಯಕ್ಷರಾದ ಕೆ.ಎಂ.ಚಂದ್ರೇಗೌಡ ನೇತೃತ್ವದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಶ್ರೀಯುತರ ಸೇವೆ ಸ್ಮರಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿ, ಮೌನ ಆಚರಿಸಲಾಯಿತು. ಚಂದ್ರೇಗೌಡರು ಅನಂತರಾಜ್ ಅರಸ್‌ರ ಬದ್ಧತೆ, ಕಾರ್ಯತತ್ಪರತೆಯನ್ನು ಸ್ಮರಿಸಿ ಕಂಬನಿ ಮಿಡಿದರು.

ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಕೆಗೆ ಅವಕಾಶ

ವಿದ್ಯಾರ್ಥಿಗಳ ಫಲಿತಾಂಶ ಪ್ರತಿಯನ್ನು ಕೆಎಸ್‌ಇಬಿಯು ಈಗಾಗಲೇ ಆಯಾ ಕಾಲೇಜು ಮಂಡಳಿಗಳಿಗೆ ಕಳುಹಿಸಿದೆ. ಇನ್ನು ಪರೀಕ್ಷೆ–2ಕ್ಕೆ ಅರ್ಜಿ ಸಲ್ಲಿಸುವವರು ಮರುಮೌಲ್ಯಮಾಪನ ಫಲಿತಾಂಶಕ್ಕಾಗಿ ಕಾಯಬೇಕಿಲ್ಲ ಮರು ಮೌಲ್ಯಮಾಪನದ ಮತ್ತು ಮರು ಎಣಿಕೆಯ ಫಲಿತಾಂಶವನ್ನು ಮಂಡಳಿಯು, kseab.karnataka.gov.in ಎಂಬ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ: ಅಧಿಕೃತ ವೆಬ್‌ಸೈಟ್ kseab.karnataka.gov.inಗೆ ಭೇಟಿ ನೀಡಿ. ಸ್ಕ್ಯಾನ್ ಮಾಡಿದ ಪ್ರತಿಗಳ ಅರ್ಜಿ ನಮೂನೆಗಾಗಿ ಲಿಂಕ್ ಅನ್ನು ಕ್ಲಿಕ್ ಮಾಡಿ. ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ. ಫಾರ್ಮ್ ಜೊತೆಗೆ ಅರ್ಜಿ ಶುಲ್ಕವನ್ನು ಸಲ್ಲಿಸಿ. ಭವಿಷ್ಯದ ಉಲ್ಲೇಖಕ್ಕಾಗಿ ಸ್ವೀಕೃತಿ ಫಾರ್ಮ್ ಡೌನ್‌ಲೋಡ್ ಮಾಡಿ. ಸ್ಕ್ಯಾನ್ ಮಾಡಿದ ಪ್ರತಿಗಳಿಗೆ ಅರ್ಜಿ ಸಲ್ಲಿಸಿದ ನಂತರ, ಅಭ್ಯರ್ಥಿಗಳು ತಮ್ಮ ಸ್ಕ್ಯಾನ್ ಮಾಡಿದ ಉತ್ತರ ಪತ್ರಿಕೆಗಳ ಪಿಡಿಎಫ್‌ನ್ನು ಸ್ವೀಕರಿಸುತ್ತಾರೆ. ನಂತರ ಅವರು ಮರುಪರಿಶೀಲಿಸಲು ಬಯಸುವ ಉತ್ತರಗಳನ್ನು ಶಾರ್ಟ್‌ಲಿಸ್ಟ್ ಮಾಡಬಹುದು. ಮರುಮೌಲ್ಯಮಾಪನ ಅರ್ಜಿಯನ್ನು ಇದೇ ರೀತಿ ಭರ್ತಿ ಮಾಡಿ. ಪ್ರತಿ ವಿಷಯದ ಸ್ಕ್ಯಾನ್ ಮಾಡಿದ ಪ್ರತಿಗೆ 530ರೂಪಾಯಿ ನಿಗದಿಪಡಿಸಲಾಗಿದೆ. ಪ್ರತಿ ವಿಷಯದ ಮೌಲ್ಯಮಾಪನಕ್ಕೆ 1,670 ರೂಪಾಯಿ ನಿಗದಿ ಮಾಡಲಾಗಿದೆ.

ಚುನಾವಣೆಯಲ್ಲಿ ನನ್ನ ಗೆಲುವು ನಿಶ್ಚಿತ, ಜನ ಸೇವೆ ಖಚಿತ

ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ವಿಶ್ವಾಸ





ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಬುಧವಾರ ಮಳವಳ್ಳಿ ತಾಲೂಕಿನ ವಿವಿಧೆಡೆ ಭರ್ಜರಿ ಪ್ರಚಾರ ನಡೆಸಿದರು.

ಮಳವಳ್ಳಿ,ಏ.10– ಈ ಚುನಾವಣೆಯಲ್ಲಿ ಮತದಾರರು ನನ್ನನ್ನು ಬೆಂಬಲಿಸುವ ಮೂಲಕ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಲಿದ್ದಾರೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ವಿಶ್ವಾಸ ವ್ಯಕ್ತಪಡಿಸಿದರು.

ಮಳವಳ್ಳಿ ತಾಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರಚಾರಕ್ಕೆ ಹೋದ ಕಡೆಯಲ್ಲೆಲ್ಲ ಜನರು ತೋರುತ್ತಿರುವ ಪ್ರೀತಿ, ಅಭಿಮಾನ ನನ್ನ ಗೆಲುವಿನ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು. ಸುಡು ಬಿಸಿಲಿನಲ್ಲೂ ಜನರು ರಸ್ತೆಯಲ್ಲಿ ನನಗಾಗಿ ಕಾಯುತ್ತಾ ನಿಂತಿರುವುದನ್ನು ಕಂಡರೆ ಅವರ ಪ್ರೀತಿ ವಿಶ್ವಾಸಕ್ಕೆ ಚಿರಋಣಿಯಾಗಿದ್ದಾನೆ. ಚುನಾವಣೆಯಲ್ಲಿ ನನಗೆ ಗೆಲುವು ಎಂದರು.

ರೈತಾಪಿ ವರ್ಗವೇ ಹೆಚ್ಚಾಗಿರುವ ಮಳವಳ್ಳಿ ತಾಲೂಕು ಅನೇಕ ಪ್ರವಾಸಿತಾಣಗಳು, ಪುಣ್ಯ ಕ್ಷೇತ್ರಗಳನ್ನು ಒಳಗೊಂಡಿದೆ. ಕೇಂದ್ರದಿಂದ ವಿಶೇಷ ಅನುದಾನ ತಂದು ಇಲ್ಲಿನ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಿದರೆ ಸ್ಥಳೀಯವಾಗಿ ಉದ್ಯೋಗ ಸೃಷ್ಟಿಯಾಗಿ ಇಲ್ಲಿನ ಜನರು ಆರ್ಥಿಕವಾಗಿ ಸದೃಢರಾಗಲಿದ್ದಾರೆ ಎಂದರು. ರೈತ ಕುಟುಂಬದಲ್ಲಿ ಹುಟ್ಟಿ, ಬೆಳೆದ ನನಗೆ ರೈತರ ಕಷ್ಟ–ಸುಖ ಗೊತ್ತಿದೆ. ದೇವರು ನನಗೆ ಎಲ್ಲವನ್ನೂ ಕೊಟ್ಟಿದ್ದಾನೆ. ಹಣ ಮಾಡಲು ರಾಜಕೀಯಕ್ಕೆ ಬಂದಿಲ್ಲ. ಸಂಸತ್ತಿನಲ್ಲಿ ಜನರ ದನಿಯಾಗಲು ಬಂದಿದ್ದೇನೆ. ಜನ ನನ್ನನ್ನು ಆಶೀರ್ವದಿಸುವ ಸಂಪೂರ್ಣ ವಿಶ್ವಾಸವಿದೆ ಎಂದು ಹೇಳಿದರು.

ಜೆಡಿಎಸ್ ಕಡೇ ಆಟ: ಹೆಚ್.ಡಿ.ಕುಮಾರಸ್ವಾಮಿಯವರು ಪ್ರಧಾನಿ ಮೋದಿ ಅವರನ್ನು ಟೀಕೆ ಮಾಡಿ ಈಗ ಅವರ ಮೊರೆಯೇ ಹೋಗಿದ್ದಾರೆ. ರಾಮನಗರ, ಚನ್ನಪಟ್ಟಣ, ಚಿಕ್ಕಬಳ್ಳಾಪುರ ಆಯ್ತು ಈಗ ಮಂಡ್ಯಕ್ಕೆ ಬಂದಿದ್ದಾರೆ. ಈ ಚುನಾವಣೆ ಜೆಡಿಎಸ್‌ನ ಕಡೆ ಆಟ ಎಂದು ಶಾಸಕ ನರೇಂದ್ರ ಸ್ವಾಮಿ ಹೇಳಿದರು. ಲೋಕಸಭೆ ಚುನಾವಣೆಯಲ್ಲಿ ಮಗ ಸೋತ ನಂತರ ಮಂಡ್ಯಕ್ಕೆ ನೀಡಿದ್ದ 8 ಸಾವಿರ ಕೋಟಿ ವಾಪಸ್ ತೆಗೆದುಕೊಂಡಿರಿ. ಇಲ್ಲಿ ಐದು ವರ್ಷ ಶಾಸಕರಾಗಿದ್ದವರು ಕುಡಿಯುವ ನೀರು, ಶಿಕ್ಷಣ, ನೀರಾವರಿ ಸೇರಿದಂತೆ ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ಟೀಕಿಸಿದರು.

ಹೊರಗಿನವರು ಗೆದ್ದ ಇತಿಹಾಸ ಇಲ್ಲ

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಗ್ಯಾರಂಟಿ ಯೋಜನೆಗಳನ್ನು ವಿರೋಧಿಸುವವರನ್ನು ದೂರವಿಡಿ. ಹೊರ ಜಿಲ್ಲೆಯವರು ಇಲ್ಲಿ ಗೆದ್ದ ಇತಿಹಾಸ ಇಲ್ಲ. ಅದಕ್ಕೆ ಮಂಡ್ಯ ಸ್ವಾಭಿಮಾನದ ಕೋಟೆ ಬಿಟ್ಟುಕೊಟ್ಟಿಲ್ಲ ಎಂದರು. ರೈತ ವಿರೋಧಿ ಎಪಿಎಂಸಿ ಕಾಯ್ದೆಗೆ ಜೆಡಿಎಸ್ ಬೆಂಬಲಿಸಿ, ಈಗ ರೈತನ ಮಗ ಅನ್ನುತ್ತಾರೆ. ರೈತ ವಿರೋಧಿ, ಬಡವರ ವಿರೋಧಿ ಮೋದಿ ಜೊತೆ ಕೈಜೋಡಿಸಿ ಅವರ ಹೆಸರಿನಲ್ಲಿ ಮತ ಯಾಚಿಸುತ್ತಿದ್ದಾರೆ ಎಂದ ಅವರು, ಮಂಡ್ಯದಲ್ಲಿ ಒಕ್ಕಲಿಗ ನಾಯಕರನ್ನು ಬೆಳೆಯಲು ದೇವೇಗೌಡರು ಬಿಡಲಿಲ್ಲ. ಎಸ್.ಎಂ. ಕೃಷ್ಣ ಎರಡನೇ ಬಾರಿ ಸಿಎಂ ಆಗುವುದನ್ನು ತಪ್ಪಿಸಿದರು ಎಂದು ಟೀಕಿಸಿದರು.


ಸರ್ಕಾರ ಬಂದ 8 ತಿಂಗಳಲ್ಲಿ ಕ್ಷೇತ್ರಕ್ಕೆ 500 ಕೋಟಿ ರೂ. ಅನುದಾನ ತಂದಿದ್ದೇನೆ. ಕಸಬಾ, ಹಲಗೂರು ಹೋಬಳಿಯ ಎಲ್ಲಾ ಮನೆಗಳಿಗೆ 184 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ನೀರು ಪೂರೈಕೆ ಮಾಡಲಾಗುತ್ತದೆ. ಅಧಿಕಾರದಲ್ಲಿ ಇದ್ದಾಗ ಏನಾದರೂ ಮಾಡಬೇಕು. ವೆಂಕಟರಮಣೇಗೌಡ ಅವರು ಜನಸೇವೆ ಮಾಡಲು ಬಂದಿದ್ದಾರೆ. ಅವರನ್ನು ಬೆಂಬಲಿಸಬೇಕು ಎಂದರು.

ಪಕ್ಷ ಸೇರ್ಪಡೆ: ಮಳವಳ್ಳಿ ತಾಲೂಕಿನ ಟಿ.ಕೆ.ಹಳ್ಳಿ, ಅಟ್ಟುವನಹಳ್ಳಿ ಭಾಗದಲ್ಲಿ ಪ್ರಚಾರದಲ್ಲಿ ತೊಡಗಿದ್ದ ವೇಳೆ ಅನ್ಯ ಪಕ್ಷದ ಮುಖಂಡರು ಶಾಸಕ ನರೇಂದ್ರಸ್ವಾಮಿ ಅವರ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಅವರು ಮಳವಳ್ಳಿ ತಾಲೂಕಿನ ತಾಲೂಕಿನ ದಳವಾಯಿ ಕೋಡಿಹಳ್ಳಿ, ಹೆಚ್.ಬಸವನಪುರ, ಕರಲ್ಲುಕಟ್ಟೆ, ಹಲಗೂರು, ಲಿಂಗಪಟ್ಟಣ, ನಿಟ್ಟೂರು, ಯತ್ತಂಬಾಡಿ, ಟಿ.ಕೆ.ಹಳ್ಳಿ, ಹುಸ್ಕೂರು, ಅಗಸನಪುರ, ಹಾಡ್ಲಿ, ಹಲಸಹಳ್ಳಿ, ದನಗೂರು, ನಿಡಘಟ್ಟ, ಕಂದೇಗಾಲ, ನೆಲಮಾಕನಹಳ್ಳಿ, ನಾಗೇಗೌಡನದೊಡ್ಡಿ, ಚೊಟ್ಟನಹಳ್ಳಿ, ಪಂಡಿತಹಳ್ಳಿ, ಹೊಸಹಳ್ಳಿ, ಕುಂದೂರು, ಕ್ಯಾತನಹಳ್ಳಿ ಸೇರಿದಂತೆ ಹಲವೆಡೆ ಪ್ರಚಾರ ನಡೆಸಿದರು. ಶಾಸಕ ರಮೇಶ್ ಬಾಬು ಬಂಡಿಸಿದ್ದೇ ಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ ಗಂಗಾಧರ್, ಕೆಪಿಸಿಸಿ ಕಾರ್ಯದರ್ಶಿ ಶಿವಣ್ಣ ಸೇರಿದಂತೆ ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರು ಇದ್ದರು.

ಯುಗಾದಿ ಹೊಸತೊಡಕು ತಡೆದು ಹಿಂದೂ ಆಚರಣೆ ತಪ್ಪಿಸಿದ್ದಾರೆ

- ಕಾಂಗ್ರೆಸ್ ವಿರುದ್ಧ ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ
- ನಮ್ಮ ಪಕ್ಷಕ್ಕೆ ಬಿಡದಿಯ ನನ್ನ ತೋಟದ ಮನೆಯೇ ಹೆಡ್ ಆಫೀಸ್
- ಇಲ್ಲಿ ಪಕ್ಷದ ಕೆಲ ಮುಖಂಡರ ಸಭೆ; ನಂತರ ಊಟದ ವ್ಯವಸ್ಥೆ ಮಾಡಿದ್ದೆ





ಬೆಂಗಳೂರು, ಏ.10(ಕೆಎಂಶಿ)– ಯುಗಾದಿ ಹೊಸತೊಡಕು ಸಂಭ್ರಮಕ್ಕೆ ಅಡ್ಡಿ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ಹಿಂದೂ ಸಂಸ್ಕೃತಿಯ ಮೇಲೆ ತನ್ನ 'ಕಾಕ' ದೃಷ್ಟಿ ಬೀರಿದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಕಿಡಿಕಾರಿದ್ದಾರೆ.

ಹೊಸತೊಡಕು ದಿನದಂದು ತಮ್ಮ ಸ್ನೇಹಿತರಿಗೆ ಏರ್ಪಡಿಸಿದ್ದ ಔತಣಕೂಟವನ್ನು ಕಾಂಗ್ರೆಸ್ ನಾಯಕರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ನಮ್ಮ ಹಿಂದೂ ಆಚರಣೆಯನ್ನೇ ತಡೆದಿದ್ದಾರೆ ಎಂದು ಟೀಕಿಸಿದ್ದಾರೆ.

ಬಿಡದಿ ಮನೆಯ ವಿಷಯ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕುಮಾರಸ್ವಾಮಿ ಅವರ ನಡುವೆ ಮಾತಿನ ಕಾಳಗಕ್ಕೆ ಎಡೆ ಮಾಡಿದ್ದು, ಇದರ ಭರದಲ್ಲಿ ಒಕ್ಕಲಿಗ ಹಾಗೂ ಸಮುದಾಯದ ಮಠಗಳನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂಬ ಮಾತುಗಳೂ ಕೇಳಿಬಂದಿದೆ. ಬಿಡದಿ ತೋಟವನ್ನು ಕುಮಾರಸ್ವಾಮಿ, ಹೆಡ್ ಕ್ವಾರ್ಟರ್ಸ್ ಮಾಡಿಕೊಂಡಿದ್ದಾರೆ ಎಂಬ ಆ ಪಕ್ಷದ ನಾಯಕರ ಹೇಳಿಕೆಗೆ ಕೆಂಡಾಮಂಡಲವಾಗಿರುವ ಕುಮಾರಸ್ವಾಮಿ, ಕಾಂಗ್ರೆಸ್ ಆಫೀಸ್ ಅನ್ನು ನಾನು ಹೆಡ್ ಆಫೀಸ್ ಮಾಡಿಕೊಳ್ಳಲು ಆಗುತ್ತದೆಯೇ ಎಂದು ತಿರುಗೇಟು ನೀಡಿದ್ದಾರೆ. ನನ್ನ ತೋಟ, ನನ್ನ ಮನೆ, ಅಲ್ಲಿ ಹಿಂದೂ ಸಂಸ್ಕೃತಿಯಂತೆ ಹಬ್ಬ ಆಚರಿಸುತ್ತಿದ್ದೇನೆ, ಮೇಕೆದಾಟು ಪಾದಯಾತ್ರೆಯಲ್ಲಿ ತೂರಾಡಿದಂತೆ ನಾವೇನು ಇಲ್ಲಿ ತೂರಾಡುತ್ತಿಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿಗೆ ಕೇಶವ ಕೃಪ ಹೇಗೋ, ನಮ್ಮ ಪಕ್ಷಕ್ಕೆ ನಮ್ಮ ತೋಟದ ಮನೆಯೂ ಹಾಗೆ, ಬಿಡದಿಯ ನನ್ನ ತೋಟವೇ ನನ್ನ ಪಕ್ಷದ ಹೆಡ್ಡಾಫೀಸ್, ಅದರಲ್ಲಿ ತಪ್ಪೇನಿದೆ. ನಾನು ಪಕ್ಷದ ಅಧ್ಯಕ್ಷನಿದ್ದೇನೆ, ಅಲ್ಲಿ ನಾನು, ನಮ್ಮ ಪಕ್ಷದ ಕೆಲ ಮುಖಂಡರ ಸಭೆ ಕರೆದಿದ್ದೆ. ಅಲ್ಲದೆ, ನನ್ನ ತೋಟದಲ್ಲಿ 120 ಜನ ಈಗಲೂ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಊಟದ ವ್ಯವಸ್ಥೆ ಮಾಡಿದ್ದೆವು. ಮಾಡಬಾರದು ಅನ್ನೋಕೆ ಅದೇನು ಕಾಂಗ್ರೆಸ್ ಹೆಡ್ಡಾಫೀಸಾ?

ಕಾಂಗ್ರೆಸ್ ನಾಯಕರು ವಿಧಾನಸಭೆ ಚುನಾವಣೆಗೆ ಮೊದಲು ಮೇಕೆದಾಟು ಪಾದಯಾತ್ರೆ ಮಾಡಿದ್ದರು. ಪಾದಯಾತ್ರೆಯಲ್ಲಿ ತೂರಾಡಿದ್ದು ಯಾರು, ನಾನು ತೂರಾಡಿದ್ನಾ. ನನಗೂ ಏನು ಮಾಡಬೇಕು, ಏನು ಮಾಡಬಾರದು ಎಂದು ಗೊತ್ತಿದೆ. ಅಲ್ಲಿನ ತಹಶಿಲ್ದಾರ್ ಅವರಿಗೆ ಪದೇ ಪದೇ ಫೋನ್ ಕರೆ ಮಾಡಿ ಒತ್ತಡ ಹೇರಿದ್ದಾರೆ, ಏನು ಸಿಕ್ಕಿಲ್ಲ ಅಲ್ಲಿ. ಇಷ್ಟು ಚುನಾವಣೆ ಮಾಡಿದವನಿಗೆ ಏನು ಮಾಡಬೇಕು ಅನ್ನೋದು ಗೊತ್ತಿಲ್ಲವಾ ಎಂದು ಅವರು ಖಾರವಾಗಿ ಪ್ರಶ್ನಿಸಿದರು.

ನಾವು ಬಿಡದಿ ತೋಟದಲ್ಲಿ ಗ್ಲಾಸ್ ಇಟ್ಟು ಪಾರ್ಟಿ ಮಾಡ್ತಿಲ್ಲ, ಹಾಗೆ ಮಾಡೋದು ಕಾಂಗ್ರೆಸ್ ಸಂಸ್ಕೃತಿ, ಅಂತಹ ಕೆಲಸವನ್ನು ಕಾಂಗ್ರೆಸ್ ನಿರಂತರವಾಗಿ ಮಾಡಿಕೊಂಡು ಬಂದಿದೆ ಎಂದು ಅವರು ಆರೋಪ ಮಾಡಿದರು.

ನಾನು ಅಧಿಕಾರದಲ್ಲಿದ್ದಾಗ ಎಂದೂ ನಮ್ಮ ಸಮುದಾಯದ ಸ್ವಾಮೀಜಿಗಳನ್ನು ದುರುಪಯೋಗಪಡಿಸಿಕೊಳ್ಳುವ ಕೆಲಸ ಮಾಡಿಲ್ಲ. ನಾನು ಎಂದೂ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡಿಲ್ಲ, ಜಾತ್ಯತೀತ ಅಂತ ಹೇಳೋರು, ಪ್ರತೀ ದಿನ ಜಾತಿ ಬಗ್ಗೆಯೇ ಮಾತಾಡ್ತಾರೆ, ನಮ್ಮ ಸಮಾಜದ ಜನ ದಡ್ಡರಲ್ಲ, ಇವರು ನಡೆಸುತ್ತಿರುವ ರಾಜಕೀಯ ಎಲ್ಲರಿಗೂ ಅರ್ಥ ಆಗುತ್ತಿದೆ ಎಂದು ಅವರು ಕಿಡಿಕಾರಿದರು.

ಪರಮಪೂಜ್ಯ ಶ್ರೀಗಳನ್ನು ಭೇಟಿ ಮಾಡಿ ಅವರನ್ನು ಬಳಸಿಕೊಳ್ಳುವ ಪ್ರಯತ್ನ ಮೊನ್ನೆ ಕಾಂಗ್ರೆಸ್ ಮಾಡಿದೆ, ರಾಜಕೀಯಕ್ಕೂ ಧರ್ಮಕ್ಕೂ ಏನ್ ಸಂಬಂಧ, ಧಾರ್ಮಿಕವಾಗಿ ನಾಡಿಗೆ ಮಾರ್ಗದರ್ಶನ ಮಾಡುತ್ತಿರುವ ಸ್ವಾಮೀಜಿಗಳನ್ನು ರಾಜಕೀಯಕ್ಕೆ ಎಳೆದು ತರುವುದು ಸರಿಯಲ್ಲ ಎಂದು ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಶಿವಕುಮಾರ್, 'ಕುಮಾರಸ್ವಾಮಿ ಅವರು ಯಾರನ್ನ ಟೀಕೆ ಮಾಡಿಲ್ಲ ಹೇಳಿ, ಪ್ರಣಾಳಿಕೆ ಬಿಡಿ, ಕುಮಾರಸ್ವಾಮಿ ಅವರು ನಮ್ಮ ಪ್ರತಿ ವಿಚಾರವನ್ನೂ ಟೀಕೆ ಮಾಡುತ್ತಾರೆ. ಮೇಕೆದಾಟು ಪಾದಯಾತ್ರೆ ಟೀಕೆ ಮಾಡಿದ್ದವರು ಈಗ ಮೇಕೆದಾಟು ಯೋಜನೆ ಜಾರಿಗೆ ಶಪಥ ಮಾಡುವುದಾಗಿ ಹೇಳಿದ್ದಾರೆ.

ಸ್ವಾಮೀಜಿಗಳು ಬುದ್ಧಿವಂತರು: ಮಠದ ಸ್ವಾಮಿಗಳನ್ನೂ ಬಿಟ್ಟಿಲ್ಲ, ಎರಡು ಮಠ ಮಾಡಿದ್ದಾರೆ. ಈಗ ದಿನಬೆಳಗಾದರೆ ಮಠಕ್ಕೆ ಹೋಗಿ ಭೇಟಿ ಮಾಡುತ್ತಾರೆ. ಅವರು ತಮ್ಮ ಮಾತಿಗೆ ಎಂದಿಗೂ ಬದ್ಧರಾಗಿರುವುದಿಲ್ಲ, ಹೀಗಾಗಿ ಅವರ ಮಾತನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲ ಎಂದರು. 'ಒಕ್ಕಲಿಗರು ಮತ್ತು ಸ್ವಾಮೀಜಿಗಳು ದಡ್ಡರಲ್ಲ, ಸ್ವಾಮೀಜಿಗಳ ಬಳಿ ಬರುವವರಿಗೆ ವಿಭೂತಿ, ಹೂವಿನ ಹಾರ ಹಾಕಿ ಕಳಿಸುತ್ತಾರೆ. ಅವರು ನಮ್ಮ ಪರ, ಅವರ ಪರ, ಇಬ್ಬರ ಪರವೂ ಮಾಡುವುದಿಲ್ಲ, ಸ್ವಾಮೀಜಿಗಳು ಬುದ್ಧಿವಂತರು, ರಾಜಕೀಯದಲ್ಲಿ ಅವರು ಹಸ್ತಕ್ಷೇಪ ಮಾಡುವುದಿಲ್ಲ ಎಂದರು.

ಮೇಕೆದಾಟು ಪಾದಯಾತ್ರೆ ವೇಳೆ ನಾನು ತೂರಾಡಿದ್ದೇನೆ ಎಂಬ ಕುಮಾರಸ್ವಾಮಿ ಹೇಳಿಕೆಗೆ, ಅವರು ಏನಾದರೂ ಹೇಳಿಕೊಳ್ಳಲಿ, ಜನಕ್ಕೆ ಎಲ್ಲವೂ ಗೊತ್ತಿದೆ, ನಾನು ಪಾದಯಾತ್ರೆ ಮಾಡಿದ್ದೇನೆ ತಾನೆ, ಅವರೂ ಮಾಡಲಿ. ನಾನು ಕುಡಿದು ತೂರಾಡಿದ್ದೇನೆಯೇ, ನಾನು ಪಾದಯಾತ್ರೆಯಲ್ಲಿ ನಡೆದು ಸುಸ್ತಾಗಿ ತೂರಾಡಿದ್ದೇನೆ. ಕುಮಾರಸ್ವಾಮಿ ಅವರು ಅಲ್ಲಿ ನಡೆದಿದ್ದರೆ ಅವರಿಗೆ ಗೊತ್ತಾಗುತ್ತಿತ್ತು. ಈ ನಾಡು, ಕಾವೇರಿ ಜಲಾನಯನ ಪ್ರದೇಶದ ಜನರಿಗಾಗಿ ಈ ಹೋರಾಟ ಮಾಡಿದ್ದೇನೆ ನಾನು ಈ ವಿಚಾರದಲ್ಲಿ ಅವರಿಗೆ ಸವಾಲು ಹಾಕುವುದಿಲ್ಲ, ನಾನು ಸವಾಲು ಹಾಕಿ ಅವರ ಆರೋಗ್ಯ ಹೆಚ್ಚುಕಮ್ಮಿ ಆದರೆ, ನಾನು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಅವರು ಧೈರ್ಯವಾಗಿ ಚುನಾವಣೆ ಮಾಡುತ್ತಿದ್ದಾರೆ, ಅದಕ್ಕೆ ಶುಭ ಕೋರುತ್ತೇನೆ ಎಂದರು.

ದ್ವಿತೀಯ ಪಿಯು; ಎನ್. ಧನಲಕ್ಷ್ಮಿಗೆ ಉನ್ನತ ಶ್ರೇಣಿ



ಮೈಸೂರು,ಏ.10(ಪಿಎಂ)– ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜಿನ ಎನ್.ಧನಲಕ್ಷ್ಮಿ ದ್ವಿತೀಯ ಪಿಯುಸಿ ಯಲ್ಲಿ 562 ಅಂಕ ಗಳಿಸುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡದಲ್ಲಿ 78, ಇಂಗ್ಲಿಷ್‌ನಲ್ಲಿ 86, ಭೌತಶಾಸ್ತ್ರದಲ್ಲಿ 94, ರಸಾಯನ ಶಾಸ್ತ್ರದಲ್ಲಿ 91, ಗಣಿತಶಾಸ್ತ್ರದಲ್ಲಿ 96 ಮತ್ತು ಜೀವಶಾಸ್ತ್ರದಲ್ಲಿ 97 ಅಂಕ ಗಳಿಸಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಎನ್.ಧನಲಕ್ಷ್ಮೀ ಮೈಸೂರಿನ ವೀರನಗೆರೆಯ ವೀಣಾ ಮತ್ತು ಬಾಬು ದಂಪತಿ ಪುತ್ರಿ.

ಹೇಮಾರ್ಷಿತಗೆ ಉನ್ನತ ಶ್ರೇಣಿ



ಮೈಸೂರು, ಏ.10–ಮೂಡುಬಿದರೆ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಹೇಮಾರ್ಷಿತ ಡಿ.ಎಸ್ ಈ ಬಾರಿಯ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ 600 ಅಂಕಗಳಿಗೆ 572 ಅಂಕ (ಶೇ.95) ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಕನ್ನಡದಲ್ಲಿ 98, ಇಂಗ್ಲಿಷ್–95, ಭೌತಶಾಸ್ತ್ರ–94, ಕೆಮಿಸ್ಟ್ರಿ–95, ಗಣಿತಶಾಸ್ತ್ರ–99, ಜೀವಶಾಸ್ತ್ರದಲ್ಲಿ 91 ಅಂಕ ಪಡೆದಿರುವ ಹೇಮಾರ್ಷಿತ ಮೈಸೂರು ತಾಲೂಕು ದೊಡ್ಡಹುಂಡಿ ಗ್ರಾಪಂ ಮಾಜಿ ಅಧ್ಯಕ್ಷ ಸೋಮಣ್ಣ ಮತ್ತು ಯಮುನ ದಂಪತಿಯ ಪುತ್ರಿ.

ನಾಳೆ ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ: ಮೈಸೂರು, ಚಾಮರಾಜನಗರ ಕ್ಷೇತ್ರದಲ್ಲಿ ಪ್ರಚಾರ



ಮೈಸೂರು, ಏ.10(ಬಿಎಲ್‌ಯು)– ಮೈಸೂರು–ಕೊಡಗು ಹಾಗೂ ಚಾಮರಾಜನಗರ ವಿಧಾನಸಭಾ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ಸ್ವೀಕರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ದಿನಗಳ ಪ್ರವಾಸಕ್ಕಾಗಿ ಏಪ್ರಿಲ್ 12 ರಂದು ಮೈಸೂರಿಗೆ ಆಗಮಿಸಲಿದ್ದಾರೆ.

ಏಪ್ರಿಲ್ 12 ರಂದು ಬೆಳಗ್ಗೆ 10 ಗಂಟೆಗೆ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಮಾನದಲ್ಲಿ ಪ್ರಯಾಣ ಬೆಳೆಸುವ ಸಿದ್ದರಾಮಯ್ಯ 10.40 ಗಂಟೆಗೆ ಚಾಮರಾಜನಗರ ಜಿಲ್ಲೆ ಕೊಳ್ಳೆಗಾಲದ ಲಿಂಗನಾಪುರ ಗ್ರಾಮಕ್ಕೆ ಆಗಮಿಸಿ, ಪ್ರಜಾಧ್ವನಿ–2 ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳುವರು.

ಮತ್ತೆ ಅಲ್ಲಿಂದ ಹೆಲಿಕಾಪ್ಟರ್‌ನಲ್ಲಿ ಹೊರಟು ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ತರುವಾಯ ನಂಜನಗೂಡಿನಲ್ಲಿ ನಡೆಯುವ ಪ್ರಜಾಧ್ವನಿ– 2 ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅಂದು ಸಂಜೆ 4.45 ಗಂಟೆಗೆ ಹೆಚ್.ಡಿ. ಕೋಟೆ ಟೌನ್‌ನಲ್ಲಿ ನಡೆಯುವ ಪ್ರಜಾಧ್ವನಿ– 2 ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳುವರು. ಅಲ್ಲಿಂದ ಮೈಸೂರಿಗೆ ಆಗಮಿಸಿ ಇಲ್ಲೇ ವಾಸ್ತವ್ಯ ಹೂಡುವರು.

ಮೊದಲ ದಿನದ ಮೂರು ಕಾರ್ಯಕ್ರಮಗಳನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಚಾರ ಕಾರ್ಯಕ್ಕೆ ಸಿದ್ದರಾಮಯ್ಯ ಮೀಸಲಿಟ್ಟಿದ್ದಾರೆ. ಏಪ್ರಿಲ್ 13 ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಪ್ರಜಾಧ್ವನಿ– 2 ಲೋಕಸಭಾ ಪ್ರಚಾರ ಸಭೆಯಲ್ಲಿ ಸಿದ್ದರಾಮಯ್ಯ ಭಾಗಿಯಾಗಲಿದ್ದಾರೆ. ಮಧ್ಯಾಹ್ನ 1.30 ಗಂಟೆಗೆ ಹುಣಸೂರು ಟೌನ್‌ನಲ್ಲಿ ನಡೆಯುವ ಪ್ರಜಾಧ್ವನಿ–2 ಪ್ರಚಾರ ಸಭೆಯಲ್ಲಿ ಉಪಸ್ಥಿತರಿರುವರು. ಅಲ್ಲಿಂದ ನೇರವಾಗಿ ಪಿರಿಯಾಪಟ್ಟಣಕ್ಕೆ ತೆರಳಿ ಅಲ್ಲಿ ಸಂಜೆ 4.45 ಗಂಟೆಗೆ ನಡೆಯುವ ಪ್ರಜಾಧ್ವನಿ–2 ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ರಾತ್ರಿ 7.45 ಗಂಟೆಗೆ ಮೈಸೂರಿಗೆ ಆಗಮಿಸಿ 8.15 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಲಿದ್ದಾರೆ.

ಮೈಸೂರಿನಲ್ಲಿ ಏಪ್ರಿಲ್ 12 ರಿಂದ ಮೂರು ದಿನ ಇಲ್ಲೇ ವಾಸ್ತವ್ಯ ಹೂಡಿ ಬಿರುಸಿನ ಪ್ರಚಾರ ಮಾಡುತ್ತೇನೆ ಎಂದು ಸ್ವತಃ ಸಿದ್ದರಾಮಯ್ಯ ಅವರೆ ಹೇಳಿದ್ದರು. ಆದರೆ ಬೇರೆ ಕ್ಷೇತ್ರಗಳ ಪ್ರಚಾರದ ಹಿನ್ನೆಲೆಯಲ್ಲಿ ಎರಡು ದಿನಕ್ಕೆ ಪ್ರವಾಸ ಸೀಮಿತಗೊಳಿಸಿ ಮೈಸೂರು ಕೊಡಗು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಲೋಕಸಭಾ ಚುನಾವಣೆ ಹಿನ್ನೆಲೆ 25 ದಿನದಲ್ಲಿ ಇದು ಸಿದ್ದರಾಮಯ್ಯನವರ 4ನೇ ಭೇಟಿ. ಅದೂ ಎರಡು ಹಾಗೂ ಮೂರು ದಿನ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ. ಈ ಮೂಲಕ ಎರಡು ಕ್ಷೇತ್ರದ ಫಲಿತಾಂಶವನ್ನು ಸಿದ್ದರಾಮಯ್ಯ ಪ್ರತಿಷ್ಠೆಯಾಗಿ ಸ್ವೀಕರಿಸಿರುವುದು ಸ್ಪಷ್ಟವಾಗಿದೆ.

ಸಿದ್ದರಾಮಯ್ಯ ಎರಡು ದಿನಗಳ ಕಾಲ ಪಾಲ್ಗೊಳ್ಳುವ ಪ್ರಚಾರ ಸಭೆಗೆ ಪ್ರಜಾಧ್ವನಿ–2 ಎಂಬ ಹೆಸರಿಡಲಾಗಿದೆ.

ಕಳೆದ ಬಾರಿ ಸಿದ್ದರಾಮಯ್ಯ ಮೈಸೂರಿಗೆ ಭೇಟಿ ನೀಡಿದ್ದ ವೇಳೆ ಆಪರೇಷನ್ ಹಸ್ತ ಮಾಡಿ ಬಿಜೆಪಿ ಹಾಗೂ ಜೆಡಿಎಸ್ ನ ಬಹಳಷ್ಟು ನಾಯಕರನ್ನು ಕಾಂಗ್ರೆಸ್ ಗೆ ಸೇರ್ಪಡೆ ಮಾಡಿಕೊಂಡಿದ್ದರು. ಈಗ ನಾಡಿದ್ದು ಮೈಸೂರಿಗೆ ಬಂದಾಗ ಯಾವ ನಾಯಕರು ಕಾಂಗ್ರೆಸ್‌ಗೆ ಸೇರುತ್ತಾರೆ ಎಂಬ ಸಹಜ ಕುತೂಹಲವಿದೆ.

ರಾಜಸ್ಥಾನ್ ವಿರುದ್ಧ ಗುಜರಾತ್‌ಗೆ ರೋಚಕ ಜಯ



ಇಂದಿನ ಪಂದ್ಯ

[ಏ.11]

ಮುಂಬೈ ಇಂಡಿಯನ್ಸ್/ ರಾಯಲ್ ಚಾಲೆಂಜರ್ಸ್ ಬೆಂಗಳೂರು

ಸ್ಥಳ: ಮುಂಬೈ, ವಾಂಖೆಡೆ ಕ್ರೀಡಾಂಗಣ,

ಸಮಯ: ಸಂಜೆ 7.30ಕ್ಕೆ

ಜೈಪುರ, ಏ.10– ನಾಯಕ ಶುಭಮನ್ ಗಿಲ್ ಅರ್ಧಶತಕ, ರಶೀದ್ ಖಾನ್ ಮತ್ತು ರಾಹುಲ್ ತೆವಾಟಿಯ ಅವರ ಸ್ಫೋಟಕ ಬ್ಯಾಟಿಂಗ್‌ನಿಂದ ರಾಜಸ್ಥಾನ ರಾಯಲ್ಸ್ ವಿರುದ್ಧ ಗುಜರಾತ್ ಟೈಟಾನ್ಸ್ 3 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

ಗೆಲ್ಲಲು 196 ರನ್‌ಗಳ ಕಠಿಣ ಗುರಿಯನ್ನು ಪಡೆದ ಗುಜರಾತ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 199 ರನ್ ಬಾರಿಸುವ ಮೂಲಕ ವಿಜಯದ ನಗೆಬೀರಿತು. ಕೊನೆಯ ಎಸೆತವನ್ನು ಬೌಂಡರಿಗೆ ಅಟ್ಟುವ ಮೂಲಕ ರಶೀದ್ ಖಾನ್ ವಿನ್ನಿಂಗ್ ಶಾಟ್ ಹೊಡೆದರು. ಸತತ 4 ಪಂದ್ಯಗಳನ್ನು ಗೆದ್ದಿದ್ದ ರಾಜಸ್ಥಾನಕ್ಕೆ 5ನೇ ಪಂದ್ಯದಲ್ಲಿ ಸೋಲಾಗಿದೆ.

ಗುಜರಾತ್‌ಗೆ ಕೊನೆಯ 24 ಎಸೆತದಲ್ಲಿ 59 ರನ್ ಬೇಕಿತ್ತು. ಅಶ್ವಿನ್ ಎಸೆದ 17ನೇ ಓವರ್‌ನಲ್ಲಿ 17 ರನ್ ಬಂದರೆ 18ನೇ ಓವರ್‌ನಲ್ಲಿ 7 ರನ್ ಬಂತು. ಕುಲದೀಪ್ ಸೇನ್ 19ನೇ ಓವರ್‌ನಲ್ಲಿ 20 ರನ್ ನೀಡಿದರು. ಈ ಓವರ್‌ನಲ್ಲಿ 4ನೇ ಎಸೆತ ನೋಬಾಲ್ ಆಗಿತ್ತು. ಆ ಎಸೆತವನ್ನು ರಶೀದ್ ಖಾನ್ ಬೌಂಡರಿಗೆ ಅಟ್ಟಿದ್ದರು. ಕೊನೆಯ ಓವರ್‌ನಲ್ಲಿ 15 ರನ್ ಬೇಕಿತ್ತು. ಈ ವೇಳೆ ನಿಧಾನಗತಿಯ ಬೌಲಿಂಗ್ ಮಾಡಿದ್ದಕ್ಕೆ ನಾಲ್ವರು ಆಟಗಾರರು ಮಾತ್ರ ಬೌಂಡರಿ ಬಳಿ ಫೀಲ್ಡಿಂಗ್ ಮಾಡಲು ಅವಕಾಶವಿತ್ತು. ಇದರ ಲಾಭವನ್ನು ರಶೀದ್ ಖಾನ್ ಮತ್ತು ತೆವಾಟಿಯ ಪಡೆದರು. ಅವೇಶ್ ಖಾನ್ ಎಸೆದ ಮೊದಲ ಎಸೆತವನ್ನು ರಶೀದ್ ಖಾನ್ ಬೌಂಡರಿಗೆ ಅಟ್ಟಿದರೆ ಎರಡನೇ ಎಸೆತದಲ್ಲಿ 2 ರನ್, ಮೂರನೇ ಎಸೆತದಲ್ಲಿ ಬೌಂಡರಿ ಹೊಡೆದರು. 4ನೇ ಎಸೆತದಲ್ಲಿ ಒಂದು ರನ್ ತೆಗೆದರೆ 5ನೇ ಎಸೆತದಲ್ಲಿ ಮೂರು ರನ್ ತೆಗೆಯುವಾಗ ತೆವಾಟಿಯಾ ರನೌಟ್ ಆದರು. ಕೊನೆಯ ಒಂದು ಎಸೆತದಲ್ಲಿ 2 ರನ್ ಬೇಕಿದ್ದಾಗ ರಶೀದ್ ಖಾನ್ ಬೌಂಡರಿ ಚಚ್ಚಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಗುಜರಾತ್ ಪರ ನಾಯಕ ಶುಭಮನ್ ಗಿಲ್ 72 ರನ್(44 ಎಸೆತ, 6 ಬೌಂಡರಿ, 2 ಸಿಕ್ಸರ್) ಹೊಡೆದು ಔಟಾದರೆ ಸಾಯಿ ಸುದರ್ಶನ್ 35 ರನ್ (29 ಎಸೆತ, 3 ಬೌಂಡರಿ, 1 ಸಿಕ್ಸರ್) ಹೊಡೆದು ಔಟಾದರು.

ಮಧ್ಯಮ ಕ್ರಮಾಂಕದ ಆಟಗಾರರು ಬೇಗನೇ ಔಟಾದ ಪರಿಣಾಮ ಗುಜರಾತ್ ಸೋಲಿನ ಕಡೆ ಜಾರಿತ್ತು. ಆದರೆ ರಶೀದ್ ಖಾನ್ ಮತ್ತು ತೆವಾಟಿಯಾ 14 ಎಸೆತದಲ್ಲಿ 36 ರನ್ ಜೊತೆಯಾಟವಾಡಿ ತಂಡವನ್ನು ಗೆಲುವಿನ ದಡದತ್ತ ತಂದರು. ರಶೀದ್ ಖಾನ್ ಔಟಾಗದೇ 24 ರನ್(11 ಎಸೆತ, 4 ಬೌಂಡರಿ) ತವಾಟಿಯಾ 22 ರನ್ (11 ಎಸೆತ, 3 ಬೌಂಡರಿ) ಹೊಡೆದರು.


ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ರಾಜಸ್ಥಾನ 42 ರನ್ ಗಳಿಸುವಷ್ಟರಲ್ಲಿ ಯಶಸ್ವಿ ಜೈಸ್ವಾಲ್ 24 ರನ್(19 ಎಸೆತ, 5 ಬೌಂಡರಿ), ಜೋಸ್ ಬಟ್ಲರ್ ಅವರ ವಿಕೆಟ್ ಕಳೆದುಕೊಂಡಿತ್ತು. ಆರಂಭದಲ್ಲೇ ವಿಕೆಟ್ ಕಳೆದುಕೊಂಡರೂ ಸಂಜು ಸ್ಯಾಮ್ಸನ್ ಮತ್ತು ರಿಯಾನ್ ಪರಾಗ್ ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಇವರಿಬ್ಬರು ಮೂರನೇ ವಿಕೆಟಿಗೆ 78 ಎಸೆತಗಳಲ್ಲಿ 130 ರನ್ ಹೊಡೆದರು.

ರಿಯಾನ್ ಪರಾಗ್ 76 ರನ್(48 ಎಸೆತ, 3 ಬೌಂಡರಿ, 5 ಸಿಕ್ಸರ್) ಹೊಡೆದು ಔಟಾದರೆ ನಾಯಕ ಸಾಮ್ಸನ್ ಔಟಾಗದೇ 68 ರನ್ (38 ಎಸೆತ, 7 ಬೌಂಡರಿ, 2 ಸಿಕ್ಸರ್), ಹೆಟ್ಮೆಯರ್ 13 ರನ್ (5 ಎಸೆತ, 1 ಬೌಂಡರಿ, 1 ಸಿಕ್ಸರ್) ಹೊಡೆದ ಪರಿಣಾಮ ರಾಜಸ್ಥಾನ 3 ವಿಕೆಟ್ ನಷ್ಟಕ್ಕೆ 196 ರನ್ ಹೊಡೆಯಿತು.

ಮೈಸೂರು ಮಿತ್ರ

ಭಾರೀ ಅಂತರದಿಂದ ನನ್ನ ಗೆಲ್ಲಿಸಿ

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ



ತಿ.ನರಸೀಪುರ ತಾಲೂಕಿನ ಸೋಸಲೆ, ಬೆನಕನಹಳ್ಳಿ, ಮುಸುವಿನ ಕೊಪ್ಪಲು ಹಾಗೂ ದೊಡ್ಡೇಬಾಗಿಲು ಗ್ರಾ.ಪಂ.ವ್ಯಾಪ್ತಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮತಯಾಚನೆ ಮಾಡಿದರು.

ತಿ.ನರಸೀಪುರ, ಏ.10– ಚಾಮರಾಜನಗರ ಲೋಕಸಭಾ ಕ್ಷೇತ್ರವು ವರುಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೊಳಪಡಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ಕ್ಷೇತ್ರದ ಫಲಿತಾಂಶವನ್ನು ಇಡೀ ರಾಜ್ಯ ಕಾತುರದಿಂದ ಕಾಯುತ್ತಿದೆ. ಕಾರ್ಯಕರ್ತರು ರಾಜ್ಯದ ಜನತೆಗೆ ನಿರಾಶೆಯಾಗದ ರೀತಿಯಲ್ಲಿ ಪಕ್ಷದ ಗೆಲುವಿಗೆ ಕಂಕಣಬದ್ಧರಾಗಿ ಕೆಲಸ ಮಾಡಬೇಕೆಂದು ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ ಮಾಡಿದರು.

ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ತಾಲೂಕಿನ ಸೋಸಲೆ, ಮುಸುವಿನ ಕೊಪ್ಪಲು, ಬೆನಕನಹಳ್ಳಿ ಹಾಗೂ ದೊಡ್ಡೇಬಾಗಿಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ನನ್ನನ್ನು ಅತ್ಯಂತ ಹೆಚ್ಚಿನ ಲೀಡ್‌ನಿಂದ ಗೆಲ್ಲಿಸಿ ರಾಜ್ಯದ ಜನರಿಗೆ ಸಿಹಿಸುದ್ದಿ ನೀಡಿ ಎಂದರು.

ಕಳೆದ ಬಾರಿ ನಡೆದ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷವು 5 ಗ್ಯಾರಂಟಿಗಳನ್ನು ರಾಜ್ಯದ ಜನರ ಮನೆ ಮನೆಗೆ ಗ್ಯಾರಂಟಿ ಕಾರ್ಡ್‌ಗಳನ್ನು ಹಂಚುವ ಮೂಲಕ ನೀಡಿತ್ತು. ರಾಜ್ಯದ ಜನತೆಯ ಆಶೀರ್ವಾದದಿಂದ ಚುನಾವಣೆಯಲ್ಲಿ ಪಕ್ಷ 135 ಸ್ಥಾನ ಪಡೆದು ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದು 6–7 ತಿಂಗಳ ಅವಧಿಯೊಳಗೆ ಸರ್ಕಾರ ನೀಡಿದ್ದ ಎಲ್ಲಾ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕೊಟ್ಟ ಮಾತಿನಂತೆ ನಡೆದುಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನುಡಿದಂತೆ ನಡೆದುಕೊಳ್ಳುವ ಮೂಲಕ ರಾಜ್ಯದ ಎಲ್ಲಾ ವರ್ಗದ ಜನರಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ.

ಈಗ ಲೋಕಸಭಾ ಚುನಾವಣೆ ಬಂದಿದೆ. ವಿಧಾನಸಭಾ ಚುನಾವಣೆಯಲ್ಲಿ ಮನೆ ಮನೆಗೆ ಗ್ಯಾರಂಟಿ ಕಾರ್ಡ್‌ಗಳನ್ನು ಹಂಚಿದ್ದ ಕಾರ್ಯಕರ್ತರು, ಮುಖಂಡರು ಗ್ರಾಮದ ಪ್ರತಿ ಮನೆ ಮನೆಗೆ ತೆರಳಿ ಫಲಾನುಭವಿಗಳಿಗೆ ಸರ್ಕಾರದ ಯೋಜನೆ ಅನುಷ್ಠಾನ ಕುರಿತಂತೆ ಜಾಗೃತಿ ಮೂಡಿಸಿ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಹುಮತ ಸಿಗುವಂತೆ ಮಾಡಲು ಶಕ್ತಿಮೀರಿ ಪ್ರಯತ್ನ ಪಡಬೇಕು ಎಂದರು.

ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ ಕುಮಾರ್, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಸಿದ್ದಾರ್ಥ, ಸದಸ್ಯರಾದ ಟಿ.ಎಚ್.ಮಂಜುನಾಥ, ಓಂ ಪ್ರಕಾಶ್, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ, ವಕೀಲರ ಸಂಘದ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಸೋಸಲೆ ಪಿಎಸ್‌ಎಸ್ ಅಧ್ಯಕ್ಷ ಪರಶಿವಮೂರ್ತಿ, ಸೋಸಲೆ ಮಹಾದೇವಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಎಂ. ಶಿವರಾಂ, ಕೆಬ್ಬೆಹುಂಡಿ ಮಹೇಶ್, ಬೇಕರಿ ಸೋಮಣ್ಣ, ಡೇರಿ ಕಾರ್ಯದರ್ಶಿ ನಿಂಗಯ್ಯ, ವಕೀಲ ರಂಗನಾಥ್, ಗುತ್ತಿಗೆದಾರ ಕೆ.ಎಂ. ಮಧುಕುಮಾರ್, ಆಪ್ತ ಸಹಾಯಕ ಲಕ್ಷ್ಮೀನಾರಾಯಣ ಮತ್ತಿತರರಿದ್ದರು.

ಚಾಮರಾಜನಗರ ವ್ಯಾಪ್ತಿಯಲ್ಲಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಉದ್ಯಮಗಳ ಸ್ಥಾಪನೆ

ತಿ.ನರಸೀಪುರ, ಏ.10– ಚಾಮರಾಜನಗರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಿರುದ್ಯೋಗಿ ಯುವ ಸಮುದಾಯಕ್ಕೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ಆದ್ಯತೆ ನೀಡುವುದಾಗಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹೇಳಿದರು.

ತಾಲೂಕಿನ ಸೋಸಲೆ ಹೋಬಳಿ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ಪ್ರಚಾರದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉದ್ಯೋಗಕ್ಕಾಗಿ ಯುವಕರು–ಯುವತಿಯರು ನೆರೆ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದು ಕಂಡುಬಂದಿದೆ. ಸ್ಥಳೀಯವಾಗಿ ಅವರಿಗೆ ಉದ್ಯೋಗ ದೊರಕಿಸಲು ಒಂದು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಧ್ರುವನಾರಾಯಣ್ ಅವರು ಈ ಭಾಗದಲ್ಲಿ ಸಂಸದರಾಗಿ ಉತ್ತಮ ಕೆಲಸ ಮಾಡಿದ್ದಾರೆ. ಅವರ ಅಭಿವೃದ್ಧಿ ಕೆಲಸಗಳು ನಮಗೆ ವರದಾನವಾಗಲಿದೆ. ಅವರ ಹಾಗೆ ನಾವು ಕೂಡ ಉತ್ತಮವಾದ ಕೆಲಸವನ್ನು ಮಾಡುವಂತಹ ರೀತಿಯಲ್ಲಿ ಕಾರ್ಯನಿರ್ವಹಿಸುವುದಾಗಿ ಸುನೀಲ್ ಬೋಸ್ ತಿಳಿಸಿದರು.

ಪ್ರಸ್ತುತ ಇಂತಹ ಬೇಸಿಗೆಯ ಕಾಲದಲ್ಲಿ ಜನರು ದುಡಿಮೆಗೆ ಹೊರಬರಲು ಬಹಳ ಕಷ್ಟಕರವಾದಂತ ಪರಿಸ್ಥಿತಿ ಇದೆ. ಮಳೆ ಇಲ್ಲ, ನೀರು ಇಲ್ಲ, ವ್ಯವಸಾಯ ಕೃಷಿ ಚಟುವಟಿಕೆಗಳು ನಡೆಯುತ್ತಿಲ್ಲ. ಇಂತಹ ವೇಳೆ ನಮ್ಮ ಕಾಂಗ್ರೆಸ್ ಸರ್ಕಾರ ನೀಡಿರುವಂತಹ ಗ್ಯಾರಂಟಿ ಯೋಜನೆಗಳು ಜನರಿಗೆ ಸಹಕಾರಿಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು

ಯುವಕರು ದೇಶದ ಆಸ್ತಿ: ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಯುವಕರು ರಾಜಕೀಯ ಪಕ್ಷಗಳು ಸೇರುವುದು ಸೂಕ್ತ. ಇತ್ತೀಚಿನ ದಿನಗಳಲ್ಲಿ ನಮ್ಮ ಪಕ್ಷಕ್ಕೆ ಹೆಚ್ಚು ಯುವಕರು ಸೇರ್ಪಡೆಯಾಗುತ್ತಿರುವುದು ಬಹಳ ಸಂತೋಷ. ಯುವಕರು ರಾಜಕೀಯ ಪಕ್ಷದ ಒಳಗಡೆ ಇದ್ದಾಗ ಅವರಿಗೆ ವಾಸ್ತವ ಸಂಗತಿಗಳು ತಿಳಿಯುತ್ತವೆ. ಈ ಹಿನ್ನೆಲೆಯಲ್ಲಿ ಯುವಕರು ಚಿಂತನೆ ಮಾಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು. ಶ್ರೀನಿವಾಸ ಪ್ರಸಾದ್ ಅವರು 50 ವರ್ಷಗಳ ಸುದೀರ್ಘ ರಾಜಕಾರಣ ಮಾಡಿದಂತ ಹಿರಿಯ ರಾಜಕಾರಣಿ ಅವರ ಬಳಿ ನಾನು ಹೋಗಿ ಆಶೀರ್ವಾದ ಪಡೆದಿದ್ದೇನೆ. ನನಗೆ ಒಳ್ಳೆಯದಾಗಲಿ ಎಂದು ಆಶೀರ್ವದಿಸಿ ಕಳುಹಿಸಿದ್ದಾರೆ. ಅವರಿಗೆ ಅವರದೇ ಆದಂತ ಹಿತೈಷಿಗಳು ಮತ್ತು ಬೆಂಬಲಿಗರ ಪಡೆ ಇದೆ. ಅವರ ಸಹೋದರರು ಮತ್ತು ಕೆಲ ಬೆಂಬಲಿಗರು ಆಗಲೇ ನಮ್ಮ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಇದು ನಮ್ಮ ಕಾಂಗ್ರೆಸ್‌ಗೆ ಒಳ್ಳೆಯ ಬೆಳವಣಿಗೆಯಾಗಿದ್ದು, ಪಕ್ಷಕ್ಕೆ ಮತ್ತಷ್ಟು ಶಕ್ತಿ ಬಂದಿದೆ ಎಂದು ಹೇಳಿದರು.

ಇಂದು ಹೆಚ್.ಡಿ.ಕೋಟೆಯಲ್ಲಿ ಸಮನ್ವಯ ಸಭೆ

ಕಾಂಗ್ರೆಸ್ ಪಕ್ಷ ಕಿತ್ತೊಗೆಯಲು ತಂತ್ರಗಾರಿಕೆ



ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಶಂಭೇಗೌಡ ಮಾತನಾಡಿದರು.

ಹೆಚ್.ಡಿ.ಕೋಟೆ, ಏ.10– ರಾಜ್ಯದಲ್ಲಿ ದುರಾಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷವನ್ನು ಕಿತ್ತೊಗೆಯಲು ಪಕ್ಷಗಳ ಸಮನ್ವಯ ಸಭೆಕರೆಯಲಾಗಿದೆ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಶಂಭೇಗೌಡ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಪಟ್ಟಣದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ಕನಕ ಭವನದಲ್ಲಿ ಏಪ್ರಿಲ್ 11ರ ಬೆಳಗ್ಗೆ 11ಕ್ಕೆ ಶಾಸಕರಾದ ಜಿ.ಟಿ. ದೇವೇಗೌಡ, ಪ್ರೀತಂ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಮಹದೇವಸ್ವಾಮಿ, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ ನೇತೃತ್ವದಲ್ಲಿ ಈ ಸಭೆಯನ್ನು ಕರೆಯಲಾಗಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳು ಒಗ್ಗೂಡಿ ಈ ಬಾರಿಯ ಚುನಾವಣೆಯನ್ನು ಎದುರಿಸುತ್ತಿದ್ದು, ಕಾಂಗ್ರೆಸ್ ಪಕ್ಷವನ್ನು ಬೇರು ಸಮೇತ ಕಿತ್ತೊಗೆಯುವ ಯೋಜನೆಯೊಂದಿಗೆ ಚುನಾವಣೆ ತಂತ್ರಗಾರಿಕೆಯನ್ನು ರೂಪಿಸಿದ್ದು, ಈ ಹಿನ್ನೆಲೆಯಲ್ಲಿ ರಾಜ್ಯದಲ್ಲೇ ಮೊಟ್ಟಮೊದಲ ಬಾರಿಗೆ ಜೆಡಿಎಸ್ ಹಾಗೂ ಬಿಜೆಪಿಯ ಸಮನ್ವಯ ಸಭೆಯನ್ನು ಕರೆಯಲಾಗಿದೆ ಎಂದರು.

ಕನಕ ಭವನದಲ್ಲಿನ ಸಭೆಗೂ ಮುನ್ನ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಿಂದ ಕೋಟೆ ಪಟ್ಟಣದಲ್ಲಿರುವ ಕನಕ ಭವನಕ್ಕೆ ಮೆರವಣಿಗೆ ತಲುಪಲಿದ್ದು, ಬೈಕ್ ರ್‍ಯಾಲಿಯಲ್ಲಿ ಸಾವಿರಾರು ಬೈಕ್‌ಗಳಲ್ಲಿ ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.

ಜೆಡಿಎಸ್ ಅಧ್ಯಕ್ಷ ರಾಜೇಂದ್ರ, ಗೋಪಾಲಸ್ವಾಮಿ, ಓಕೆ ಮಹೇಂದ್ರ, ಪ್ರಕಾಶ್, ಶಿವಪ್ಪಶೆಟ್ಟಿ, ಬಿಜೆಪಿ ಸರಗೂರು ಅಧ್ಯಕ್ಷ ಕಂದಲಿಕೆ ಗುರುಸ್ವಾಮಿ, ಮಾಜಿ ಅಧ್ಯಕ್ಷ ಹಂಚಿಪುರ ಗುರುಸ್ವಾಮಿ ಇದ್ದರು.

ಹುಣಸೂರು ಸರ್ಕಾರಿ ಬಾಲಕಿಯರ ಕಿರಿಯ ಕಾಲೇಜಿಗೆ ಶೇ.84ರಷ್ಟು ಫಲಿತಾಂಶ



ಅರ್ಪಿತ



ರಿಷನಾ



ಕೀರ್ತನಾ.ಎಂ



ಅಮೃತಾ. ಆರ್

ಹುಣಸೂರು, ಏ.10– ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯ ಫಲಿತಾಂಶದಲ್ಲಿ ಹುಣಸೂರಿನ ಸರ್ಕಾರಿ ಬಾಲಕಿಯರ ಕಿರಿಯ ಕಾಲೇಜು ಶೇ.84.58 ರಷ್ಟು ಉತ್ತಮ ಫಲಿತಾಂಶ ಪಡೆದಿದೆ ಎಂದು ಕಾಲೇಜಿನ ಪ್ರಾಂಶುಪಾಲ ರಾಮೇಗೌಡ ತಿಳಿಸಿದ್ದಾರೆ.

62 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 270 ಪ್ರಥಮ ದರ್ಜೆ, 88 ದ್ವಿತೀಯ ದರ್ಜೆ ಹಾಗೂ 45 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ ಎಂದರು. ವಿಜ್ಞಾನ ವಿಭಾಗದಲ್ಲಿ ಕೀರ್ತನಾ.ಎಂ 600ಕ್ಕೆ 572, ವಾಣಿಜ್ಯ ವಿಭಾಗದಲ್ಲಿ ರಿಷನಾ ಮತ್ತು ಅರ್ಪಿತ ತಲಾ 600ಕ್ಕೆ 577 ಅಂಕಗಳನ್ನು ಪಡೆದುಕೊಂಡರೆ, ಕಲಾ ವಿಭಾಗದಲ್ಲಿ ಅಮೃತಾ. ಆರ್ 600ಕ್ಕೆ 570 ಅಂಕಗಳನ್ನು ಪಡೆದುಕೊಂಡು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಗೆ ಶೇ.96ರಷ್ಟು ಫಲಿತಾಂಶ

ಮಾನಸ ತಾಲೂಕಿಗೆ ಟಾಪರ್



ಮಾನಸ



ಸ್ನೇಹ



ಪ್ರೀತಿ

ಹೆಚ್.ಡಿ.ಕೋಟೆ, ಏ.10– ಪಟ್ಟಣದ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ.96ರಷ್ಟು ಫಲಿತಾಂಶ ಪಡೆದಿದ್ದು, ವಿಜ್ಞಾನ ವಿಭಾಗದಲ್ಲಿ ಮಾನಸ ತಾಲೂಕಿಗೆ ಪ್ರಥಮ ಸ್ಥಾನ ಗಳಿಸಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 78 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ, 187 ವಿದ್ಯಾರ್ಥಿಗಳು ಪ್ರಥಮ ದರ್ಜೆ, 21 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ವಿಜ್ಞಾನ ವಿಭಾಗದಲ್ಲಿ 99 ವಿದ್ಯಾರ್ಥಿಗಳಲ್ಲಿ 98 ಪಾಸಾಗಿದ್ದು, ಕಲಾ ವಿಭಾಗದಲ್ಲಿ 95 ವಿದ್ಯಾರ್ಥಿಗಳಿಗೆ 85 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವಾಣಿಜ್ಯ ವಿಭಾಗದಲ್ಲಿ 125 ವಿದ್ಯಾರ್ಥಿಗಳಿಗೆ 123 ವಿದ್ಯಾರ್ಥಿಗಳು ತೇರ್ಗಡೆಗೊಂಡಿದ್ದಾರೆ. ವಿಜ್ಞಾನ ವಿಭಾಗದಲ್ಲಿ ತಾಲೂಕಿಗೆ ಮಾನಸ 575 ಅಂಕ ಪಡೆದು ಪ್ರಥಮ ಸ್ಥಾನ ಗಳಿಸಿದ್ದಾರೆ. ಕಲಾ ವಿಭಾಗದಲ್ಲಿ ಪ್ರೀತಿ 571 ಅಂಕ, ವಾಣಿಜ್ಯ ವಿಭಾಗದಲ್ಲಿ ಸ್ನೇಹ 581 ಅಂಕ ಪಡೆದು ಶಾಲೆಗೆ ಪ್ರಥಮರಾಗಿದ್ದಾರೆ. ಸಂಸ್ಥೆಯು ಉತ್ತಮ ಅಂಕ ಪಡೆಯುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ ಎಂದು ಸಂಸ್ಥೆ ತಿಳಿಸಿದೆ.

ದಿಶಾ. ಎಂ ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ನಂಜನಗೂಡು, ಏ.10– ನಂಜನಗೂಡು ತಾಲೂಕಿನ ಮಲ್ಕುಂಡಿ ಗ್ರಾಮದ ಮಂಜುನಾಥ್ ಎಂ.ಎಸ್ ಅವರ ಪುತ್ರಿ ದಿಶಾ. ಎಂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 567 (ಶೇ.95) ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆ ಮೈಸೂರಿನ ಜಯಚಾಮ ರಾಜೇಂದ್ರ ಪಿಯು ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರು.

ಮೂಗೂರಲ್ಲಿ ವಿಜೃಂಭಣೆಯ ರಾಕಸಮ್ಮ ರಥೋತ್ಸವ



ಮೂಗೂರು, ಏ.10– ಹೊಸ ಸಂವತ್ಸರದ ಸಂಭ್ರಮದ ಯುಗಾದಿ ಹಬ್ಬದಂದು ಗ್ರಾಮದ ಶ್ರೀ ರಾಕಸಮ್ಮನವರ ರಥೋತ್ಸವವು ಮೂಗೂರಿನಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಹಬ್ಬದ ಹಿನ್ನೆಲೆಯಲ್ಲಿ ದೇಗುಲದಿಂದ ರಥ ಸಾಗುವ ದಾರಿಯುದ್ದಕ್ಕೂ ತಳಿರು–ತೋರಣ ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಗಿನ ಜಾವ ದೇಗುಲದಲ್ಲಿ ಅಮ್ಮನವರಿಗೆ ಅಭಿಷೇಕ, ವಿಶೇಷ ಪೂಜೆಗಳು, ಧಾರ್ಮಿಕ ಕಾರ್ಯಗಳು ಸಾಂಘೀಕವಾಗಿ ನಡೆದವು. ಎಂದಿ ನಂತೆ ಶ್ರೀ ರಾಕಸಮ್ಮನ ಉತ್ಸವ ಮೂರ್ತಿಯನ್ನು ಕಾವೇರಿ ಕಪಿಲಾ ನದಿಯ ದಡದಲ್ಲಿ ಹೋಮ ನಡೆಸಿ ಪೂಜೆ ಸಲ್ಲಿಸಲಾಯಿತು. ನಂತರ ಹೋವಮದ (ತೀರ್ಥ) ನೀರಿನಲ್ಲಿ ಅಮ್ಮನವರಿಗೆ ದೇವಾಲಯ ದಲ್ಲಿ ಅಭಿಷೇಕ ಮಾಡಿದ ಬಳಿಕ ವಿವಿಧ ಬಗೆಯ ಹೂವಿನಿಂದ ಅಲಂಕಾರ ಮಾಡಲಾಗಿತ್ತು. ರಾತ್ರಿ 10 ಗಂಟೆಯ ನಂತರ ವಿಶೇಷ ಪೂಜೆಯೊಂದಿಗೆ ರಥೋತ್ಸವಕ್ಕೆ ಚಾಲನೆ ದೊರೆಯಿತು. ಸಾವಿರಾರು ಮಂದಿ ರಥೋತ್ಸವದಲ್ಲಿ ಪಾಲ್ಗೊಂಡು ದಾರಿಯುದ್ದಕ್ಕೂ ಭಕ್ತರು ಹರಕೆ ಸಲ್ಲಿಸಿ ನಮಿಸಿದರು. ರಾಕಸಮ್ಮನ ದೇವಾಲಯದ ಬಳಿ ಹಾಗೂ ಅಲ್ಲಲ್ಲಿ ಭಕ್ತರಿಂದ ಪ್ರಸಾದ ವಿನಿಯೋಗ ನಡೆಯಿತು.

ವೀರಭದ್ರೇಶ್ವರ ಸ್ವಾಮಿಯ ಉತ್ಸವ: ಯುಗಾದಿ ಹಬ್ಬದ ಅಂಗವಾಗಿ ವೀರಭದ್ರೇಶ್ವರ ಸ್ವಾಮಿಯ ಹುಲಿ ವಾಹನ ಉತ್ಸವವು ಬಸವನ ಮೆರವಣಿಗೆ ಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಗೌಡರ ಬೀದಿ ಮುಖಂಡರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
---	---
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ.10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ
ಸ್ಕ್ರೀನ್ 2	ಯುವ (ಕ): ಬೆ.9.30ಕ್ಕೆ ಮ.12.45ಕ್ಕೆ ಸಂ.6.45ಕ್ಕೆ ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಿರೀಕ್ಯಾತನಹಳ್ಳಿಯಲ್ಲಿ ವೈಭವದ ಮಲ್ಲಿಕಾರ್ಜುನಸ್ವಾಮಿ ಉತ್ಸವ



ಭಕ್ತನೋರ್ವ ಕೊಂಡೋತ್ಸವದಲ್ಲಿ ಭಾಗಿಯಾಗಿ ಹರಕೆ ತೀರಿಸಿದರು.

ಹಿರೀಕ್ಯಾತನಹಳ್ಳಿ, ಏ.10– ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬದ ಮೂರು ದಿನ ಗ್ರಾಮ ದೇವತೆಯ ಶ್ರೀ ಮಲ್ಲಿಕಾರ್ಜುನಸ್ವಾಮಿ ಉತ್ಸವ ವಿಜೃಂಭಣೆಯಿಂದ ನಡೆಯಿತು.

ದೇವರ ಉತ್ಸವವನ್ನು ಕೊಂಬು, ಕಹಳೆ, ವಾದ್ಯಗಳೊಂದಿಗೆ ರಾತ್ರಿಯಿಂದ ಬೆಳಗಿನ ಜಾವದವರೆಗೂ ನಡೆಸಲಾಯಿತು. ಬೀದಿಗಳಲ್ಲಿ ರಂಗೋಲಿ, ತಳಿರು–ತೋರಣಗಳಿಂದ ಸಿಂಗರಿಸಲಾಗಿತ್ತು. ಯುಗಾದಿ ಸಂಭ್ರಮದೊಂದಿಗೆ ಮಿಳಿತಗೊಂಡ ಉತ್ಸವ ಮುದ ನೀಡಿತು.

ದಶಕಗಳ ಸಂಪ್ರದಾಯದಂತೆ ಗ್ರಾಮದ ಪ್ರತಿ ಮನೆಯವರು ಜಾತಿಭೇದ ಮರೆತು ಯುಗಾದಿ ಹಬ್ಬದ ಹಿಂದಿನ ದಿನ ರಾತ್ರಿ ಗ್ರಾಮದ ಸುಮಾರು 1 ಸಾವಿರಕ್ಕೂ ಹೆಚ್ಚು ಜನ ಉತ್ಸವಮೂರ್ತಿಯನ್ನು ಅಡಿಕೆ ಹಾಳೆ ಬುತ್ತಿಯೊಂದಿಗೆ ಬರಿಗಾಲಿನಲ್ಲಿ 18 ಕಿಲೋ ಮೀಟರ್ ದೂರದ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಗೆ ತಂದು ಕಾವೇರಿ ನದಿಯಲ್ಲಿ ಸ್ನಾನ ಮಾಡಿ ಉತ್ಸವ ಮೂರ್ತಿಯನ್ನು ಸ್ವಚ್ಛಗೊಳಿಸಿ ಪೂಜೆ ಸಲ್ಲಿಸಿದರು.

ನಂತರ ತಂದಿದ್ದ ಬುತ್ತಿಯನ್ನು ಪರಸ್ಪರ ಹಂಚಿಕೊಂಡು ತಿಂದರು. ಶ್ರೀರಾಮ ದೇವರ ದರ್ಶನ ಪಡೆದು ಆನಂತರ ಉತ್ಸವ ಮೂರ್ತಿಯನ್ನು ಶ್ರೀರಾಂಪುರ, ಕೆಸ್ತೂರು ಕೊಪ್ಪಲು, ಮಳಲಿ, ಮಾವತ್ತೂರು, ಶೀರೆನಹಳ್ಳಿ ಗ್ರಾಮಗಳ ಮೂಲಕ ಮೆರವಣಿಗೆಯಲ್ಲಿ ತರುವರು. ದಾರಿಯುದ್ದಕ್ಕೂ ಗ್ರಾಮಸ್ಥರು ಪೂಜೆ ಸಲ್ಲಿಸಿದರು. ಗ್ರಾಮಕ್ಕೆ ಬಂದ ವೇಳೆ ನೂರಾರು ಮಹಿಳೆಯರು ಪಾನಕ ಮಜ್ಜಿಗೆ ನೀಡಿ ಸ್ವಾಗತಿಸಿ ಮೂರ್ತಿಗೆ ಪೂಜೆ ಸಲ್ಲಿಸಿದರು.

ಹೊಸ ಪಂಚಾಂಗ ವೀಕ್ಷಣೆ: ಇನ್ನು ಗ್ರಾಮದಲ್ಲಿ ದೇವಸ್ಥಾನದ ಮುಂದೆ ಪಕ್ಕದ ಗ್ರಾಮದ ಮೈಲಾಂಬೂರು ಚಂದ್ರ ಆರಾಧ್ಯ ಅವರಿಂದ ಹೊಸ ಪಂಚಾಂಗವನ್ನು ನೋಡಲಾಯಿತು. ಇದರ ಉದ್ದೇಶ ಯಾರಿಗೆ ಯಾವ ರಾಶಿ ಫಲ ಗುರುಬಲ ಹೇಗಿದೆ ಎಂಬುದನ್ನು ನೋಡಿಕೊಳ್ಳಲು ಜನರು ಪಂಚಾಂಗ ವೀಕ್ಷಣೆ ಮಾಡಿದರೆ, ಇನ್ನು ಹೊನ್ನಾರು ಕಟ್ಟಲು ಎತ್ತುಗಳು ಯಾವ ಯಾವ ಬಣ್ಣದ ಹಾಗೂ ಯಾರ ಹೆಸರಿಗೆ ಗುರು ಬಲ ಚೆನ್ನಾಗಿದೆ. ಯಾರು ರೈತರು ಹೆಸರಿನ ರೈತ ಉಳುಮೆ ಮಾಡಿದರೆ ಒಳಿತಾಗುವುದು ಎಂಬುದನ್ನು ನೋಡಿದರು.

ಹೊನ್ನಾರು: ನಿಯಮದಂತೆ ಗ್ರಾಮ ಸಮೀಪದ ಮೈಲಾಂಬೂರಿನ ಚಂದ್ರ ಆರಾಧ್ಯ ಪಂಚಾಂಗ ಪಠಣ ಮಾಡಿದರು. ಅವರ ಸೂಚನೆಯಂತೆ ಗ್ರಾಮದ ಚೇತನ್ ಎಂಬುವವರು ಹೆಸರಿಗೆ ರಾಶಿ ಫಲ ಚೆನ್ನಾಗಿದ್ದು, ತಲೆಗೆ ಮುಂಡಾಸು ಕಟ್ಟಿಕೊಂಡು ಬಿಳಿ ಬಣ್ಣದ ಕಂದು ಮಿಶ್ರಿತ ಎತ್ತುಗಳ ಮೂಲಕ ವಾದ್ಯಗಳು ಪ್ರದಕ್ಷಿಣೆ ಹಾಕಿ ದೇವಸ್ಥಾನಕ್ಕೆ ವಾಪಸ್ಸಾದರು. ಈ ರೀತಿ ಮಾಡುವುದರಿಂದ ಗ್ರಾಮಕ್ಕೆ ಒಳ್ಳೆ ಮಳೆ ಬೆಳೆಯಾಗುತ್ತದೆ ಎಂಬ ವಾಡಿಕೆ.

ಕೊಂಡೋತ್ಸವ: ಇನ್ನು ಬುಧವಾರ ಮುಂಜಾನೆ ದೇವಸ್ಥಾನದ ಆವರಣದಲ್ಲಿ ಮಲ್ಲಿಕಾರ್ಜುನ ಸ್ವಾಮಿ, ಕೊಳ್ಳಿ ಮಲ್ಲಪ್ಪ, ಮಾದೇಶ್ವರ ಸ್ವಾಮಿ, ಪಟ್ಟಲದಮ್ಮ, ಚಿಕ್ಕಮ್ಮ, ಕನ್ನಂಮಾಡಮ್ಮ ದೇವರನ್ನು ಹೊತ್ತ ಭಕ್ತರು ದೇವರ ಉದ್ಘೋಷದೊಂದಿಗೆ ಕೊಂಡ ಕಾಯುತ್ತಿದ್ದಂತೆ ನೂರಾರು ಭಕ್ತರು ಕೂಡ ಹಾಯ್ದರು. ಎಲ್ಲಾ ಗ್ರಾಮದ ಎಲ್ಲಾ ಕೋಮಿನ ಯಜಮಾನರು, ಯುವಕರು ಸೇರಿದಂತೆ ಸಮಾಜದ ಮುಖಂಡರು ಈ ಹಬ್ಬದ ಯಶಸ್ಸಿಗೆ ದುಡಿದರು.

ಚಿಕ್ಕದೇವಮ್ಮನ ಬೆಟ್ಟದಲ್ಲಿ ವೈಭವದ ಯುಗಾದಿ ಪೂಜಾ ಮಹೋತ್ಸವ





ಶ್ರೀ ಚಿಕ್ಕದೇವಮ್ಮನ ಬೆಟ್ಟದ ಹಾಲುಗಡ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಸಹಸ್ರಾರು ಭಕ್ತರು ಸಾಕ್ಷಿಯಾದರು.

ಸರಗೂರು, ಏ.10– ತಾಲೂಕಿನ ಶಕ್ತಿದೇವತೆ ಶ್ರೀ ಚಿಕ್ಕದೇವಮ್ಮನ ಬೆಟ್ಟದಲ್ಲಿ ಯುಗಾದಿ ಅಂಗವಾಗಿ ಜಾತ್ರಾ ಪೂಜಾ ಮಹೋತ್ಸವ, ಕಪಿಲ ನದಿ ದಡದ ಹಾಲುಗಡು ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ಸಹಸ್ರಾರು ಭಕ್ತರು ಸಾಕ್ಷಿಯಾದರು.

ಚಂದ್ರಮಾನ ಯುಗಾದಿ ಹಬ್ಬದ ದಿನದಂದು ಬೆಳಿಗ್ಗೆಯೇ ದೇವತೆಗೆ ವಿಶೇಷ ಪೂಜೆ ಸಲ್ಲಿಸಿ, ಶ್ರೀ ಚಿಕ್ಕದೇವ ಮ್ಮನ ಬೆಟ್ಟದಿಂದ ಅಮ್ಮನವರು ಹಾಗೂ ಶಿವ ಪಾರ್ವತಿ ಉತ್ಸವ ಮೂರ್ತಿಯನ್ನು ಕರೆತಂದು ನದಿ ಬಳಿಯ ಹಾಲುಗಡುವಿನ ಜಪದಕಟ್ಟೆಯಲ್ಲಿ ಕೂರಿಸಿ, ವಿಶೇಷ ಪೂಜೆ ಸಲ್ಲಿಸಲಾಯಿತು.

ಜಪದಕಟ್ಟೆಯಲ್ಲಿ ಕೂರಿಸಿದ ಬಳಿಕ ದೇವರಿಗೆ ಹೋಮ–ಹವನಗಳು ನಡೆದವು. ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ವಾದ್ಯ ಗೋಷ್ಠಿಗಳು ಮೊಳಗಿದವು. ಸುಮಾರು 10ಕ್ಕೂ ಹೆಚ್ಚು ಸತ್ತಿಗೆಗಳು ಮೆರವಣಿಗೆ ನಡೆಸಲಾಯಿತು. ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಹರಕೆಯನ್ನು ತೀರಿಸಿದರು.

ಡಿವೈಎಸ್ಪಿ ಗೋಪಾಲಕೃಷ್ಣ, ಸರಗೂರಿನ ಪೊಲೀಸ್ ವೃತ್ತ ನಿರೀಕ್ಷಕ ಎಂ.ಲಕ್ಷ್ಮಿಕಾಂತ, ಪಿಎಸ್‌ಐಗಳಾದ ಎಂ.ಸಿ.ಮಧು ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಜಾತ್ರಾ ಸಮಿತಿಯಿಂದ ಜಾತ್ರಾವರಣದಲ್ಲಿ ಯಾವುದೇ ಪ್ರಾಣಿಬಲಿ ಮಾಡದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಜಾಗೃತಿ ಮೂಡಿಸಿದ್ದು, ಪ್ರಾಣಿಬಲಿ ಆಗದಂತೆ ತಡೆಹಿಡಿಯುವಲ್ಲಿ ಯಶಸ್ವಿಯಾದರು.

ಹರಕೆ ಹೊತ್ತ ಭಕ್ತರು ತಲೆ ಮುಡಿ ಮಾಡಿಸಿದರು. ಅಂಗಡಿ ಮುಂಗಟ್ಟುಗಳು ಇದ್ದವು. ಬೆಟ್ಟದ ಬರುವ ಭಕ್ತರಿಗೆ ಖಾಸಗಿ ವಾಹನಗಳನ್ನು ನಿಷೇಧಿಸಿ, ಹ್ಯಾಂಡ್ ಪೋಸ್ಟ್, ಸರಗೂರಿನಿಂದ ವಾಹನದ ವ್ಯವಸ್ಥೆ ಮಾಡಲಾಗಿತ್ತು.

ಜಾತ್ರಾ ಮಹೋತ್ಸವಕ್ಕೆ ಸಾವಿರಾರು ಭಕ್ತರು ಆಗಮಿಸಿ ದೇವತೆ ದರ್ಶನ ಪಡೆದು ಪುನೀತರಾದರು. ಮುಜರಾಯಿ ಇಲಾಖೆಯ ಇಒ ರಘು, ಪಾರುಪತ್ತೇದಾರ ಶಾಂತಿಪುರ ಮಹದೇವಸ್ವಾಮಿ, ಬೆಟ್ಟದ ಅರ್ಚಕರಾದ ಶಿವಕುಮಾರ್, ಪ್ರಸನ್ನ, ಮನು, ಚಿಕ್ಕದೇವಣ್ಣ, ನಿಂಗಣ್ಣ ಶಾಸ್ತ್ರಿ, ಸಿದ್ದಲಿಂಗಸ್ವಾಮಿ, ಮಹದೇವಸ್ವಾಮಿ, ವೀರಣ್ಣ ಮಣಿಕಂಠ, ಮನು, ರವಿ, ದೇವಣ್ಣ, ಲಿಂಗಪ್ಪ, ಸಂತೋಷ್, ನಾಗಣ್ಣ ಪೂಜಾ ವಿಧಿವಿಧಾನ ಕಾರ್ಯಗಳಲ್ಲಿ ಭಾಗಿಯಾಗಿದ್ದರು. ಇನ್ನು ಹಾಲುಗಡ ಜಾತ್ರಾ ಕಮಿಟಿ ಪದಾಧಿಕಾರಿಗಳು, ಬೆಟ್ಟದ ಸುತ್ತ–ಮುತ್ತಲಿನ ಗ್ರಾಮಸ್ಥರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ಭಾಗಿಯಾಗಿದ್ದರು.

ಶಿವಣ್ಣ ನಿಧನ



ಮಲ್ಕುಂಡಿ, ಏ.10– ಸಮೀಪದ ಅಂಬಳೆ ಗ್ರಾಮದ ನಿವಾಸಿ ಶಿವಣ್ಣ(64) ಮಂಗಳವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಅಂಬಳೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಈ ವರ್ಷ ಭಾರತದಲ್ಲಿ ಸಾಮಾನ್ಯ ಮುಂಗಾರು

ಕರ್ನಾಟಕದಲ್ಲಿ ವ್ಯಾಪಕ ಮಳೆ ನಿರೀಕ್ಷೆ



ನವದೆಹಲಿ, ಏ. 10–ಖಾಸಗಿ ಹವಾಮಾನ ಸಂಸ್ಥೆ ಸ್ಕೈಮೆಟ್ ಹಾಲಿ ವರ್ಷದ ಹವಾಮಾನ ವರದಿ ನೀಡಿದ್ದು, ಈ ಬಾರಿ ಭಾರತದಲ್ಲಿ ಸಾಮಾನ್ಯ ಮುಂಗಾರು ಮಳೆಯಾಗಲಿದೆ ಎಂದು ಹೇಳಿದೆ.

ಈ ವರ್ಷ ಜೂನ್ ಮತ್ತು ಸೆಪ್ಟೆಂಬರ್ ನಡುವೆ ಭಾರತವು 'ಸಾಮಾನ್ಯ' ಮಾನ್ಸೂನ್ ಅನ್ನು ಅನುಭವಿಸುವ ನಿರೀಕ್ಷೆ ಇದೆ. ಮುಂಗಾರು ಮಳೆ ಶೇಕಡಾ 102ರಷ್ಟು ಆಗುವ ನಿರೀಕ್ಷೆಯಿದ್ದು, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮಧ್ಯ ಮತ್ತು ಪಶ್ಚಿಮ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಸಾಮಾನ್ಯ ಮಳೆಯಾಗಲಿದೆ. ಈಶಾನ್ಯ ಭಾರತ ಮತ್ತು ಪೂರ್ವ ಭಾಗಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಖಾಸಗಿ ಹವಾಮಾನ ಮುನ್ಸೂಚನೆ ಸಂಸ್ಥೆ ಸ್ಕೈಮೆಟ್ ಮಂಗಳವಾರ ತನ್ನ ವರದಿಯಲ್ಲಿ ತಿಳಿಸಿದೆ.

ವರದಿಯು ದೇಶದ ದಕ್ಷಿಣ, ಪಶ್ಚಿಮ ಮತ್ತು ವಾಯುವ್ಯ ಪ್ರದೇಶಗಳಲ್ಲಿ ಅನುಕೂಲಕರವಾದ ಮಳೆಯಾಗಲಿದೆ ಎಂದು ಸೂಚಿಸಿದೆ. ಮಳೆಯಾಶ್ರಿತ ಪ್ರದೇಶಗಳಾದ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಸಾಕಷ್ಟು ಮಳೆಯಾಗುವ ನಿರೀಕ್ಷೆಯಿದೆ. ಆದರೆ ಬಿಹಾರ, ಜಾರ್ಖಂಡ್, ಒಡಿಶಾ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಪೂರ್ವ ರಾಜ್ಯಗಳು ಗರಿಷ್ಠ ಮಾನ್ಸೂನ್ ತಿಂಗಳುಗಳಲ್ಲಿ ಮಳೆ ಕೊರತೆ ಅಪಾಯ ಎದುರಿಸಲಿವೆ.

ಕರ್ನಾಟಕ, ಕೇರಳ, ತಮಿಳುನಾಡಿನಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆ: ಈಶಾನ್ಯ ಭಾರತದಲ್ಲಿ ಋತುವಿನ ಮೊದಲಾರ್ಧದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಲಿದ್ದು, ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಗೋವಾದಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ ಮತ್ತು ಕೇಂದ್ರ ಭಾಗಗಳಲ್ಲಿ ಸಾಮಾನ್ಯ ಮಳೆಯಾಗಲಿದೆ ಎಂದು ಸ್ಕೈಮೆಟ್ ತಿಳಿಸಿದೆ.

ವೃಕ್ಷರಾಜ ನಾಟಕ ಪ್ರದರ್ಶನ

ಮೈಸೂರು,ಏ.10– ರಂಗಾಯಣದ ಭಾರತೀಯ ರಂಗಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಹೈಸ್ನಾಮ್ ತೋಂಬಾ ನಿರ್ದೇಶನದಲ್ಲಿ ಏ.14 ರಿಂದ ಪ್ರತಿ ಭಾನುವಾರ ಸಂಜೆ 6.30 ಗಂಟೆಗೆ 'ವೃಕ್ಷರಾಜ' ನಾಟಕ ಪ್ರದರ್ಶನವನ್ನು ರಂಗಾಯಣದ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.